# ಅಖಿಲ ಭಾರತ ಪತ್ರಿಕೆ

## ಸೆಪ್ಟೆಂಬರ್ 2021



# ವನ್ಯಜೀವಿಗಳ ಸೌಂದರ್ಯ

ಬೆಲೆ : 15/-



ಲೋಕಾತಿಲೋಕದಾಚೆ ಚಿಲ್ಲೋಕದವಕಾಶದಂತರಿಕ್ಷ
ಅವನ ಮನಕಿಂದುಪಾಧಿಗಳ ಬಂಧ, ಊರ್ಧ್ವದಲಿ ಇಂದು ಸಾಕ್ಷ್ಯ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 25)**

**ಫೋಟೋ: ಇಮೇಜಿಂಗ್ ಸಾವಿತ್ರಿ**

**ಅಖಿಲ ಭಾರತ ಪತ್ರಿಕೆ**
**ಸೆಪ್ಟೆಂಬರ್ 2021**

ಸಂಪುಟ: 31 ಸಂಚಿಕೆ: 09

**ಪರಿವಿಡಿ**

# ವನ್ಯಜೀವಿಗಳ ಸೌಂದರ್ಯ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಮಹಾಲಕ್ಷ್ಮೀ** 3
ಅನು: ಶ್ರೀ ಪುಟ್ಟು ಕುಲಕರ್ಣಿ

**ಪ್ರಾಣಿ ಪ್ರಭೇದಗಳು** 4
ಅನು: ಡಾ॥ ಮಹಾದೇವ ಸಕ್ರಿ

**ಮಾನವ ಮತ್ತು ಪ್ರಾಣಿ** 14
ಅನು: ಪ್ರೊ. ವೀರಭದ್ರಪ್ಪ ಕೆ.

**ಪ್ರಾಣಿಗಳೊಡನೆ ಒಡನಾಟ** 20
**ಶ್ರೀಮಾತೆ ಮತ್ತು ಪ್ರಾಣಿಗಳು** 25
ಅನು: ನಾಗಜ್ಯೋತಿ ಎಲಿವಾರ

**ಪ್ರಾಣಿಗಳ ಕುರಿತು ನೆನಪುಗಳು** 26
ಅನು: ಡಾ॥ ಬಿ ಆರ್ ಭೀಡ

**ಶ್ರೀ ಅರವಿಂದರ 'ವೇದ ರಹಸ್ಯ'** 36
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 44
ಅನು: ಜಾನ್ವಿ

**ಶ್ರೀ ಅರವಿಂದರ "ಋಗ್ವೇದದ ಪ್ರಥಮ ಋಕ್"** 55
ಅನು: ಪುಟ್ಟು ಕುಲಕರ್ಣಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು** 64
– ಡಾ॥ ಶಂ.ಬಾ. ಜೋಶಿ

**ಶ್ರೀ ಅರವಿಂದರು–150**
**ಸಾಧಕರು: ಶ್ರೀ ಎಂ.ಪಿ. ಪಂಡಿತ**
– ಶ್ರೀ ವಾಸುದೇವ ಸೋಂದೆ 70

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

ಜೀವನದ ಬಗೆಗೆ ಮಾನವನು ಕೇವಲ 'ಮನುಷ್ಯ ಕೇಂದ್ರಿತ'ವಾಗಿರುವ ದೃಷ್ಟಿಕೋನವನ್ನು ಮಾತ್ರ ಹೊಂದಿದ್ದಾನೆ. ನಮಗೆ ನಾವೇ, ಈ ಭೂಮಿಯಲ್ಲಿ ಮಾನವನು ಮಾತ್ರ ಶ್ರೇಷ್ಠಜೀವಿ ಹಾಗೂ ಔನ್ನತ್ಯವನ್ನು ಸಾಧಿಸಿದ ಜೀವಿ ಎಂದು ಪರಿಗಣಿಸಿಕೊಂಡಿದ್ದೇವೆ. ಅದೂ ಅಲ್ಲದೇ ಭೂಮಿಯಲ್ಲಿ ಲಭ್ಯವಿರುವ ಸಂಪನ್ಮೂಲಕ್ಕೆ ಸಂಪೂರ್ಣ ಹಕ್ಕನ್ನೂ ಹೊಂದಿದ್ದೇವೆ ಪರಿಭಾವಿಸಿಕೊಂಡಿದ್ದೇವೆ.

ಈ ಭೂಮಿಯ ಮೇಲೆ ಇರುವ ಪ್ರತಿಯೊಂದೂ ಪ್ರಾಣಿ ವರ್ಗ ಹಾಗೂ ಸರ್ವ ವಸ್ತುಗಳೂ ಸಹಿತ ನಮ್ಮ ಸಂತೋಷಕ್ಕಾಗಿಯೇ ಇರುತ್ತವೆ ಎಂದು ನಂಬಿಕೊಂಡಿದ್ದೇವೆ. ನಾವೇ ಈ ಎಲ್ಲದಕ್ಕೂ ಕೇಂದ್ರಬಿಂದು ಎಂದುಕೊಂಡಿದ್ದಷ್ಟೇ ಅಲ್ಲದೇ ದೇವರೂ ಸಹಿತ ನಮ್ಮ ಸಲುವಾಗಿಯೇ ಇವುಗಳನ್ನು ರೂಪಿಸಿ "ಪೂರೈಕೆ ಮಾಡುವ ಹಾಗೂ ಸಂತೋಷ ಹೆಚ್ಚಿಸುವ"ವನಂತೆಯೇ ಪರಿಗಣಿಸಿಕೊಂಡಿದ್ದೇವೆ. ಈ ರೀತಿಯ ಅಜ್ಞಾನ ಮತ್ತು ಅಹಂಕಾರದ ಮನೋಭಾವವೇ ಈ ಭೂಮಿಯಲ್ಲಿ ತಲ್ಲಣಗಳನ್ನು ಸೃಷ್ಟಿಸಲು ಕಾರಣವಾಗಿದೆ. ಮಾನವನಿಂದಲೇ ರೂಪಿತಗೊಂಡಿರುವ ಅಸಮತೋಲನದ ಕ್ರಿಯೆಗಳಿಂದಾಗಿ, ಹಾಗೂ ಕ್ರೌರ್ಯದಿಂದ, ಕುರೂಪಗೊಳ್ಳುತ್ತಿರುವ "ಪ್ರಕೃತಿಯು" ಆಗಾಗ ಇದನ್ನು ತಹಬಂದಿಗೆ ತಂದುಕೊಂಡು ಸೂಕ್ತಗೊಳಿಸಿಕೊಳ್ಳುತ್ತದೆ. ಅದಕ್ಕಾಗಿ ಪ್ರಕೃತಿಯು ತನ್ನದೇ ಆದ ವಿಧಾನಗಳನ್ನೂ ಅಳವಡಿಸಿಕೊಳ್ಳುತ್ತದೆ.

ಆದಾಗ್ಯೂ ಈ ಭೂಮಿಯು ಸಸ್ಯಗಳಿಗೆ ಹಾಗೂ ಪ್ರಾಣಿಗಳಿಗೂ ಸಹಿತ ಬದುಕಲು ಇರುವ ತಾಣವಾಗಿದೆ. ಅವುಗಳಿಗೂ ಸಹಿತ ಈ 'ಹಕ್ಕು' ಇರುತ್ತದೆ. ಇದನ್ನು ಮಾನವನು ಅರಿತುಕೊಳ್ಳಬೇಕಿದೆ. ಏಕೆಂದರೆ ಇವುಗಳೇ ಮಾನವರಿಗಿಂತ ಪ್ರಕೃತಿಯನ್ನು ಅತ್ಯಂತ ದಿವ್ಯತ್ವಭಾವದಿಂದಲೇ ಗೌರವಿಸುತ್ತಿವೆ.

ಈ ರೀತಿಯ ಪ್ರಕೃತಿ–ಪ್ರಾಣಿ ಸಂಬಂಧದ ಕುರಿತು ಉದ್ಬೋಧಕವಾದ ಸಂಗತಿಗಳಿಂದ ಕೂಡಿದ ದೃಷ್ಟಾಂತಗಳನ್ನು ಹಾಗೂ ಶ್ರೀಮಾತೆಯವರು ಪ್ರಾಣಿಗಳ ಬಗೆಗೆ ತೋರಿರುವ ಮಮತೆಯ ಕುರಿತಾದ ಸಂಗತಿಗಳ ಬಗೆಗೆ ಈ ಸಂಚಿಕೆ ರೂಪಿಸಲ್ಪಟ್ಟಿದೆ. (ಎಐಎಮ್)

*



**ಮಹಾಲಕ್ಷ್ಮೀ – ಸರ್ವಾತ್ಮ ಪ್ರೇಮಮಯಿ**

*ಪ್ರಶ್ನೆ: ಓ ಮಾತೆಯೇ, "ಇದು ಮಹಾಲಕ್ಷ್ಮೀಯ ಶಕ್ತಿಯಾಗಿದೆ. ಸಾಕಾರಗೊಂಡಿರುವ ಜೀವಿಗಳ ಹೃದಯದಲ್ಲಿ ಆ ದಿವ್ಯಶಕ್ತಿಯು ಹೆಚ್ಚಾಗಿ ಆಕರ್ಷಿತಗೊಂಡಿಲ್ಲ' ಎನ್ನುವ ಮಾತಿನ ಅರ್ಥ ನನಗೆ ಸರಿಯಾಗಿ ತಿಳಿಯಲಿಲ್ಲ...*

**ಉತ್ತರ:** ಇದು ಮಾನವರನ್ನು ಕುರಿತು ಹೇಳಿರುವ ವಿಷಯವಾಗಿದೆ. ಈ ಭೂಮಿಯ ಮೇಲೆ ವಾಸಿಸಿರುವ ಮಾನವಕುಲದ ಬಗೆಗೆ ಹೇಳುವ ಇನ್ನೊಂದು ವಿಧಾನವಾಗಿದೆ. ಇಲ್ಲಿ... ಇಲ್ಲಿ ಹೌದು, ಈ ಭೂಮಿಯ ಮೇಲೆ ಇತರೇ ಪ್ರಾಣಿಗಳೂ ಇವೆ. ಆ ಶಕ್ತಿ ಮಾತ್ರ ಹೌದು, ಬಹುತೇಕವಾಗಿ ಅವಳು ಮಾತ್ರವೇ, ಈ ಪ್ರಾಣಿಗಳ ಕುರಿತು ಪ್ರೇಮಮಯಿಯಾಗಿದ್ದಾಳೆ, ಏಕೆಂದರೆ ಈ ಪ್ರಾಣಿಗಳೂ ಸಹಿತ ಅವಳನ್ನು ಅಷ್ಟೇ ಗಾಢವಾಗಿ ಪ್ರೇಮಿಸುತ್ತವೆ. ಅತ್ಯಂತ ಉಗ್ರ ಪ್ರಾಣಿಯೂ ಸಹಿತ ಅವಳೊಡನೆ ಸಾಧು ಸ್ವಭಾವದಲ್ಲಿಯೇ ವ್ಯವಹರಿಸುತ್ತದೆ. ಇಷ್ಟೆಲ್ಲಾ ಇರುವಾಗ ಏಕೆ "ಮಾನವ ಜೀವಿಗಳು" ಎನ್ನುವ ಶಬ್ದವನ್ನು ಬಳಸಬೇಕು? ಏಕೆಂದರೆ, ಅವನು ಸಾಕಾರಗೊಂಡಿರುವ ಜೀವಿಯಾಗಿದ್ದಾನೆ; ಅಂದರೆ ದೇಹಧಾರಣೆ ಮಾಡಿಕೊಂಡು, ಈ ಭೂಮಿಯ ಮೇಲೆ ಬಂದ ವ್ಯಕ್ತಿಯಾಗಿದ್ದಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/282 – ಶ್ರೀಮಾತೆ**

**– ಅನುವಾದ: ಪುಟ್ಟು ಕುಲಕರ್ಣಿ**

# ಪ್ರಾಣಿ ಪ್ರಭೇದಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಅತೀಂದ್ರೀಯ ಅಂಶ

ಶ್ರೀ ಅರವಿಂದರು: ಮನುಷ್ಯನ ಅಜ್ಞಾನವೇ ಮತ್ತೆ ಅವನು ಸೃಷ್ಟಿಯಲ್ಲಿ ಶ್ರೇಷ್ಠನೆಂದು ಭಾವಿಸುವಂತೆ ಮಾಡುತ್ತದೆ. ಅನೇಕ ಮನುಷ್ಯರಿಗಿಂತ ಹೆಚ್ಚು ಉತ್ತಮವಾದ ಅತೀಂದ್ರೀಯತೆಯನ್ನು ಅನೇಕ ನಾಯಿಗಳು ಪಡೆದಿವೆ!.

ಪ್ರಾಣಿಗಳ ಪ್ರೀತಿ ಮಾಡುವಿಕೆಯಲ್ಲಿ ಅತೀಂದ್ರೀಯ ಅಂಶವಿದೆ ಎಂದು ನಾನು ನಿಮಗೆ ಹೇಳಿದರೆ ನೀವು ನಂಬುತ್ತೀರಾ? ನಮ್ಮ ಬೆಕ್ಕನ್ನೇ ತೆಗೆದುಕೊಳ್ಳಿ. ದೊಡ್ಡ ಹುಡುಗ. ಅವನು ಕಚ್ಚುವಿಕೆಯನ್ನು ಪ್ರೀತಿ ಮಾಡಿದಾಗ ಅವನು ದೈಹಿಕವಾಗಿರುತ್ತಾನೆ; ಅವನು ಕಂದನನ್ನು ಪ್ರೀತಿ ಮಾಡಿದಾಗ, ಅವನು ಚೇತನ; ಅವನು ಮಿಮಿಯನ್ನು ಪ್ರೀತಿ ಮಾಡಿದಾಗ, ಅವನು ಭಾವನಾತ್ಮಕ ಮತ್ತು ಭಾವುಕ; ಮತ್ತು ಅವನು ಆಕರ್ಷಕವಾದ ಹೆಣ್ಣನ್ನು ಪ್ರೀತಿ ಮಾಡಿದಾಗ ಅವನು ಅತೀಂದ್ರೀಯ!

*ಅನುಯಾಯಿ: ಹಾಗಾದರೆ ಮನುಷ್ಯನನ್ನು ಸೃಷ್ಟಿಯಲ್ಲಿ ಅತ್ಯುನ್ನತ ಜೀವಿ ಎಂದು ಹೇಗೆ ಪರಿಗಣಿಸಲಾಗುತ್ತದೆ?*

ಶ್ರೀ ಅರವಿಂದರು: ಮನುಷ್ಯನ ಅಹಂಕಾರದ ಅಜ್ಞಾನವೇ ಅವನನ್ನು ಹಾಗೆ ಯೋಚಿಸುವಂತೆ ಮಾಡುತ್ತದೆ. ಆತನು ವಿಶೇಷನಾಗಿದ್ದಾನೆ ಏಕೆಂದರೆ ದೈವಿಕ ಜೀವನವನ್ನು ವಿಕಸಿಸುವ ಸಾಧ್ಯತೆ ಅವನಲ್ಲಿದೆ. ಅವನು ಮನಸ್ಸೊಂದನ್ನು ಅಭಿವೃದ್ಧಿಪಡಿಸಿಕೊಂಡಿದ್ದಾನೆ ಮತ್ತು ಮನಸ್ಸು ಅವನಿಗೆ ಪ್ರಜ್ಞಾಪೂರ್ವಕ ವಿಕಾಸದ ಅವಕಾಶವನ್ನು ನೀಡುತ್ತದೆ ಎಂಬ ಕಾರಣದಿಂದ ಅವನು ವಿಶೇಷ ಎಂದು ಸಹ ನೀವು ಹೇಳಬಹುದು. ಆದರೆ ಮನುಷ್ಯನು ಮಾನಸಿಕ ಜೀವಿ ಅವನು ತನ್ನ ಮನಸ್ಸನ್ನು ತನ್ನ ವಿಕಾಸಕ್ಕಾಗಿ ಉಪಯೋಗಿಸಿಕೊಂಡಿದ್ದಾನೆ ಆದುದರಿಂದ ಅದು ಕಡ್ಡಾಯವಾಗಿ ಅದನ್ನು ಅನುಸರಿಸುವುದಿಲ್ಲ. ಖಚಿತವಾಗಿ, ಅವನಲ್ಲಿ ಮನಸ್ಸಿರುವುದರಿಂದ ಅವನು ಪೈಶಾಚಿಕವಾಗಲು ಅನಂತ ಸಾಮರ್ಥ್ಯವಿದೆ. ಅವನು ತನ್ನ ಪಿಶಾಚಿಯ ಸಹಾಯಕ್ಕೆ ಮನಸ್ಸನ್ನು ತರುತ್ತಾನೆ, ಮತ್ತು ಮನುಷ್ಯನು ತನ್ನ ಮನಸ್ಸಿನಿಂದ ತನ್ನ ಚೈತನ್ಯದ ಸೇವೆಯಲ್ಲಿ ಅದನ್ನು ಇರಿಸಿದಾಗ ಪಿಶಾಚಿಯು ಅಷ್ಟು ಕೆಟ್ಟದಾಗಲು ಸಾಧ್ಯವಿಲ್ಲ.

*ಅನುಯಾಯಿ: ಅನಂತ ಸಾಧ್ಯತೆಗಳು! ಎರಡೂ – ದೈವಿಕ ಮತ್ತು ಪೈಶಾಚಿಕ ನಡತೆಗಳು!*

ಶ್ರೀ ಅರವಿಂದರು: ಮನುಷ್ಯನ ಅಹಂಕಾರದ ಅಜ್ಞಾನವೇ ಅವನು ಸೃಷ್ಟಿಯಲ್ಲಿ ಅತ್ಯುನ್ನತನೆಂದು ಭಾವಿಸುವಂತೆ ಮಾಡುತ್ತದೆ.

*ಅನುಯಾಯಿ: ಆದರೆ ಮನುಷ್ಯನ ಮತ್ತು ಪ್ರಾಣಿಗಳ ದೇಹದಲ್ಲಿ ದೊಡ್ಡ ವ್ಯತ್ಯಾಸವಿದೆ.*

ಶ್ರೀ ಅರವಿಂದರು: ಅಷ್ಟೆ; ಅದನ್ನು ನೀವು ಮಾಡಲು ಪ್ರಯತ್ನಿಸಿದಂತೆ ಅದು ಅಷ್ಟೇನೂ ಅಲ್ಲ.

ಅಷ್ಟಕ್ಕೂ ಪ್ರಾಣಿಗಳ ದೇಹ ಮತ್ತು ಮನುಷ್ಯನ ನಡುವಿನ ವ್ಯತ್ಯಾಸವೇನು?. ನೀವು ಎಚ್ಚರಿಕೆಯಿಂದ ನೋಡಿದರೆ ನೀವು ಬಾಲವನ್ನು ತ್ಯಜಿಸಿರುವುದನ್ನು ನೀವು ಕಾಣುವಿರಿ, ಮತ್ತು ನಾಲ್ಕು ಕಾಲುಗಳ ಮೇಲೆ ನಡೆಯುವ ಬದಲು ನೀವು ಎರಡನ್ನು ಉಪಯೋಗಿಸುತ್ತಿದ್ದಿರಿ ಮತ್ತು ಇತರ ಎರಡು ಕೈಗಳಾಗಿ ಬದಲಾಗಿವೆ. ಮೆದುಳಿನಲ್ಲಿ ಸ್ವಲ್ಪ ಆದರೆ ಬಹಳ ಮುಖ್ಯವಾದ ಬದಲಾವಣೆಗಳಾಗಿವೆ ಮತ್ತು ಅಲ್ಲಲ್ಲಿ ಸ್ವಲ್ಪ ವಿವರಗಳು. ನಿಮ್ಮ ತುಪ್ಪಳ ಮತ್ತು ಕೊಂಬುಗಳನ್ನು ನೀವು ಎಸೆದಿದ್ದೀರಿ.

*ಅನುಯಾಯಿ: ಎಲ್ಲ ಪುರುಷರು ಅಲ್ಲ! ಕೆ ಇನ್ನೂ ಸಾಕಷ್ಟು ತುಪ್ಪಳವನ್ನು ಹೊಂದಿದ್ದಾನೆ (ನಗು).*

ಶ್ರೀ ಅರವಿಂದರು: ನೋಡಿ, ಪ್ರಾಣಿ ಮತ್ತು ಮನುಷ್ಯನ ನಡುವೆ ಅಂತರವನ್ನು ಉಂಟುಮಾಡುವ ಭೌತಿಕ ಬದಲಾವಣೆಯಲ್ಲಿ ಅದು ಅಷ್ಟೇನೂ ದೊಡ್ಡದಲ್ಲ.

(ಎ. ಬಿ. ಪುರಾಣಿ, ಶ್ರೀ ಅರವಿಂದರೊಡನೆ ಸಾಯಂಕಾಲದ ಮಾತುಕತೆಗಳು, ಎರಡನೆ ಸರಣಿ, ಮನಃಶಾಸ್ತ್ರ, ಪುಟ 238–239)

ಮಗುವಿನಲ್ಲಿರುವ ಈ ಸಣ್ಣ ಸತ್ಯ ಸಂಗತಿಯು ಚೈತ್ಯನಲ್ಲಿರುವ ದೈವಿಕ ಉಪಸ್ಥಿತಿ – ಅದು ಪ್ರಾಣಿ ಮತ್ತು ಸಸ್ಯಗಳಲ್ಲಿಯೂ ಸಹ ಇದೆ. ಸಸ್ಯಗಳಲ್ಲಿ ಇದು ಪ್ರಜ್ಞೆಯಲ್ಲ, ಪ್ರಾಣಿಗಳಲ್ಲಿ ಇದು ಪ್ರಜ್ಞೆಯಾಗಿ ಪ್ರಾರಂಭವಾಗುತ್ತದೆ, ಮತ್ತು ಮಕ್ಕಳಲ್ಲಿ ಇದು ನಿಜವಾದ ಪ್ರಜ್ಞೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/26 – ಶ್ರೀಮಾತೆ**

## ಪ್ರಾಣಿ ಸಂಹವನ

ಶ್ರೀ ಅರವಿಂದರು: ಪ್ರಾಣಿಗಳು ಯೋಚಿಸುವುದಿಲ್ಲ ಮತ್ತು ತರ್ಕಿಸುವುದಿಲ್ಲ ಎಂದು ಜನರು ಹೇಳುತ್ತಾರೆ. ಇದು ನಿಜವಲ್ಲ. ಪ್ರಾಣಿಗಳ ಬುದ್ಧಿವಂತಿಕೆಯು ತಮ್ಮ ಸ್ವಂತ ಅಗತ್ಯಗಳ ಅನುಗುಣವಾಗಿ ಜೀವನದ ಕಿರಿದಾದ ಮಿತಿಗಳಲ್ಲಿ ಮಾತ್ರ ಕಾರ್ಯನಿರ್ವಹಿಸಲು ವಿಕಸನಗೊಂಡಿದೆ. ಆದರೆ ಅವುಗಳು ಅಭಿವೃದ್ಧಿ ಹೊಂದದ ಸುಪ್ತ ಸ್ವಾಭಾವಿಕ ಶಕ್ತಿಗಳನ್ನು ಹೊಂದಿವೆ.

ಬೆಕ್ಕುಗಳು ತಮ್ಮದೇ ಆದ ಭಾಷೆ ಹೊಂದಿವೆ. ಅವುಗಳು ವಿಭಿನ್ನ ಉದ್ದೇಶಕ್ಕಾಗಿ ವಿವಿಧ ರೀತಿಯ ಮಿಂಯಾವ್‌ಗಳನ್ನು ಉಚ್ಚರಿಸುತ್ತವೆ. ಉದಾಹರಣೆಗೆ, ತಾಯಿ ಬೆಕ್ಕು ತನ್ನ ಮರಿಗಳನ್ನು ಒಂದು ಪೆಟ್ಟಿಗೆಯ ಹಿಂದೆ ಬಿಟ್ಟ ನಂತರ ಒಂದು ನಿರ್ದಿಷ್ಟ ಸ್ವರ ಮತ್ತು ಲಯದಲ್ಲಿ ಮಿಂಯಾವ್ ಎಂದಾಗ, ಅವಳು ತಿರುಗಿ ಬಂದು ಮತ್ತೊಮ್ಮೆ ಮಿಂಯಾವ್ ಎಂದು ಹೇಳುವವರೆಗೂ ತಾವಿದ್ದ ಸ್ಥಳದಿಂದ ಚಲಿಸಬಾರದು ಎಂದು ಮರಿ ಬೆಕ್ಕುಗಳು ಅರ್ಥಮಾಡಿಕೊಳ್ಳುತ್ತವೆ. ಸ್ವರ ಮತ್ತು ಲಯದ ಮೂಲಕ ಬೆಕ್ಕುಗಳು ತಮ್ಮನ್ನು ತಾವು ವ್ಯಕ್ತಪಡಿಸಿಕೊಳ್ಳುತ್ತವೆ.

ತುಂಬಾ ಮೂರ್ಖರೆಂದು ಭಾವಿಸಲಾದ ಕತ್ತೆಗಳೂ ಸಹ ಕೆಲವೊಮ್ಮೆ ಅಸಾಮಾನ್ಯವಾಗಿ ಬುದ್ಧಿವಂತವಾಗಿರುತ್ತವೆ. ಒಮ್ಮೆ ಕೆಲವು ಕುದುರೆ ಮತ್ತು ಕತ್ತೆಗಳನ್ನು ಒಂದು ಕಡೆ ಕೂಡಿ ಹಾಕಿ ಗೇಟನ್ನು ಮುಚ್ಚಲಾಯಿತು, ಅವುಗಳು ಹೊರಗೆ ಬರಬಹುದೇ ಎಂದು ನೋಡಲು. ಒಂದು ಕತ್ತೆಯು ನಿರುಪಯುಕ್ತವಾದ ಚಿಲಕವನ್ನು ಎತ್ತಿ ಗೇಟ ತೆಗೆಯುವ ಮೂಲಕ ಹೊರಬಂದಿತು, ಕುದುರೆಗಳು ಅಸಾಹಯಕವಾಗಿದ್ದವು. ಅಷ್ಟೇಕೆ ದೂರ ಹೋಗಬೇಕು? ನಮ್ಮ ಆಶ್ರಮದಲ್ಲಿಯೂ ಸಹ ತಾಯಿಯವರ ಬೆಕ್ಕು ಚೀಕೂ ಅಸಾಧಾರಣ ಬುದ್ಧಿವಂತವಾಗಿತ್ತು. ಒಂದು ದಿನ ಅವಳನ್ನು ಒಂದು ಕೋಣೆಯಲ್ಲಿ ಕೂಡಿ ಹಾಕಲಾಗಿತ್ತು. ತಾಯಿಯವರು ಮಾಡುತ್ತಿದ್ದ ರೀತಿಯಲ್ಲೇ ಅವಳು ಕಿಟಕಿಯನ್ನು ತೆರೆಯಲು ಪ್ರಯತ್ನಿಸುತ್ತಿರುವುದು ಕಂಡುಬಂತು. ಸ್ಪಷ್ಟವಾಗಿ, ಚೀಕೂ ತಾಯಿಯವರನ್ನು ಎಚ್ಚರದಿಂದ ನೋಡಿದ್ದಳು.

ನಮ್ಮಲ್ಲೊಂದು ನಾಯಿ ಇತ್ತು, ನಾವು ಬಾಡಿಗೆಗೆ ಪಡೆದ ಮೊದಲ ಮನೆಯಲ್ಲಿ ಯಾರೋ ಬಿಟ್ಟು ಹೋದ ಒಂದು ಹೆಣ್ಣು ನಾಯಿ. ಒಂದು ದಿನ

ಅವಳನ್ನು ಕೂಡಿ ಹಾಕಲಾಯಿತು. ಬಾಗಿಲನ್ನು ತೆರೆದು ತಳ್ಳುವುದು ಅಸಾಧ್ಯವೆಂದು ಕಂಡುಕೊಂಡ ಅವಳು ಅದರ ಮುಂದೆ ಕುಳಿತು "ಒಳಗೆ ಹೇಗೆ ಹೋಗುವುದು" ಎಂದು ಯೋಚಿಸಲಾರಂಭಿಸಿತು. ಅವಳು ಕುಳಿತ ರೀತಿ ಮತ್ತು ಅವಳ ತಲೆ ಹಾಗೂ ಕಣ್ಣುಗಳ ನಿಲುವು ಅವಳು ಯೋಚಿಸುತ್ತಿರುವುದನ್ನು ಸ್ಪಷ್ಟವಾಗಿ ತೋರಿಸುತ್ತಿದ್ದವು. ಆಗ ಇದ್ದಕ್ಕಿದ್ದಂತೆ ಅವಳು ಎದ್ದು "ಆಹಾ, ಸ್ನಾನದ ಮನೆ ಬಾಗಿಲು ಅಲ್ಲಿದೆ" ಎಂದು ತನ್ನಷ್ಟಕ್ಕೆ ತಾನು ಹೇಳಿದಳು. ನಾನದನ್ನು ಪ್ರಯತ್ನಿಸುವೆ. ಅವಳು ಆ ದಿಕ್ಕಿನಲ್ಲಿ ಹೋದಳು ಮತ್ತು ಬಾಗಿಲು ತೆರೆದು ಒಳಗೆ ಬಂದಳು.

ಮನುಷ್ಯ ಮತ್ತು ಪ್ರಾಣಿಗಳ ನಡುವೆ ದೊಡ್ಡ ವ್ಯತ್ಯಾಸವನ್ನು ಮಾಡುವವರು ಯುರೋಪಿಯನ್ನರು. ಒಂದೇ ವ್ಯತ್ಯಾಸವೆಂದರೆ ಪ್ರಾಣಿಗಳು ಭಾವನೆಗಳನ್ನು ರೂಪಿಸಲು ಸಾಧ್ಯವಿಲ್ಲ ಮತ್ತು ಓದಲು ಹಾಗೂ ಬರೆಯಲು ಮತ್ತು ತತ್ವೋಪದೇಶ ಮಾಡಲು ಸಾಧ್ಯವಿಲ್ಲ.

ನಿರೋದಬರಣ: ಅವುಗಳು ಯೋಗವನ್ನೂ ಮಾಡಲು ಸಾಧ್ಯವಿಲ್ಲ.

ಶ್ರೀ ಅರವಿಂದರು: ಅದರ ಬಗ್ಗೆ ನನಗೆ ಗೊತ್ತಿಲ್ಲ. ಒಮ್ಮೆ ನಾನು ಮತ್ತು ತಾಯಿಯವರು ಧ್ಯಾನ ಮಾಡುತ್ತಿದ್ದಾಗ, ಒಂದು ಬೆಕ್ಕು ಇತ್ತು. ಅವಳು ವಿಚಿತ್ರವಾಗಿ ವರ್ತಿಸುವುದನ್ನು ನಾವು ಕಂಡುಕೊಂಡೆವು. ಅವಳು ಸಮಾಧಿ ಸ್ಥಿತಿಗೆ ಜಾರಿದಳು ಮತ್ತು ಇದ್ದಕ್ಕಿದ್ದಂತೆ ಅವಳು ಚೇತರಿಸಿಕೊಂಡಾಗ ಅವಳು ಹೆಚ್ಚು ಕಡಿಮೆ ತನ್ನ ದೇಹವನ್ನು ಬಿಟ್ಟು ಸಾಯುವ ಹಂತದಲ್ಲಿದ್ದಳು. ಸ್ಪಷ್ಟವಾಗಿ ಅವಳು ಏನನ್ನೋ ಸ್ವೀಕರಿಸಲು ಪ್ರಯತ್ನಿಸುತ್ತಿದ್ದಳು.

**ಶ್ರೀ ಅರವಿಂದರೊಂದಿಗಿನ ಮಾತುಕತೆಗಳು, ಪುಟ 223–224**

## ದೈವಿಕ ವಿದ್ಯುತ್ಕಣ

ಹೇಗೆ ನಾವು ಪ್ರತಿಯೊಂದು ಪ್ರಾಣಿಗೂ ಚೈತ್ಯ ಪುರುಷನನ್ನು ದಯಪಾಲಿಸಲು ನಿರಾಕರಿಸಲಾಗುವುದಿಲ್ಲವೋ, ಸಹಜವಾಗಿ ಪ್ರತಿಯೊಬ್ಬ ಮನುಷ್ಯನು ಚೈತ್ಯ ಪುರುಷನನ್ನು ಪಡೆದುಕೊಂಡಿದ್ದಾನೆಂದು ನಮಗೆ ಹೇಳಲು ಸಾಧ್ಯವಿಲ್ಲ. ಮನುಷ್ಯನ ಬಳಿ ವಾಸವಾಗಿರುವ ಅನೇಕ ಪ್ರಾಣಿಗಳು ಅದರ ಕೆಲವು

ಆದಿಗಳನ್ನು ಹೊಂದಿವೆ, ಆಗಾಗ್ಗೆ ಪಶುಗಳ ಹೊರತುಪಡಿಸಿ ಬೇರೆನೂ ಕಾಣದ ಜನರ ಸಂಪರ್ಕಕ್ಕೆ ನಾವು ಬರುತ್ತೇವೆ. ಇಲ್ಲಿಯೂ ಸಹ ಸರಿಸಮ ಮಾಡುವ ಒಂದು ಒಳ್ಳೆಯ ಒಪ್ಪಂದ ಇತ್ತು. ಆದರೆ ಒಟ್ಟಾರೆಯಾಗಿ ನಿಜವಾದ ಅರ್ಥದಲ್ಲಿ ಚೈತ್ಯವು ಮಾನವ ಹಂತದಲ್ಲಿ ಪ್ರಾರಂಭವಾಗುತ್ತದೆ; ಅದಕ್ಕಾಗಿಯೇ ಕ್ಯಾಥೋಲಿಕ ಧರ್ಮವು ಮನುಷ್ಯನಲ್ಲಿ ಮಾತ್ರ ಆತ್ಮವಿದೆ ಎಂದು ಘೋಷಿಸುತ್ತದೆ. ಮನುಷ್ಯನಲ್ಲಿ ಮಾತ್ರ ಅತೀಂದ್ರಿಯವು ಅದರ ಪೂರ್ಣ ಸ್ಥಿತಿಗೆ ಬೆಳೆಯುವ ಸಾಧ್ಯತೆಯಿದೆ, ಕೊನೆಯಲ್ಲಿ ಅವರೋಹಣವಾಗುವ ಜೀವಿಯೊಂದಿಗೆ (ಮೇಲಿನ ದೇವತೆ) ಸೇರಲು ಮತ್ತು ಒಂದಾಗಲು ಸಾಧ್ಯವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/151**

ತಾವು ಯೋಚಿಸಲು ಪ್ರಾರಂಭಿಸಿದಾಗ "ಪ್ರಜ್ಞೆ" ಇದೆ ಎಂದು ಹೆಚ್ಚಿನ ಜನರು ಹೇಳುತ್ತಾರೆ – ಯೋಚಿಸದೆ ಇದ್ದವರು ಪ್ರಜ್ಞೆ ಇಲ್ಲದವರು. ಆದರೆ ಸಸ್ಯಗಳು ಪರಿಪೂರ್ಣ ಅರಿವುಳ್ಳವು ಆದಾಗ್ಯೂ ಅವು ಯೋಚಿಸುವುದಿಲ್ಲ. ಒಂದು ಪ್ರಜ್ಞೆಯ ಅಭಿವ್ಯಕ್ತಿಯಾದ ಬಹಳ ನಿಖರವಾದ ಸಂವೇದನೆಗಳನ್ನು ಅವು ಹೊಂದಿವೆ, ಆದರೂ ಅವು ಯೋಚಿಸುವುದಿಲ್ಲ. ಪ್ರಾಣಿಗಳು ಯೋಚಿಸಲು ಪ್ರಾರಂಭಿಸುತ್ತವೆ ಮತ್ತು ಅವುಗಳ ಪ್ರತಿಕ್ರಿಯೆಗಳು ಬಹಳ ಸಂಕೀರ್ಣವಾದವುಗಳು. ಆದರೆ ಸಸ್ಯಗಳು ಮತ್ತು ಪ್ರಾಣಿಗಳು ಎರಡೂ ಜಾಗೃತವಾಗಿರುತ್ತವೆ. ಕನಿಷ್ಠ ಆಲೋಚನೆಯಿಲ್ಲದೆ ನಾವು ಸಂವೇದನೆಯ ಬಗ್ಗೆ ಜಾಗೃತರಾಗಿರಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/240–241**

**ವಂಶಗಳ ಕುಲ**

ಪ್ರಾಣಿಗಳಲ್ಲಿ ಕೆಲವೊಮ್ಮೆ ಬಹಳ ತೀವ್ರವಾದ ಅತೀಂದ್ರಿಯ ಸತ್ಯ ಇರುತ್ತದೆ. ಸ್ವಾಭಾವಿಕವಾಗಿ, ಅತೀಂದ್ರಿಯವು ಪ್ರಾಣಿಗಳಿಗಿಂತ ಮಗುವಿನಲ್ಲಿ ಸ್ವಲ್ಪ ಹೆಚ್ಚು ರೂಪುಗೊಂಡಿದೆ, ಸ್ವಲ್ಪ ಹೆಚ್ಚು ಜಾಗೃತವಾಗಿದೆ ಎಂದು ನಾನು ನಂಬುತ್ತೇನೆ. ಆದರೆ ಗೊತ್ತು ಮಾಡಿಕೊಳ್ಳುವುದಕ್ಕಾಗಿ ನಾನು ಪ್ರಾಣಿಗಳೊಡನೆ ಪ್ರಯೋಗವನ್ನು ಮಾಡಿದ್ದೇನೆ; ಮಾನವರಲ್ಲಿ ವಿರಳವಾಗಿ ಕಾಣುವ ಸದ್ಗುಣಗಳನ್ನು, ತುಂಬಾ ಸರಳವಾದ, ಆಡಂಬರವಿಲ್ಲದ ಕೆಲವು ಸದ್ಗುಣಗಳನ್ನು ಪ್ರಾಣಿಗಳಲ್ಲಿ ಕಂಡಿದ್ದೇನೆ

ಎಂದು ನಾನು ಭರವಸೆ ನೀಡುತ್ತೇನೆ. ಉದಾಹರಣೆಗೆ ಬೆಕ್ಕುಗಳಲ್ಲಿ: ನಾನು ಬೆಕ್ಕುಗಳನ್ನು ಬಹಳ ಅಧ್ಯಯನ ಮಾಡಿದ್ದೇನೆ; ಅವುಗಳನ್ನು ಚೆನ್ನಾಗಿ ತಿಳಿದಿದ್ದರೆ ಅವು ಅದ್ಭುತ ಪ್ರಾಣಿಗಳು. ತಮ್ಮ ಕಂದಮ್ಮಗಳಿಗಾಗಿ ತಮ್ಮನ್ನು ತಾವು ಸಂಪೂರ್ಣವಾಗಿ ತ್ಯಾಗ ಮಾಡಿಕೊಂಡ ತಾಯಿ ಬೆಕ್ಕುಗಳನ್ನು ನಾನು ನೋಡಿದ್ದೇನೆ – ಜನರು ತಾಯಿಯ ಪ್ರೀತಿಯ ಬಗ್ಗೆ, ಅದು ಕೇವಲ ಒಂದು ಮಾನವ ಸುಯೋಗ ಎಂಬಂತೆ ಮೆಚ್ಚುಗೆಯಿಂದ ಮಾತನಾಡುತ್ತಾರೆ, ಆದರೆ ತಾಯಿ–ಬೆಕ್ಕುಗಳು ಈ ಪ್ರೀತಿಯನ್ನು ಸಾಮಾನ್ಯ ಮಾನವೀತೆಯನ್ನು ಮೀರಿಸುವ ಮಟ್ಟಕ್ಕೆ ವ್ಯಕ್ತಪಡಿಸಿದ್ದನ್ನು ನಾನು ನೋಡಿದ್ದೇನೆ. ತನ್ನ ಮಕ್ಕಳು ತಮಗೆ ಅಗತ್ಯವಿರುವ ಎಲ್ಲವನ್ನೂ ತೆಗೆದುಕೊಳ್ಳುವವರೆಗೂ ತನ್ನ ಆಹಾರವನ್ನು ಎಂದೂ ಮುಟ್ಟದ ತಾಯಿ–ಬೆಕ್ಕನ್ನು ನಾನು ನೋಡಿದ್ದೇನೆ. ತನ್ನ ಯಾವುದೇ ಅಗತ್ಯಗಳನ್ನು ಪೂರೈಸಿಕೊಳ್ಳದೆ, ತನ್ನ ಕಂದಮ್ಮಗಳನ್ನು ಒಂಟಿಯಾಗಿ ಬಿಟ್ಟು ಹೋಗಲು ಹೆದರುತ್ತಿದ್ದ, ಅವುಗಳ ಪಕ್ಕದಲ್ಲೇ ಎಂಟು ದಿನಗಳವರೆಗೆ ಇದ್ದ ಮತ್ತೊಂದು ಬೆಕ್ಕನ್ನು ನಾನು ನೋಡಿದ್ದೇನೆ; ಒಂದು ಗೋಡೆಯಿಂದ ಒಂದು ಕಿಟಕಿಗೆ ಹೇಗೆ ಜಿಗಿಯಬೇಕೆಂದು ತನ್ನ ಯುವ ಬೆಕ್ಕುಗಳಿಗೆ ಕಲಿಸಲು ಒಂದೇ ಚಲನೆಯನ್ನು ಐವತ್ತು ಸಲ ಪುನರಾವರ್ತನೆ ಮಾಡಿದ್ದ ಬೆಕ್ಕನ್ನು ನಾನು ಕಂಡಿದ್ದೇನೆ. ಅನೇಕ ಅವಿದ್ಯಾವಂತ ಹೆಣ್ಣು ಮಕ್ಕಳಲ್ಲಿ ಇರದ ಒಂದು ಬುದ್ಧಿವಂತಿಕೆಯನ್ನು ಒಂದು ಕುಶಲತೆಯನ್ನು ಎಚ್ಚರಿಕೆಯಿಂದ ಅದು ಕಲಿಸುತ್ತದೆ ಎಂದು ನಾನು ಸೇರಿಸಬಹುದು. ಮತ್ತು ಅದು ಹೀಗೇಕೆ? – ಅದರ ಬೌದ್ಧಿಕತೆಯು ಇಲ್ಲದ ಕಾರಣ. ಒಟ್ಟಾರೆಯಾಗಿ ಅದೊಂದು ಸ್ವಯಂಪ್ರೇರಿತ ಪ್ರವೃತ್ತಿಯಾಗಿತ್ತು. ಆದರೆ ಪ್ರವೃತ್ತಿ (ಸಹಜ ಗುಣ) ಎಂದರೇನು? ಅದು ವಂಶಗಳ ಕುಲದಲ್ಲಿ ದೈವೀ ಉಪಸ್ಥಿತಿ, ಮತ್ತು ಅದು, ಅದು ಪ್ರಾಣಿಗಳ ಚೈತ್ಯ; ಅದೊಂದು ಸಾಮೂಹಿಕ ಚೈತ್ಯ, ವೈಯಕ್ತಿಕ ಚೈತ್ಯವಲ್ಲ. ನಾನು ಪ್ರಾಣಿಗಳಲ್ಲಿ ನಾನು ಎಲ್ಲ ಪ್ರತಿಕ್ರಿಯೆಗಳನ್ನು ನೋಡಿದ್ದೇನೆ, ಭಾವನಾತ್ಮಕ, ಪರಿಣಾತ್ಮಕ, ಮೃದುಭಾವತ್ವ, ಮನುಷ್ಯರು ಬಹಳ ಹೆಮ್ಮೆಪಡುವ ಎಲ್ಲ ಭಾವನೆಗಳನ್ನು. ಭಿನ್ನತೆ ಏನೆಂದರೆ, ಪ್ರಾಣಿಗಳು ಅವುಗಳ ಬಗ್ಗೆ ಮಾತನಾಡುವುದಿಲ್ಲ, ಅವುಗಳ ಬಗ್ಗೆ ಬರೆಯುವುದಿಲ್ಲ, ಅವುಗಳು ತಮ್ಮ ಅನುಭವಗಳ ಮೇಲಿನ ಪುಸ್ತಕಗಳಲ್ಲಿ ನಮ್ಮನ್ನು ಮುಳುಗಿಸದೇ ಇರುವುದರಿಂದ ಅವುಗಳನ್ನು ನಾವು ಅವುಗಳನ್ನು ಕೀಳು ಪ್ರಾಣಿಗಳೆಂದು ಪರಿಗಣಿಸುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/27–28**

## ವಂಶದ ಚೇತನ

ಮನುಷ್ಯರಿಗಿಂತ ಅತಿ ಹೆಚ್ಚು ಪರಿಪೂರ್ಣವಾದ ಇಂದ್ರಿಯಗಳನ್ನು ಪ್ರಾಣಿಗಳು ಹೊಂದಿವೆ. ಉದಾಹರಣೆಗೆ, ಒಂದು ನಾಯಿಯು ಜಾಡು ಹಿಡಿಯುವಂತೆ ಒಬ್ಬ ಮನುಷ್ಯನ ಜಾಡು ಹಿಡಿಯಲು ನಾನು ಸವಾಲೊಡ್ಡುತ್ತೇನೆ! ಪ್ರಾಣಿಗಳು (ನಮ್ಮನ್ನು ಅವುಗಳು ಹೆಚ್ಚು ಸನೀಹ ಹೋಲುವುದರಿಂದ ಅವುಗಳನ್ನು ನಾವು "ಉನ್ನತ" ಪ್ರಾಣಿಗಳೆಂದು ಕರೆಯುತ್ತೇವೆ) ವಿಕಸನದ ತಿರುವಿನಲ್ಲಿ ಅಥವಾ ಸುರುಳಿಯಲ್ಲಿ ಉನ್ನತವಾದ ಜಾಗೃತ ಪ್ರಜ್ಞೆಯಾದ ವಂಶದ ಚೇತನದಿಂದ ಪ್ರಭಾವಕ್ಕೆ ಒಳಗಾಗಿವೆ. ಜೇನ್ನೊಣಗಳು, ಇರುವೆಗಳು ಒಂದು ತುಂಬಾ ವಿಶೇಷ ಗುಣಮಟ್ಟದ ಈ ವಂಶದ ಚೇತನವನ್ನು ಅನುಸರಿಸುತ್ತವೆ. ಸರಳವಾಗಿ ಹೇಳುವುದಾದರೆ ಪ್ರಾಣಿಗಳಲ್ಲಿಯ "ಪ್ರವೃತ್ತಿ" ಎನ್ನುವುದು, ಯಾವಾಗಲೂ ಏನನ್ನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎಂದು ತಿಳಿದುಕೊಂಡಿರುವ ವಂಶದ ಚೇತನಕ್ಕೆ ಅವುಗಳ ವಿಧೇಯತೆ. ನಿನಗೆ ಗೊತ್ತು, ಅಲ್ಲಿ ಬೇಕಾದಷ್ಟು ಉದಾಹರಣೆಗಳಿವೆ. ಒಂದು ಹಸುವನ್ನು ಹುಲ್ಲುಗಾವಲಿನಲ್ಲಿ ಬಿಡು, ಅದು ಅದರ ಸುತ್ತಲೂ ಅಡ್ಡಾಡುತ್ತದೆ, ಮೂಸಿ ನೋಡುತ್ತದೆ, ಮತ್ತು ಅನಾಮತ್ತಾಗಿ ತನ್ನ ನಾಲಿಗೆಯನ್ನು ಹೊರ ಚಾಚಿ ಒಂದು ಹುಲ್ಲಿನ ಕಟ್ಟನ್ನು ಎಳೆದುಕೊಳ್ಳುತ್ತದೆ. ನಂತರ ಅದು ಮತ್ತೆ ಅಡ್ಡಾಡುತ್ತದೆ, ಮೂಸುತ್ತದೆ ಮತ್ತೊಂದು ಹುಲ್ಲಿನ ಕಟ್ಟನ್ನು ತೆಗೆದುಕೊಳ್ಳುತ್ತದೆ, ಇದು ಹೀಗೆಯೇ ಸಾಗುತ್ತದೆ. ಇಂಥಹ ಸಂದರ್ಭಗಳಲ್ಲಿ ಎಂದಾದರೂ ಹಸುವು ವಿಷಯುಕ್ತ ಹುಲ್ಲನ್ನು ತಿಂದಿದ್ದನ್ನು ನೀವು ಯಾರಾದರು ನೋಡಿದ್ದೀರಾ? ಆದರೆ ಈ ಬಡ ಪ್ರಾಣಿಯನ್ನು ಒಂದು ಶೆಡ್‌ನಲ್ಲಿ ಕೂಡಿಹಾಕಿ ಮತ್ತು ಅದರ ಮುಂದೆ ಸ್ವಲ್ಪ ಹುಲ್ಲನ್ನು ಹಾಕಿ, ಆಗ ತನ್ನ ಸಹಜ ಗುಣವನ್ನು ಕಳೆದುಕೊಂಡ ಈ ಬಡ ಪ್ರಾಣಿಯು ಮನುಷ್ಯನ ಆಜ್ಞೆ ಪಾಲಿಸುತ್ತದೆ (ನನ್ನನ್ನು ಕ್ಷಮಿಸಿ), ಮತ್ತು ವಿಷಯುಕ್ತ ಹುಲ್ಲನ್ನು ಮತ್ತು ಅದರ ಜೊತೆ ಉಳಿದೆಲ್ಲವನ್ನೂ ತಿನ್ನುತ್ತದೆ. ವಿಷಕಾರಿ ಹುಲ್ಲನ್ನು ತಿನ್ನುವುದರಿಂದ ಮೂರು ಹಸುಗಳು ಅಸು ನೀಗಿದಂಥಹ ಮೂರು ಪ್ರಕರಣಗಳು ಈಗಾಗಲೆ ನಮ್ಮಲ್ಲಿವೆ. ಮತ್ತು ಈ ದುರದೃಷ್ಟಕರ ಪ್ರಾಣಿಗಳು, ಎಲ್ಲಾ ಪ್ರಾಣಿಗಳಂತೆ, ಮನುಷ್ಯನ ಶ್ರೇಷ್ಠತೆಗೆ ಒಂದು ರೀತಿಯ ಗೌರವವನ್ನು ಹೊಂದಿವೆ – ಅವನು ಹಸುವಿನ ಮುಂದೆ ವಿಷಕಾರಿ ಹುಲ್ಲನ್ನು ಹಾಕಿ ತಿನ್ನಲು ಹೇಳಿದರೆ ಅದು ತಿನ್ನುತ್ತದೆ! ವಂಶದ ಚೇತನ ಮತ್ತು ಅದರ ನಡುವೆ ಏನೂ ಹಸ್ತಕ್ಷೇಪ ಮಾಡದೆ ಅದರ ಪಾಡಿಗೆ ಅದನ್ನು ಬಿಟ್ಟರೆ, ಅದು ಎಂದಿಗೂ ಹಾಗೆ ಮಾಡುವುದಿಲ್ಲ.

ಮನುಷ್ಯನ ಹತ್ತಿರ ವಾಸಿಸುವ ಎಲ್ಲಾ ಪ್ರಾಣಿಗಳು ತಮ್ಮ ಸಹಜ ಗುಣಗಳನ್ನು ಕಳೆದುಕೊಳ್ಳುತ್ತವೆ, ಏಕೆಂದರೆ ಕಡಿಮೆ ಕಷ್ಟವಿಲ್ಲದೆ ಆಶ್ರಯ ಮತ್ತು ಆಹಾರವನ್ನು ಕೊಡಬಲ್ಲಂಥ ಈ ಜೀವಿಗೆ ಒಂದು ಭಕ್ತಿಪೂರಿತ ಮೆಚ್ಚುಗೆ ಅವುಗಳಲ್ಲಿದೆ, ಮತ್ತು ಮನುಷ್ಯನಿಗೆ ಬೇಕಾದ ಹಾಗೆ ತಾವು ಮಾಡದಿದ್ದರೆ ತಮ್ಮನ್ನು ಹೊಡಿಯಬಹುದೆಂದು ತಿಳಿದಿರುವುದರಿಂದ ಸ್ವಲ್ಪ ಹೆದರಿಕೆ ಕೂಡ!

ಅವು ತಮ್ಮ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತವೆ, ಇದು ತುಂಬಾ ವಿಚಿತ್ರ. ನಾಯಿಗಳು, ಉದಾಹರಣೆಗೆ ಕುರಿಗಳ ಹಿಂಡಿನೊಂದಿಗಿರುವ ನಾಯಿ, ಮನುಷ್ಯರಿಂದ ದೂರ ಹಿಂಡಿನೊಂದಿಗೆ ಇರುತ್ತದೆ ಮತ್ತು ಬಹಳ ಸ್ವತಂತ್ರ ಸ್ವಭಾವವನ್ನು ಹೊಂದಿರುತ್ತದೆ (ಅದು ಕಾಲಕಾಲಕ್ಕೆ ಮನೆಗೆ ಬರುತ್ತದೆ ಮತ್ತು ತನ್ನ ಯಜಮಾನನ್ನು ಚೆನ್ನಾಗಿ ತಿಳಿದಿದೆ, ಆದರೆ ಅಗಾಗ್ಗೆ ಅವನನ್ನು ನೋಡುವುದಿಲ್ಲ) ಒಂದು ವೇಳೆ ಹಾವು ಅದನ್ನು ಕಚ್ಚಿದರೆ, ಅದು ಒಂದು ಮೂಲೆಯಲ್ಲಿ ಉಳಿಯುತ್ತದೆ, ಸ್ವತಃ ನೆಕ್ಕಿಕೊಳ್ಳುತ್ತದೆ ಮತ್ತು ಅದು ಗುಣಮುಖವಾಗುವವರೆಗೆ ಅಗತ್ಯವಿರುವ ಎಲ್ಲವನ್ನೂ ಮಾಡುತ್ತದೆ. ಅದೇ ನಾಯಿ, ಒಂದು ವೇಳೆ ಅದು ನಿಮ್ಮೊಂದಿಗೆ ಉಳಿದು ಹಾವಿನಿಂದ ಕಚ್ಚಿಸಿಕೊಂಡರೆ, ಮನುಷ್ಯನಂತೆ ಸದ್ದಿಲ್ಲದೆ ಸಾಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/236–237**

**ವಂಶದ ಸಹಜ ಗುಣ**

ಅಲ್ಲಿ ವಂಶದ ಸಹಜ ಗುಣವೊಂದಿದೆ, ತಮ್ಮ ಒಳಿತಿಗಾಗಿ ತಮ್ಮೆಲ್ಲ ಚಟುವಟಿಕೆಗಳನ್ನು ನಿಯಂತ್ರಿಸುವಂಥ ಒಂದು ಬಹಳ ಯೋಗ್ಯವಾದ ಸಹಜ ಗುಣ, ಮತ್ತು ಸ್ವಯಂಚಾಲಿತವಾಗಿ, ಅದನ್ನು ತಿಳಿದುಕೊಳ್ಳದೆಯೆ ಆ ವಂಶದ, ಪ್ರತಿಯೊಂದು ವಂಶದ ದೃಷ್ಟಿಕೋನದಿಂದ ಸಂಪೂರ್ಣವಾಗಿ ಸಮಂಜಸವಾದಂಥ ವಂಶದ ಈ ಸಹಜ ಗುಣಕ್ಕೆ ಅವುಗಳು ಒಳಪಟ್ಟಿರುತ್ತವೆ. ಆ ಪ್ರಾಣಿಗಳು ಕೆಲವು ಕಾರಣಗಳಿಂದ ಅಥವಾ ಇನ್ನಾವುದರಿಂದಲೋ ಅದರಿಂದ ಮುಕ್ತಿಯನ್ನು ಹೊಂದುತ್ತವೆ – ಸ್ವಲ್ಪ ಸಮಯದ ಹಿಂದೆ ನಾನು ಹೇಳುತ್ತಿದ್ದಂತೆ, ಮನುಷ್ಯನ ಹತ್ತಿರ ವಾಸಿಸುವ ಅವುಗಳು ವಂಶದ ಸಹಜ ಗುಣಗಳಿಗೆ ವಿಧೇಯವಾಗಿರುವುದನ್ನು ಬಿಟ್ಟು ಮನುಷ್ಯನಿಗೆ ವಿಧೇಯವಾಗಿರಲು ಪ್ರಾರಂಭಿಸುತ್ತವೆ – ತಪ್ಪು ದಾರಿ

ಹಿಡಿಯುತ್ತವೆ ಮತ್ತು ತಮ್ಮ ವಂಶದ ಗುಣಲಕ್ಷಣಗಳನ್ನು ಕಳೆದುಕೊಳ್ಳುತ್ತವೆ. ಒಂದು ಪ್ರಾಣಿಯನ್ನು ಮಾನವನ ಪ್ರಭಾವದಿಂದ ಮುಕ್ತಗೊಳಿಸಿ ಅದರ ಸಹಜ ಜೀವನವನ್ನು ನಡೆಸಲು ಬಿಟ್ಟರೆ ಅದು ತನ್ನದೇ ಆದ ದೃಷ್ಟಿಕೋನದಿಂದ ಅತ್ಯಂತ ಯೋಗ್ಯವಾದ ಜೀವಿ, ಏಕೆಂದರೆ ಅದು ತನ್ನ ಸ್ವಭಾವ ಮತ್ತು ತನ್ನದೇ ಆದ ಒಳ್ಳೆಯದಕ್ಕೆ ಅನುಗುಣವಾದ ವಿಷಯಗಳನ್ನು ಮಾತ್ರ ಮಾಡುತ್ತದೆ. ಸ್ವಾಭಾವಿಕವಾಗಿ ಅದು ವಿಪತ್ತುಗಳನ್ನು ಎದುರಿಸುತ್ತದೆ, ಏಕೆಂದರೆ ಅದು ಇತರ ಎಲ್ಲ ವಂಶಗಳೊಂದಿಗೆ ಯುದ್ಧದಲ್ಲಿದೆ, ಆದರೆ ಅದು ಸ್ವತಃ ಮೂರ್ಖತನದಿಂದ ವರ್ತಿಸುವುದಿಲ್ಲ. ಮೂರ್ಖತನಗಳು ಮತ್ತು ವಿಕೃತತೆಯು ಜಾಗೃತ ಮನಸ್ಸು ಮತ್ತು ಮಾನವ ವಂಶದಿಂದ ಪ್ರಾರಂಭವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/102**

## ಮನುಷ್ಯನ ಹಾಗೆ ನಡೆದು ಕಾಣೆಯಾದ ವಾನರ

ಹೌದು, ಆದಿ ಪ್ರಾಣಿಗಳನ್ನು ಸಸ್ಯಗಳಿಂದ ಭೇದ ಮಾಡುವುದು ಕಷ್ಟ, ಅಲ್ಲಿ ಯಾವುದೇ ಪ್ರಜ್ಞೆ ಇಲ್ಲ. ಅಲ್ಲಿ ನೀವೆಲ್ಲ ಪ್ರಾಣಿ ಪ್ರಭೇದಗಳನ್ನು ನೋಡುತ್ತೀರಿ, ಅವುಗಳನ್ನು ನೀವು ತಿಳಿದಿದ್ದೀರಿ, ಅಲ್ಲವೇ, ನಿಶ್ಚವಾಗಿಯೂ ಉನ್ನತ ಪ್ರಾಣಿಗಳವರೆಗೆ ಹೆಚ್ಚಿನ ಪ್ರಜ್ಞೆಯಿದೆ. ಅವುಗಳು ತಮ್ಮದೇ ಆದ ಸಂಪೂರ್ಣ ಸ್ವತಂತ್ರ ಇಚ್ಛೆಯನ್ನು ಹೊಂದಿವೆ. ಉದಾಹರಣೆಗಾಗಿ ಆನೆಯಂತೆ, ಅವುಗಳು ಬಹಳ ಪ್ರಜ್ಞಾವಂತ ಮತ್ತು ಅದ್ಭುತ ಬುದ್ಧಿವಂತ ಪ್ರಾಣಿಗಳು; ಆನೆಗಳ ಬಗ್ಗೆ ಮತ್ತು ಅವುಗಳ ಅದ್ಭುತ ಬುದ್ಧಿವಂತಿಕೆಯ ಎಲ್ಲಾ ಕಥೆಗಳು ನಿಮಗೆ ತಿಳಿದಿವೆ. ಆದ್ದರಿಂದ, ಇದು ಈಗಾಗಲೇ ಮನಸ್ಸಿನ ಅತ್ಯಂತ ಗ್ರಹಿಸಬಹುದಾದ ನೋಟವಾಗಿದೆ. ಮತ್ತು ಈ ಪ್ರಗತಿಶೀಲ ಬೆಳವಣಿಗೆಯ ಮೂಲಕ, ನಾವು ಇದ್ದಕ್ಕಿದ್ದಂತೆ ಕಣ್ಮರೆಯಾದ ವಂಶವೊಂದಕ್ಕೆ ಹೋಗುತ್ತೇವೆ – ಅದರ ಕುರುಹುಗಳು ಕಂಡುಬಂದಿವೆ – ಕೋತಿಯಂತಹ ಮಧ್ಯಂತರ ಪ್ರಾಣಿ ಅಥವಾ ಕೋತಿಯಂತೆಯೇ ಇರುವ ಪ್ರಾಣಿ – ನಮಗೆ ತಿಳಿದಿರುವಂತೆ ಕೋತಿಯಲ್ಲದಿದ್ದರೂ, ಅದಕ್ಕೆ ಸಮೀಪವಿರುವ, ಸಮಾನವಾದ ಏನಾದರೊಂದು – ಆದರೆ ಈಗಾಗಲೆ ಎರಡು ಕಾಲುಗಳ ಮೇಲೆ ನಡೆಯುವಂಥ ಪ್ರಾಣಿ. ಮತ್ತು ಅಲ್ಲಿಂದ ನಾವು ಮನುಷ್ಯನಲ್ಲಿಗೆ ಬರುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/212** **– ಶ್ರೀಮಾತೆ**



ಸೆಳೆದಿತ್ತವಳೊಳಗಿನ 'ಶಕ್ತಿ' ಜಗದುಪಮಾನವ ಪಶು–ಪಕ್ಷಿಗಳಂ;
ಅವಳಾತ್ಮದ ವಿಶಾಲತೆ ಮೇಣ್ ಮುಕ್ತಾನಂದದೊಡನವಳ್
ಭಾಗಿಯಾಗಿಸಿರ್ದಳ್ ಪಶು–ಪಕ್ಷಿ, ಪುಷ್ಪ ಮೇಣ್ ವೃಕ್ಷಗಳ
ಸೋತ್ಸುಕ–ವರ್ಣಮಯ ಸುಭವ್ಯತಾ–ಕಲಿತ ಜೀವಂಗಳಂ.
ಪ್ರತ್ಯುತ್ತರಿಸುತಿರ್ದುವವುಗಳಮವಳ್ಗೆ ಸರಲ–ಹೃದಯದಿಂ.
ಆದೊಡಸ್ಪಷ್ಟ ಅಶಾಂತಕಾರಿ ತತ್ತ್ವಮದಾವುದೊವೊಂದು
ನೆಲಸಿರ್ಪುದೊಂದಿನಿತು ಪ್ರಮಾಣದೋಳ್ ಮಾನವನೋಳ್ ತಾಂ;
ತಿಳಿದಿರ್ಪನದಮಾದೊಡೆ ತಿರುಗುತಿಹನ್ ಸೂದೂರಂ 'ದಿವ್ಯ–ಜ್ಯೋತಿ'ಯಿಂ
ಆಯ್ದು ಸಲೆ ಮೆಚ್ಚುತಲಿ ಪತನದ ತಮಸ್–ಅಜ್ಞತೆಯಂ ತಾನ್.

**[ಸಾವಿತ್ರಿ; ದಳ 4 ಸರ್ಗ 1 ಪುಟ 366]**

**– ಮಂದರ್ಕೆ ಮಾಧವ ಪೈ**

# ಮಾನವ ಮತ್ತು ಪ್ರಾಣಿ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ.**

## ನಿರಂತರ ಒಗಟು (ರಹಸ್ಯ)

ಕೆಲ ಸಮಯದ ಹಿಂದೆ, ನಾನು ಪ್ರಾಣಿ ಜೀವನದ ಕುರಿತು ಗುರುತಿಸಿಕೊಳ್ಳುವ ಅನುಭವ ಹೊಂದಿದ್ದೆ, ಮತ್ತು ಪ್ರಾಣಿಗಳು ನಮ್ಮನ್ನು ತಿಳಿದುಕೊಳ್ಳುವುದಿಲ್ಲಾ ಎಂಬುದು ನಿಜ; ಅವುಗಳ ಪ್ರಜ್ಞೆ ಯಾವ ರೀತಿ ಇದೆಯೆಂದರೆ ನಾವು ಅವುಗಳನ್ನು ಸಂಪೂರ್ಣವಾಗಿ ಕಡೆಗಣಿಸಿದ್ದೆವೆ. ಮತ್ತು ಅಲ್ಲಿಗೂ ಕೂಡ ನನಗೆ ಸಾಕು ಪ್ರಾಣಿಗಳ ಬಗ್ಗೆ ಗೊತ್ತು – ಬೆಕ್ಕು ಮತ್ತು ನಾಯಿಗಳ ಬಗ್ಗೆ, ಆದರೆ ವಿಶೇಷವಾಗಿ ಬೆಕ್ಕುಗಳು – ಅವುಗಳು ನಮ್ಮನ್ನು ತಿಳಿಯಲು ಹೆಚ್ಚು ಕಡಿಮೆ ಯೋಗಪ್ರಜ್ಞೆಯ ಪ್ರಯತ್ನವನ್ನು ಮಾಡುತ್ತವೆ. ಆದರೆ ಸಾಮಾನ್ಯವಾಗಿ ನಾವು ಬದುಕುವ ಮತ್ತು ನಟಿಸುವುದನ್ನು, ಅವುಗಳು ನೋಡಿದಾಗ, ಅವುಗಳು ತಿಳಿದುಕೊಳ್ಳುವುದಿಲ್ಲಾ, ನಾವಿದ್ದಂತೆ ಅವುಗಳು ನೋಡೊದಿಲ್ಲಾ ಮತ್ತು ನಮ್ಮಿಂದಾಗಿ ಅವುಗಳು ಕಷ್ಟಪಡುತ್ತವೆ. ನಾವು ಅವುಗಳಿಗೆ ನಿರಂತರ ಒಗಟಾಗಿರುತ್ತವೆ. ಅವುಗಳ ಸಣ್ಣ ಪ್ರಮಾಣದ ಪ್ರಜ್ಞೆಯಿಂದ ನಮ್ಮ ಜೊತೆ ಸಂಪರ್ಕ ಹೊಂದಿರುತ್ತದೆ. ಮತ್ತು ಇದೆ ರೀತಿ ನಾವು ಸುಪ್ರಮಾನಸ ಜಗತ್ತು ನೋಡಿದಾಗ ನಮಗೂ ಹಾಗೆ ಆಗುತ್ತದೆ. ಯಾವಾಗ ಪ್ರಜ್ಞೆಯ ಸಂಪರ್ಕದಲ್ಲಿದ್ದಾಗ ಮಾತ್ರ ನಾವು ಅದನ್ನು ನೋಡಬಹುದು ಆವಾಗಲೂ ಕೂಡ, ನಮ್ಮ ಅಸ್ತಿತ್ವದ ಯಾವ ಭಾಗ ಪರಿವರ್ತನೆಯಾಗಿರುವುದೊ, ಆ ಭಾಗ ಮಾತ್ರ, ಅದು ಹೇಗಿದಿಯೋ ಹಾಗೆಯೇ ಅದನ್ನು ಹಾಗೆ ನೊಡಲು ಸಾದ್ಯ ಇಲ್ಲಾ,  ಅಂದರೆ, ಎರಡು ಜಗತ್ತಾಗಿರುತ್ತವೆ, ಒಂದು ಮಾನವ ಜಗತ್ತು ಮತ್ತೊಂದು ಪ್ರಾಣಿ ಜಗತ್ತು ಬೇರೆಯಾಗಿಯೇ ಇರುತ್ತವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 3, 1958**

## ದುರಂತದೊಂದಿಗೆ ವ್ಯವಹರಿಸುವುದು

ಇತ್ತೀಚಿಗೆ, ಇದನ್ನು ಸ್ವಲ್ಪ ಸೂಕ್ಷ್ಮವಾಗಿ ನೋಡುತ್ತಿದ್ದೆ. ನಾನು ಒಂದೇ ರೀತಿಯ ಘಟನೆಗಳು ಮಾನವರಿಗೆ ಮತ್ತು ಪ್ರಾಣಿಗಳಿಗೆ ಆಗುವುದನ್ನು ನೋಡುತ್ತಿದ್ದೆ, ನೀವು ಪ್ರಾಣಿಗಳ ಜೊತೆಗೆ ಗುರುತಿಸಿಕೊಂಡು ನೋಡಿದಲ್ಲಿ, ನೀವು ಬಹಳ ಸ್ಪಷ್ಟವಾಗಿ ನೋಡುವಿರಿ ಪ್ರಾಣಿಗಳು ಅದನ್ನು ಬಹಳ ದುಃಖಮಯವಾಗಿ ತೆಗೆದುಕೊಳ್ಳುವುದಿಲ್ಲಾ.

ಮನುಷ್ಯನ ಸಂಪರ್ಕಕ್ಕೆ ಬಂದವುಗಳನ್ನು ಬಿಟ್ಟು ಉಳಿದಾವ ಪ್ರಾಣಿಗಳು ಈ ರೀತಿಯ ತೊಂದರೆ ಅನುಭವಿಸುವದಿಲ್ಲ; ಆದರೆ ಅದು ಅವುಗಳ ಸ್ವಾಭಾವಿಕ ಸ್ಥಿತಿ. ಅವುಗಳು ಪ್ರಾಣಿ ಮತ್ತು ಮನುಷ್ಯರ ನಡುವಿನ ಜೀವಿಗಳಾಗುತ್ತವೆ... ಮತ್ತು ಅವುಗಳು ಮಾನವನಿಂದ ಮೊದಲನೆಯದಾಗಿ ಕಲಿಯುವುದೇನೆಂದರೆ, ಅವನ ನ್ಯೂನ್ಯತೆಗಳನ್ನು – ಅವೇ ಸುಲಭವಾಗಿ ಕಲಿಯುವಂತಹ ಸಂಗತಿಗಳು! ಮತ್ತು ವಿನಾಕರಣ ತಮ್ಮಷ್ಟಕ್ಕೆ ತಾವೇ ಅಸಂತೋಷಗೊಳ್ಳುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/147**

**ಸಾಮರಸ್ಯವನ್ನು ಬಯಸುವುದು**

ನಿಜವಾದ ಪ್ರಾಣಿಗಳು ಉತ್ತಮವಾಗಿವೆ ಮತ್ತು ಅವುಗಳು ತಮ್ಮೊಳಗೆ ಬಹಳ ಸಾಮರಸ್ಯದಿಂದಿವೆ ಅವುಗಳ ಮನುಷ್ಯರ ತರಹ ಜಗಳವಾಡುವುದಿಲ್ಲಾ. ಅವು ಸುಮ್ಮನೆ ಗಾಳಿಯಲ್ಲಿ ಮಾತಾನಾಡುವುದಿಲ್ಲಾ, ಅವುಗಳು ತಮ್ಮೊಳಗೇ ಕೆಲವನ್ನು ಕೆಳಮಟ್ಟದವೆಂದು, ದೂರ ಇಡುವುದಿಲ್ಲಾ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/272**

ಪ್ರಾಣಿಗಳು ನಾವು ಇರುವ ಹಾಗೆ ಅಸಂತೋಷದಿಂದ ಇಲ್ಲವೇ ಇಲ್ಲಾ, ಶ್ರೀ ಅರವಿಂದರು ಹೇಳುವ ಹಾಗೆ ಭ್ರಷ್ಟತೆಯನ್ನು ಹೊಂದಿದ ಮನುಷ್ಯನ ಜೊತೆ ಯಾವ ಪ್ರಾಣಿಗಳು ಜೀವಿಸುತ್ತವೆಯೊ ಅವೂ ಭ್ರಷ್ಟವಾಗಿವೆ. ನಾಯಿಗಳಿಗೆ ಪಾಪ ಮತ್ತು ಪಾಪ ಪ್ರಜ್ಞೆಯ ಸಂವೇದನೆ ಇದೆ. ಏಕೆಂದರೆ ಅವುಗಳ ಏಕೈಕ ಅಭೀಪ್ಸೆ ಎಂದರೆ ಮಾನವನಂತೆ ಆಗುವುದು – ಮನುಷ್ಯನು ದೇವರು – ಮತ್ತು ಆಮೇಲೆ, ಭಿನ್ನತೆ, ಸುಳ್ಳುತನ, ಇವೆಲ್ಲವನ್ನೂ ನಾಯಿಗಳು ಅರಿಯುತ್ತವೆ, ಸುಳ್ಳು ಹೇಳುತ್ತವೆ. ಮನುಷ್ಯರು ಅದನ್ನು ಮೆಚ್ಚುತ್ತಾರೆ; ಏಕೆಂದರೆ ಅವರು ಹೇಳುತಾ ್ತರೆ "ಓಹ್ ಅವು ಎಷ್ಟು ಬುದ್ಧಿವಂತ ಇದ್ದಾವೆ ಎಂದು!" ಅವುಗಳು ತಮ್ಮ ದೈವತ್ವವನ್ನು ಕಳೆದುಕೊಳ್ಳುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/347–48**

**ವಿಕೃತಿಯು ಮಾನವನ ಒಂದು ರೋಗ**

ವಿಕೃತಿಯು ಮಾನವನ ಒಂದು ರೋಗ ಅದು, ಪ್ರಾಣಿಗಳಲ್ಲಿ ಬಹಳ ವಿರಳವಾಗಿ ಆಗುತ್ತದೆ, ಮತ್ತು ಮಾನವನ ಸಮೀಪ ಸಂಪರ್ಕಕ್ಕೆ ಬಂದ ಪ್ರಾಣಿಗಳಲ್ಲಿ

ಮಾತ್ರ ಮತ್ತು ಅವನ ವಿಕೃತಿಯಿಂದ ಮಾಲಿನ್ಯಗೊಂಡವುಗಳಲ್ಲಿ ಕಂಡುಬರುತ್ತದೆ. ಉತ್ತರ ಆಫ್ರಿಕದ ಅಲ್ಜಿರಿಯಾದ ಕೆಲವು ಅಧಿಕಾರಿಗಳ ಸಂಬಂಧಪಟ್ಟಂತೆ ಇದೊಂದು ಕಥೆ. ಅವರೊಂದು ಕೋತಿಯನ್ನು ಸಾಕಿದ್ದರು. ಕೋತಿಯು ಅವರೊಟ್ಟಿಗೆ ವಾಸಿಸುತ್ತಿತ್ತು. ಅದೊಂದು ರಾತ್ರಿ ಊಟಕ್ಕೆ ಕುಳಿತಾಗ, ಅವರಿಗೆ ವಿಡಾಂಬನಾತ್ಮಕ ಕಲ್ಪನೆಯೊಂದಿಗೆ ಅದಕ್ಕೆ ಕುಡಿಯಲು ಮದ್ಯವನ್ನು ಕೊಟ್ಟರು. ಕೋತಿ ಮೊದಲು ಬೇರೆಯವರು ಕುಡಿಯುವುದನ್ನು ನೋಡಿ ಅದಕ್ಕೆ ಸ್ವಲ್ಪ ಆಸಕ್ತಿದಾಯಕವೆನಿಸಿತು, ಮತ್ತು ಅದು ಒಂದು ಗ್ಲಾಸ್ ಮದ್ಯವನ್ನು ಕುಡಿಯಿತು. ತದನಂತರ ಅದು ಹುಷಾರು ತಪ್ಪಿತು ಎಷ್ಟು ಸಾಧ್ಯವೋ ಅಷ್ಟು, ನೋವಿನಿಂದ ಟೇಬಲ್ ಕೆಳಗಡೆ ತೂರಿಕೊಂಡಿತು ಮತ್ತು ಅದು ಬಹಳ ಕೆಟ್ಟದಾಗಿ ನೋವು ಅನುಭವಿಸಿತು. ಭೌತಿಕ ವಿಕೃತಿ ಹೊಂದಿಲ್ಲದಿದ್ದಾಗ ಮದ್ಯದ ಪ್ರಭಾವ ತನ್ನಿಂದ ತಾನೆ ಹೇಗೆ ಆಗುತ್ತದೆ ಎಂದು ಮನುಷ್ಯರಿಗೆ ಉದಾಹರಣೆಯೊಂದಿಗೆ ತೋರಿಸಿದಂತಿತ್ತು. ಅದು ವಿಷ ಪ್ರಾಶನದಿಂದ ಸಾಯುವುದಲ್ಲಿತ್ತು. ಆದರೆ ಅದು ಗುಣ ಹೊಂದಿತು. ಸ್ವಲ್ಪ ದಿನಗಳ ನಂತರ ಅದಕ್ಕೆ ಮತ್ತೆ ರಾತ್ರಿ ಊಟಕ್ಕೆ ಕರೆಯಲಾಯಿತು ಅದು ಸರಿಯಾಗಿತ್ತು, ಮತ್ತು ಯಾರೋ ಒಬ್ಬರು ಅದರ ಮುಂದೆ ಮತ್ತೆ ಮದ್ಯದ ಗ್ಲಾಸ್‌ನ್ನು ಇಟ್ಟರು. ಅದು ಭಯಂಕರ ಸಿಟ್ಟಿನಿಂದ ಅದನ್ನು ತೆಗೆದುಕೊಂಡಿತು ಮತ್ತು ಕೊಟ್ಟ ವ್ಯಕ್ತಿಯ ಮೇಲೆ ಗ್ಲಾಸನ್ನು ಬೀಸಾಡಿತು..... ಇದರೊಂದಿಗೆ ಅದು ಮನುಷ್ಯರಿಗಿಂತ ತಾನು ಜಾಣ ಎಂದು ತೋರಿಸಿಕೊಟ್ಟಿತು!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/101**

**ಪಾಣಿಗಳಲ್ಲಿ ಪ್ರೀತಿ**

ಮನುಷ್ಯರ ಬಗ್ಗೆ ಪ್ರಾಣಿಗಳಲ್ಲಿ ಯಾವ ತೆರನಾದ ಪ್ರೀತಿ ಇದೆ?

ದಡ್ಡ ಮನುಷ್ಯರು ದೈವದ ಮೇಲೆ ಇಟ್ಟಿರುವ ರೀತಿ, ಪ್ರಾಣಿಗಳ ಪ್ರೀತಿ ಮನುಷ್ಯರ ಮೇಲೆ ಇದೆ. ಅದು ಆರಾಧನೆ, ನಂಬಿಕೆ ಒಂದು ರೀತಿಯ ಭದ್ರತೆಯ ತರಹ ಇದೆ. ಆರಾಧನೆ ನಿಮಗೆ ಇದು ಒಂದು ರೀತಿ ಬಹಳ ಸುಂದರವಾಗಿ ಕಾಣುತ್ತೆ. ಮತ್ತು ಕಾರಣ ಇರದೇ ಇಲ್ಲಾ: ಹೃದಯದಿಂದ ಬಂದ ಆರಾಧನೆ, ಹೇಳಬೇಕೆಂದರೆ ಸ್ವಯಂಪ್ರೇರಿತ ಉದಾಹರಣೆಗಾಗಿ, ನಾಯಿಗಳಿಗೆ ಇದು ಬಹಳ ಉನ್ನತ ಮಟ್ಟದಲ್ಲಿದೆ. ಮತ್ತು ಆಮೇಲೆ, ನಂಬಿಕೆ – ಸ್ವಾಭಾವಿಕವಾಗಿ ಇದು ಬೇರೆಯವುಗಳೊಂದಿಗೆ ಕೂಡಿಕೊಂಡಿರುತ್ತವೆ: ಕೆಲವೊಂದು ಬಯಕೆ ಮತ್ತು

ಅವಲಂಬನೆಯ ಸಂವೇದನೆಯೊಂದಿಗೆ ಇದು ತುಂಬಾ ಸುಂದರವಾದ ಕಡೆಯಲೆಲ್ಲಾ ತುಂಬಿಕೊಂಡಿರುತ್ತದೆ. ಮತ್ತು ನಂತರ ದುರ್ದೈವವಶಾತ್, ಅದು ಸಮ್ಮಿಳಿತವಾಗುತ್ತೆ (ಮತ್ತು ನಾನು ನಂಬಿದ ಹಾಗೆ – ನಾನು ಅಂದುಕೊಂಡ ಹಾಗೆ ಇದು ಪೂರ್ತಿಯಾಗಿ ಮನುಷ್ಯನದೇ ತಪ್ಪು) ಆದರೆ ಇವೆರಡರ ಮಧ್ಯ, ಅಲ್ಲೊಂದು ಮಧ್ಯಂತರವಿದೆ, ಅಲ್ಲಿ ಮನುಷ್ಯನು ತನ್ನ ಬುದ್ದಿವಂತಿಕೆಯನ್ನು ತುಂಬಾ ಕೆಟ್ಟದಾಗಿ ಮತ್ತು ನಿಮ್ನ ಮಟ್ಟದಲ್ಲಿ ಉಪಯೋಗಿಸುತ್ತಾನೆ; ಅವನು ಅದನ್ನು ಲೆಕ್ಕಾಚ್ಚಾರಕ್ಕಾಗಿ, ಪ್ರಾಬಲ್ಯಕ್ಕಾಗಿ, ವಂಚಿಸುವದಕ್ಕಾಗಿ ಉಪಕರಣವನ್ನಾಗಿ ಉಪಯೊಗಿಸುವುದರಿಂದ ಅದು ವಿಕಾರವಾಗುತ್ತದೆ. ನಾನು ನನ್ನ ಜೀವನದಲ್ಲಿ ಮನುಷ್ಯರಿಗಿಂತ ಹೆಚ್ಚಿನದುದನ್ನು ಪ್ರಾಣಿಗಳಲ್ಲಿ ಕಂಡಿದ್ದೇನೆ, ನೀಚ ಲೆಕ್ಕಾಚಾರ, ವಂಚಿಸುವ ಬಯಕೆ ಮತ್ತು ಲಾಭ ಮಾಡಿಕೊಳ್ಳುವುದು ಪ್ರಾಣಿಗಳಲ್ಲಿಲ್ಲಾ. ಅವುಗಳಲ್ಲಿ ಕೆಲವೊಂದು ಪಡೆಯುತ್ತವೆ – ಮನುಷ್ಯನ ಸಂಪರ್ಕದಿಂದ ಅವುಗಳು ಪಡೆಯುತ್ತವೆ – ಆದರೆ ಅವುಗಳಲ್ಲಿ ಕೆಲವಕ್ಕೆ ಅದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/238–40**

**ತಾಯಿಯ ಪ್ರೀತಿ**

ನಾನು ನಿಮಗೆ ಭರವಸೆ ಕೊಡಬಲ್ಲೆ, ಹೂವಿನ ಪದಗುಚ್ಛದಂತೆ ಈ ವಿಷಯದ ಬಗ್ಗೆ ಮಾತನಾಡದೆ, ಉನ್ನತ ಸ್ಥರದ ಪ್ರಾಣಿಗಳಲ್ಲಿ ಪ್ರೀತಿ..... ಸರಿ, ಸಸ್ತನಿಗಳು ತಮ್ಮ ಮಕ್ಕಳ ಮೇಲೆ ಇರುವ ಪ್ರೀತಿಯ ಹಾಗೆ ಇರುತ್ತದೆ: ಅದೇ ಆರಾಧ್ಯತೆ, ಅದೇ ಸ್ವಯಂಕ್ಷಮಾಧಾನ, ಅದೇ ಸ್ವಯಂನಿರಾಕರಣೆ, ವಿದ್ಯೆಗಾಗಿ ಅದೇ ಶ್ರದ್ದೆ, ಅದೇ ತಾಳ್ಮೆ, ಅದೇ..... ನಾನು ಕೇವಲ ಅದ್ಭುತವಾದ ಸಂಗತಿಗಳನ್ನು ಕಂಡಿದ್ದೇನೆ, ಅವುಗಳನ್ನು ಬೆಕ್ಕಿಗೆ ಬದಲಾಗಿ ಒಬ್ಬ ಹೆಣ್ಣುಮಗಳಿಗೆ ಹೊಂದಿಸಿ ಕಾದಂಬರಿಯನ್ನು ಬರೆದರೆ ಓದಿದವರೆಲ್ಲಾ "ಎಂಥಾ ಅದ್ಭುತ ವ್ಯಕ್ತಿ! ತಮ್ಮ ಮಕ್ಕಳಿಗಾಗಿ ಎಂತಹ ಪ್ರೇಮವನ್ನು ಹೊಂದಿದ್ದಾರೆಂದು!" ತಿಳಿಯಿತ್ತಾರೆ. ಖಚಿತವಾಗಿ ಅದೇ ವಿಷಯ. ಅಷ್ಟೇ ಮುಖ್ಯವಾದ ಸಂಗತಿ ಎಂದರೆ, ಬೆಕ್ಕುಗಳು ಬಣ್ಣದ ಮಾತನಾಡುವುದಿಲ್ಲಾ. ಅವು ಪುಸ್ತಕಗಳನ್ನು ಬರೆಯುವುದಿಲ್ಲಾ. ಮತ್ತು ಭಾಷಣ ಮಾಡುವುದಿಲ್ಲಾ, ಅದೊಂದೆ ವ್ಯತ್ಯಾಸ. ಆದರೆ ನಾನು ಆಶ್ಚರ್ಯಕರ ವಿಷಯಗಳನ್ನು ನೋಡಿದ್ದೇನೆ. ಒಂದು ರೀತಿಯಲ್ಲಿ ತನ್ನನ್ನು ತಾನು ಕೊಟ್ಟುಕೊಳ್ಳುವಿಕೆ ಮತ್ತು ಸ್ವಯಂಮರೆವು – ಯಾವಾಗ ಪ್ರೀತಿ ಪ್ರಾರಂಭವಾಗುವುದೋ – ಅದು ಬಂದುಬಿಡುತ್ತದೆ. ಆದರೆ ಮನುಷ್ಯರು...... ನಾನು ಪ್ರಾಮಾಣಿಕವಾಗಿ ನಂಬಿದ್ದೆನೆ,

ಎಲ್ಲಾ ರೀತಿಯಲ್ಲಿ ನಾನು ಅಭ್ಯಸಿಸಿದ್ದೇನೆ, ಪ್ರಾಣಿಗಳು ಆಲೋಚನೆ ಮಾಡದೆ ಇರುವುದರಿಂದ, ಅವುಗಳಲ್ಲಿ ಮನುಷ್ಯರಿಗಿಂತ ಹೆಚ್ಚಿನ ಶುದ್ಧತೆಯಿದೆ, ಮನುಷ್ಯರಾದರೋ ತಮ್ಮ ಹೆಚ್ಚಿನ ಮಾನಸಿಕ ಶಕ್ತಿಯಿಂದ ಅವರ ಪ್ರತಿಫಲಿಸುವ ಸಾಮರ್ಥ್ಯದಿಂದ, ತರ್ಕದಿಂದ, ಅಭ್ಯಾಸದಿಂದ, ಅದೆಲ್ಲಾ, ಓಹ್! ಅವರು ಸುಂದರವಾದ ಒಂದು ಚಲನೆಯನ್ನು ಕೆಡಿಸಿದ್ದಾರೆ. ಅವರು ಲೆಕ್ಕಾಚಾರ, ತರ್ಕ, ಸಂದೇಶ ಮತ್ತು ಸಂಘಟಿಸಲು ಪ್ರಾರಂಭಿಸುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/106**

## ಪ್ರಾಣಿ ಮತ್ತು ಮನುಷ್ಯ ಜೀವಿಗಳಲ್ಲಿ ಗ್ರಹಿಸುವಿಕೆ ಮನಸ್ಸು

(ಶ್ರೀ ಅರವಿಂದರು ಬರೆದಂತೆ) ಅದು ತನ್ನ ರೀತಿಯಲ್ಲಿ, ಅದು ತನ್ನ ರೀತಿಯ ಅಜ್ಞಾನದಿಂದ ಮುಂದುವರೆಯುತ್ತಿದ್ದರಿಂದ, ಮಾನಸಿಕ ಗ್ರಹಿಸುವಿಕೆ ಕಡಿಮೆಯಿರುವುದರಿಂದ, ಹೆಚ್ಚಾದಂತ ವಿರೋಧ, ಹೆಚ್ಚು ಪ್ರಜ್ಞಾಸ್ಥರದ ಜೀವಿಗಳಲ್ಲೆ ಇದೆ. ಜಡವೆಂದು ಕರೆಯುವ ವಸ್ತುವೇ ಹೆಚ್ಚು ಗ್ರಹಿಕೆಯುಳ್ಳದ್ದಾಗಿದೆ, ಹೆಚ್ಚಾಗಿ – ಅದು ಪ್ರತಿರೋಧ ತೋರುವುದಿಲ್ಲ ಮನುಷ್ಯರಿಗಿಂತ ಸಸ್ಯಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಗ್ರಹಿಸುವುದು ಹೆಚ್ಚಾಗಿದೆ. ಸಂಘಟಿತ ಮನಸ್ಸಿನ ಮೇಲೆ ಕಾರ್ಯಮಾಡುವುದು ಹೆಚ್ಚಿನ ಕಷ್ಟ; ಹೆಚ್ಚು ಸ್ಪಷ್ಟಗೊಂಡ ಜೀವಿಗಳಲ್ಲಿ, ಸಂಘಟಿತ ಮಾನಸಿಕ ಪ್ರಜ್ಞೆಯು ಕಲ್ಲಿನಷ್ಟೆ ಗಟ್ಟಿಯಾಗಿರುತ್ತದೆ! ಅದು ಪ್ರತಿರೋಧಿಸುತ್ತದೆ. ನನ್ನ ಅನುಭವದ ಪ್ರಕಾರ, ಯಾವುದರಲ್ಲಿ ಪ್ರಜ್ಞೆ ಇಲ್ಲವೊ ಅದು ಖಂಡಿತವಾಗಿ ಸುಲಭವಾಗಿ ಹಿಂಬಾಲಿಸುತ್ತದೆ. ನಲ್ಲಿಯಲ್ಲಿ ಬರುತ್ತಿರುವ ನೀರು, – ಇವುಗಳಲೆಲ್ಲಾ ಎಂತಹ ಆನಂದ ಮತ್ತು ತೃಪ್ತಿ! ಅವುಗಳಲ್ಲಿ ಕಡಿಮೆ ಅಹಂ, ನೀವು ನೋಡುವ ಹಾಗೆ ಅದು ಪ್ರಜ್ಞಾಪೂರ್ವಕ ಅಹಂ ಅಲ್ಲಾ. ಜೀವಿ ಬೆಳೆದ ಹಾಗೆಲ್ಲಾ ಅದರಲ್ಲಿ ಅಹಂ ಹೆಚ್ಚು ಹೆಚ್ಚು ಪ್ರಜ್ಞಾಪೂರ್ವಕ ಮತ್ತು ಪ್ರತಿರೋದಕವಾಗುತ್ತದೆ. ಬಹಳ ಪ್ರಾಥಮಿಕ, ಬಹಳ ಸರಳ ಜೀವಿಗಳು, ಚಿಕ್ಕ ಮಕ್ಕಳು ಮೊದಲು ಪ್ರತಿಸ್ಪಂದಿಸುತ್ತವೆ; ಏಕೆಂದರೆ ಅವುಗಳಲ್ಲಿ ಸಂಘಟಿತ ಅಹಂ ಇಲ್ಲಾ. ಆದರೆ ಈ ದೊಡ್ಡ ವ್ಯಕ್ತಿಗಳು! ತಮ್ಮ ಮೇಲೆ ಕೆಲಸ ಮಾಡಿಕೊಂಡು ಜನರು, ಯಾರು ತಮ್ಮ ಮೇಲೆ ಪ್ರಭುತ್ವ ಸಾಧಿಸಿದವರು, ಯಾರು ಸಂಘಟಿತರೋ, ಅವರು ಉಕ್ಕಿನಂತಹ ಅಹಂನಿಂದ ಮಾಡಲ್ಪಟ್ಟವರೋ, ಅವರಿಗೆ ಇದು ಬಹಳ ಕಷ್ಟ. ಅವರು ಸಾಕಷ್ಟು ಆಧ್ಯಾತ್ಮದ ಜ್ಞಾನ ಪಡೆದು ಇದೆಲ್ಲದರ ಆಚೆ ಹೋಗಿ ತಮ್ಮ ಅಹಂ ಅನ್ನು ಶರಣಾಗತಗೊಳಿಸಿದರೆ.....

ಇಂತಹ ಪ್ರಕಟಣೆಗಳಲ್ಲಿ ಸ್ವಾಭಾವಿಕವಾಗಿ ಸಿದ್ಧಿ ಹೆಚ್ಚಿನ ಮಟ್ಟದ್ದಾಗಿದ್ದು – ಇದನ್ನು ಪಾಲಿಸುವುದು ಹೆಚ್ಚಿನ ಕಷ್ಟ, ಆದರೆ ಪರಿಣಾಮ ಹೆಚ್ಚು ಪರಿಪೂರ್ಣವಾಗಿರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಜೂನ್ 6, 1958**



**ನಾನೇ ಆ ಮಾತೆಯಾಗಿದ್ದೇನೆ**

ಒಂದು ದಿನ ಶ್ರೀಮಾತೆಯವರು ಆಟದ ಮೈದಾನದಲ್ಲಿ, ಬೇರೆ ಬೇರೆ ವಿಷಯಗಳ ಬಗೆಗೆ ಚರ್ಚೆ ಮಾಡುತ್ತಿದ್ದರು. ಆಗ ಅವರು ಹೇಳಿದ್ದೇನೆಂದರೆ:

“ನಾನು ಪ್ರತಿ ದಿನವೂ ಸಂಜೆ ಬೇರೆ ಬೇರೆ ಸ್ಥಳಗಳಿಗೆ ಹೋಗುತ್ತಿದ್ದೇನೆ. ಪವಿತ್ರಾ ಕಾರನ್ನು ಚಲಾಯಿಸುವದು ಸಾಮಾನ್ಯ ವಿಷಯವಾಗಿತ್ತು. ಯಾವಾಗ ನಿಗದಿಗೊಳಿಸಲ್ಪಟ್ಟ ಸ್ಥಳವನ್ನು ತಲುಪಲಾಗುತ್ತಿತ್ತೋ, ಆ ಸ್ಥಳದಲ್ಲಿ ಕಾರನ್ನು ನಿಲ್ಲಿಸಿ, ಕಾರಿನ ಬಾಗಿಲು ತೆರೆದುಕೊಂಡು ಹೊರಗಡೆ ಸುತ್ತಾಡುವದಾಗಿತ್ತು.

ಇಂತಹದೇ ಒಂದು ಘಟನೆಯಲ್ಲಿ, ನಾನು ಕಾರಿನಲ್ಲಿಯೇ ಕುಳಿತಿದ್ದೆ, ಹವೆಯೂ ಅತ್ಯಂತ ಆಹ್ಲಾದಮಯವಾಗಿತ್ತು. ಶಾಂತವೂ ಇತ್ತು. ಕಾರಿನಲ್ಲಿದ್ದೇ ನಾನು ಹಲವಾರು ಸುಂದರ ದೃಶ್ಯಗಳನ್ನು ನೋಡುತ್ತಿದ್ದೆ. ಅಷ್ಟರಲ್ಲಿ ಇದ್ದಕಿದ್ದಂತೆಯೇ ಒಂದು ದೊಡ್ಡ ಕಾಳಿಂಗ ಸರ್ಪವು ನೇರವಾಗಿ ನಾನಿದ್ದ ಸ್ಥಳಕ್ಕೇ ಬಂದು, ನನ್ನ ಕಾಲಿನ ಬಳಿಯಲ್ಲಿಯೇ, ತನ್ನ ದೊಡ್ಡದಾದ ಹೆಡೆಯನ್ನು ಬಿಚ್ಚಿಕೊಂಡು

ನಿಂತುಕೊಂಡಿತು. ನಾನೂ ಸಹಿತ ಅದನ್ನೇ ಕೆಲಕಾಲ ದಿಟ್ಟಿಸಿ ನೋಡುತ್ತಾ, 'ಸರಿ, ಇನ್ನು ನೀನು ಮರಳಿ ಹೋಗಬಹುದು' ಎಂದು ಅದಕ್ಕೆ ಹೇಳಿದೆ.

ಅದನ್ನು ಕೇಳಿದ ತಕ್ಷಣವೇ ಆ ಸರ್ಪವು ತನ್ನ ಹೆಡೆಯನ್ನು ಇಳಿಸಿಕೊಂಡು, ಅಲ್ಲಿಂದ ಸರಿದು ಹೋಯಿತು."

ಯಾವುದೇ ಮಾತೆಯು ಈ ರೀತಿಯಲ್ಲಿ ಸರ್ಪದ ಸಂಗಡ ವ್ಯವಹರಿಸುವದನ್ನು ನಾನು ಮೆಚ್ಚುವದಿಲ್ಲ. ಅದರಲ್ಲೂ ಹಾವಿನ ಸಂಗಡ ಈ ರೀತಿಯಲ್ಲಿ ಆಟವಾಡುವದನ್ನಂತೂ ಯೋಚಿಸಲಾರೆ. ಅದಕ್ಕಾಗಿಯೇ ಗಟ್ಟಿಯಾದ ಧ್ವನಿಯಲ್ಲಿಯೇ ಶ್ರೀಮಾತೆಯವರನ್ನು ಕೇಳಿದ್ದೆ, "ನೀವು ಈ ರೀತಿಯಲ್ಲಿ ಸರ್ಪವನ್ನು ಪ್ರೋತ್ಸಾಹಿಸುವದು ತರವಲ್ಲ, ಇಲ್ಲವಾದರೆ ನೀವೇ ಅದನ್ನು ನೇರವಾಗಿ ಸಾಯಿಸಬಹುದಾಗಿತ್ತು."

ಅದನ್ನು ಕೇಳುತ್ತಿದ್ದಂತೆಯೇ ಶ್ರೀಮಾತೆಯವರು, ಮಧ್ಯದಲ್ಲಿಯೇ ತಡೆದು, 'ಇಲ್ಲ, ಇಲ್ಲ, ನಾನು ಆ ರೀತಿ ಮಾಡಲಾರೆ. ಅದು ಹೇಗೆ ತಾನೆ ನಾನು ಅದನ್ನು ಕೊಲ್ಲಬಲ್ಲೆ? ನಾನು ಮಾತೆಯಾಗಿದ್ದೇನೆ ಅಲ್ಲವೇ?'

**– ಪ್ರೀತಿದಾಸ ಗುಪ್ತಾ**

**ಶಾಶ್ವತದ ಘಟನೆಗಳು ಪುಟ 748**

## ಪ್ರಾಣಿಗಳೊಡನೆ ಒಡನಾಟ

**– ಅನುವಾದ: ನಾಗಜ್ಯೋತಿ ಯಲಿವಾರ**

**ಪರಿಪೂರ್ಣ ಸಮತೆ**

*ಹಾವುಗಳು ಮತ್ತು ಚೇಳುಗಳಂತಹ ಕೆಲವು ಪ್ರಾಣಿಗಳ ಬಗ್ಗೆ ಸಹಜವಾಗಿ ವಿಕರ್ಷಿಸುವ ಭಾವನೆಯ ಆಧಾರ ಯಾವುದು?*

ಈ ತರಹದ ಅಥವಾ ಯಾವುದೇ ರೀತಿಯ ವಿಕರ್ಷಣೆಯನ್ನು ಅನುಭವಿಸುವುದು ಅತ್ಯವಶ್ಯಕವೇನಲ್ಲ, ಯಾವುದೇ ವಿಕರ್ಷಣೆಯಿಲ್ಲದಿರುವುದು ಯೋಗದ ಮೂಲಭೂತ ಸಾಧನೆಗಳಲ್ಲೊಂದಾಗಿದೆ. ನೀವು ಹೇಳುತ್ತಿರುವ ಈ ವಿಕರ್ಷಣೆಯು ಭಯದಿಂದ ಬಂದಿದೆ; ಅಲ್ಲಿ ಭಯವಿಲ್ಲದಿದ್ದರೆ, ಅದು ಅಸ್ತಿತ್ವದಲ್ಲಿರುತ್ತಿರಲಿಲ್ಲ. ಈ ಭಯವು ಕಾರಣವನ್ನು ಆಧರಿಸಿಲ್ಲ, ಅದು ಪ್ರವೃತ್ತಿಯಿಂದ ಬಂದದ್ದು ಅದು ವೈಯಕ್ತಿಕವಲ್ಲ, ಆದರೆ ಜನಾಂಗೀಯ ಇದು ಸಾಮಾನ್ಯ

ಸಲಹೆಯಾಗಿದೆ. ಮತ್ತು ಇಡೀಯಾಗಿ ಮಾನವನ ಪ್ರಜ್ಞೆಗೆ ಸೇರಿದುದಾಗಿದೆ. ಒಬ್ಬರು ಮಾನವ ದೇಹವನ್ನು ತೆಗೆದುಕೊಂಡಾಗ ಈ ಸಾಮಾನ್ಯ ಸಲಹೆಗಳು ಜನಾಂಗದ ವಿಚಾರಗಳು ಮಾನವಕುಲದ ಜನಾಂಗದ ಭಾವನೆಗಳು, ಸಂಘಗಳು, ಆಕರ್ಷಣೆಗಳು, ವಿಕರ್ಷಣೆಗಳು, ಭಯಗಳ ಸಮೂಹವನ್ನು ಅವರು ಸ್ವೀಕರಿಸುತ್ತಾರೆ, ಆದರೆ ಇನ್ನೊಂದು ದೃಷ್ಟಿಕೋನದಿಂದ ನೋಡಿದಾಗ ಆಕರ್ಷಣೆ ಅಥವಾ ವಿಕರ್ಷಣೆಯ ಸ್ವಭಾವದಲ್ಲಿ ಏನೋ ಒಂದು ಬಹಳ ವೈಯಕ್ತಿಕತೆಯಿಲ್ಲದೆ; ಈ ಚಲನೆಗಳಿಗೆ ಪ್ರತಿಯೊಬ್ಬರೂ ಒಂದೇ ರೀತಿಯಾಗಿರುವುದಿಲ್ಲ ಮತ್ತು ವಿಭಿನ್ನ ಜನರ ಪ್ರಾಣದ ಕಂಪನದ ಗುಣಮಟ್ಟದ ಮೇಲೆ ಅವಲಂಬಿಸಿರುತ್ತದೆ. ಕೆಲವು ಜನರಿದ್ದಾರೆ ಅವರು ಯಾವುದೇ ರೀತಿಯ ಹಾವುಗಳಂತಹ ಜೀವಿಗಳ ಬಗ್ಗೆ ವಿಕರ್ಷಣೆಯ ಭಾವವಿರುವುದಿಲ್ಲ, ಆದರೆ ಮೇಲಾಗಿ ಪ್ರಾಣದ ಆಕರ್ಷಣೆಯ ಮತ್ತು ಆದ್ಯತೆಗಳಿಂದ ಅವುಗಳನ್ನು ಇಷ್ಟಪಡುತ್ತಾರೆ. ಜಗತ್ತು ಆಹ್ಲಾದಕರವಲ್ಲದ ಅಥವಾ ಸುಂದರವಲ್ಲದ ವಸ್ತುಗಳಿಂದ ತುಂಬಿದೆ, ಆದರೆ ಯಾವುದೇ ಕಾರಣವಿಲ್ಲದೆ ಏಕೆ ಒಬ್ಬರು ಸತತವಾಗಿ ಈ ವಸ್ತುಗಳ ಬಗ್ಗೆ ವಿಕರ್ಷಣೆಯ ಭಾವದಲ್ಲಿರಬೇಕು. ಮಾನವನ ಮನವನ್ನು ಗೊಂದಲಗೊಳಿಸುವ ಮತ್ತು ದುರ್ಬಲಗೊಳಿಸುವ ಕುಗ್ಗುವಿಕೆ, ಅಸಹ್ಯ ಮತ್ತು ಭಯದ ಎಲ್ಲಾ ಪ್ರಭಾವದಿಂದ ಹೊರಬರಬಹುದು. ಒಬ್ಬ ಯೋಗಿಯು ಈ ಪ್ರತಿಕ್ರಿಯೆಗಳಿಂದ ಮುಕ್ತನಾಗಬೇಕು; ನೀವು ಎಲ್ಲಾ ಅಸ್ತಿತ್ವದಲ್ಲಿ ಮತ್ತು ವಸ್ತುಗಳಿಲ್ಲ ಮತ್ತು ಘಟನೆಗಳಲ್ಲಿ ಸಂಪೂರ್ಣ ಸಮತೆಯಿಂದಿರುವುದನ್ನು ಯೋಗದ ಮೊದಲ ಹೆಜ್ಜೆಯು ಬಯಸುತ್ತದೆ. ನೀವು ಯಾವಾಗಲೂ ಶಾಂತಿಯಿಂದ, ವಿಚಲಿತರಾಗದೇ ಮತ್ತು ಚಲಿಸದೇ ಇರುವುದರಲ್ಲಿ ಯೋಗಿಯ ಸಾಮರ್ಥ್ಯ ಅಡಗಿದೆ. ಒಂದು ಸಂಪೂರ್ಣ ತಾಳ್ಮೆ ಮತ್ತು ಶಾಂತತೆಯು ನಿಮ್ಮನ್ನು ಎದುರಿಸುವ ಅಪಾಯಕಾರಿ ಮತ್ತು ಉಗ್ರ ಪ್ರಾಣಿಗಳನ್ನು ಸಹ ನಿಶ್ಯಸ್ತ್ರಗೊಳಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/100–101**

## ಪ್ರಾಣಿಗಳ ಮೇಲೆ ಪ್ರಭುತ್ವ

ಒಂದು ಪ್ರಾಣಿಕ ಜೀವಿಯ ಕಣ್ಣಿನಲ್ಲಿ ಕಣ್ಣಿಟ್ಟು ನಿರ್ಭಯವಾಗಿ ನೋಡುವ ಮಾಂತ್ರಿಕ ಪರಿಣಾಮದ ಬಗ್ಗೆ ನಿಮಗೆ ತಿಳಿದಿಲ್ಲ. ಭೂಮಿಯ ಮೇಲೂ ಸಹ, ಪ್ರಾಣಿಗಳು ಎಂದು ನಾವು ಸಾಮಾನ್ಯವಾಗಿ ಕರೆಯುವ ಪ್ರಾಣ ಶಕ್ತಿಯ ಅವತಾರಗಳೊಂದಿಗೆ ನೀವು ಈ ರೀತಿಯಾಗಿ ವ್ಯವಹರಿಸಿದರೆ, ಖಂಡಿತವಾಗಿಯೂ ಸುಲಭವಾಗಿ

ಅವುಗಳ ಮೇಲೆ ಪ್ರಭುತ್ವ ಸಾಧಿಸಬಹುದು. ಸ್ವಲ್ಪವೂ ನಡುಕವಿಲ್ಲದೆ ನೇರ ಕಣ್ಣುಗಳಲ್ಲಿ ನೋಡಿದರೆ ದೈಹಿಕವಾದ ಹುಲಿಯೂ ಸಹ ನಿಮ್ಮಿಂದ ಓಡಿಹೋಗುತ್ತದೆ. ಸ್ವಲ್ಪವೂ ಭೀತಿಯಿಂದ ಅದರ ದೃಷ್ಟಿಯ ಗಮನ ಸಳೆಯಲು ನಿರ್ವಹಿಸಿದರೆ ಹಾವೂ ಎಂದಿಗೂ ನಿಮ್ಮನ್ನು ಕಚ್ಚಲು ಸಾಧ್ಯವಾಗುವುದಿಲ್ಲ. ಭಯದ ನಡುಕದೊಂದಿಗೆ ಕೇವಲ ಅದರೆಡೆಗೆ ದಿಟ್ಟಿಸುವುದರಿಂದ ಏನೂ ಸಹಾಯವಾಗುವುದಿಲ್ಲ. ಅಲ್ಲಿ ಸ್ವಲ್ಪವೂ ಸಹ ಗೊಂದಲವಿರಬಾರದು; ಅದು ತಲೆ ಎತ್ತಿ ನಿಮ್ಮಲ್ಲಿ ಭಯ ಸೃಷ್ಟಿ ಮಾಡಲು ಪ್ರಯತ್ನಿಸುತ್ತಿರುವಾಗ ನೀವು ಶಾಂತಿ ಮತ್ತು ಸಂಗ್ರಹಿತವಾಗಿರಬೇಕು ಮನುಷ್ಯನ ಕಣ್ಣುಗಳಲ್ಲಿ ಒಂದು ಬೆಳಕಿದೆ ಎಂಬುದು ಪ್ರಾಣಿಗಳಿಗೆ ಅರಿವಿದೆ ಅದನ್ನು ಸರಿಯಾಗಿ ಅವುಗಳ ಮೇಲೆ ನಿರ್ದೇಶಿಸಿದರೆ ಅವುಗಳು ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಮನುಷ್ಯನ ನೋಟವು ಸ್ಥಿರ ಮತ್ತು ನಿರ್ಭೀತವಾಗಿದ್ದಾಗ ಅವುಗಳನ್ನು ತೊಡೆದುಹಾಕುವ ಒಂದು ಶಕ್ತಿಯನ್ನು ಹೊಂದಿರುತ್ತದೆ. ಆದ್ದರಿಂದ, ಒಟ್ಟಾರೆಯಾಗಿ ಎರಡು ವಿಷಯಗಳನ್ನು ನೆನಪಿಡಿ; ಎಂದೆಂದಿಗೂ ಭಯಪಡದಿರಿ, ಮತ್ತು ಎಲ್ಲಾ ಪರಿಸ್ಥಿತಿಯಲ್ಲಿಯೂ ನಿಮ್ಮ ಸಾಮರ್ಥ್ಯವನ್ನು ನೂರಪಟ್ಟು ಬಲಶಾಲಿಯಾಗಿಸುವ ಸರಿಯಾದ ಸಹಾಯವನ್ನು ಕರೆಯಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/166**

**ಚಡಪಡಿಸಬಾರದು**

ಆದರೆ ನಾನು ಮತ್ತು ಪ್ರಾಣಿಗಳನ್ನು ಗಮನಿಸಿದ ಜನರೂ ಸಹ ಹೇಳುತ್ತಾರೆ, ಉದಾಹರಣೆಗೆ, ತುಂಬಾ ಬಲಿಶಾಲಿಯಾಗಿರುವ ಪ್ರಾಣಿಗಳು ಅವು ಎಷ್ಟು ಶಾಂತತೆಯಿಂದಿರುತ್ತವೆ ಎಂದು. ಸಹಜವಾಗಿ, ಅವು ಅವುಗಳ ಭೇಟೆಯ ಹಿಂದೆ ಓಡುವಾಗ ತಮ್ಮ ಎಲ್ಲಾ ಶಕ್ತಿಯನ್ನು ಹಾಕುತ್ತವೆ; ಆದರೆ ಕಾರ್ಯದಿಂದಲ್ಲ, ಅದು ಶಕ್ತಿಯಿಂದ ಆದರೆ ನೀವು ಎಂದಾದರೂ ಸಿಂಹವನ್ನು ನೋಡಿದ್ದರೆ ಅದಕ್ಕೆ ಮಾಡಲು ಏನೂ ಇಲ್ಲದಿದ್ದಾಗ ಅದು ಚಡಪಡಿಸುವುದಿಲ್ಲ, ಆದರೆ ಅದು ಅನಾರೋಗ್ಯದಿಂದ್ದಾಗ, ಅದು ಚಂಚಲವಾಗಿರುತ್ತದೆ, ಆದರೆ ಅದು ಒಳ್ಳೆಯ ಆರೋಗ್ಯದಿಂದ ಸರಿಯಾಗಿದ್ದಾಗ, ಅದಕ್ಕೆ ಮಾಡಲು ಏನೂ ಇಲ್ಲದಿದ್ದಾಗ, ಅದು ಚಲಿಸುವುದಿಲ್ಲ, ಅದು ಇನ್ನೂ ಸ್ಥಿರವಾಗಿರುತ್ತದೆ. ಅದು ಖುಷಿಯಂತೆ ಕಾಣಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/372**

ನನಗೆ ಗೊತ್ತಿಲ್ಲ ನೀವು ಸಿಂಹ, ಹುಲಿ, ಆನೆಯಂತಹ ಪ್ರಾಣಿಗಳನ್ನು ಗಮನಿಸಿದ್ದೀರಾ, ಅವು ಯಾವುದೇ ಕ್ರಿಯೆಯಲ್ಲಿರದಿದ್ದಾಗ, ಅದು ಯಾವಾಗಲೂ ಸಂಪೂರ್ಣವಾಗಿ ಸ್ಥಿರವಾಗಿರುತ್ತವೆ. ಒಂದು ಸಿಂಹವು ಕುಳಿತಿದ್ದಾಗ ಮತ್ತು ನಿಮ್ಮನ್ನು ನೋಡುತ್ತಿದ್ದಾಗ ಅದು "ಓಹ್, ನೀವು ಎಷ್ಟು ಚಡಪಡಿಸುತ್ತೀರಿ!" ಎಂದಂತೆ ಯಾವಾಗಲೂ ಅನಿಸುತ್ತದೆ. ಅದು ಎಂತಹ ಯಾವಾಗಲೂ ಅನಿಸುತ್ತದೆ. ಅದು ಎಂತಹ ಸುಜ್ಞಾನದ ಶಾಂತಿಯಿಂದ ನಿಮ್ಮನ್ನು ನೋಡುತ್ತದೆ! ಮತ್ತು ತನ್ನ ಎಲ್ಲಾ ಬಲಿಷ್ಠತೆ, ಶಕ್ತಿ, ದೈಹಿಕ ಸಾಮರ್ಥ್ಯದೊಂದಿಗೆ, ಕ್ರೋಢೀಕೃತಗೊಳಿಸಿ, ಸಂಗ್ರಹಿಸಿ, ಕೇಂದ್ರೀಕೃತವಾಗಿರುತ್ತದೆ ಮತ್ತು ತಳಮಳದ ನೆರಳಿಲ್ಲದೆ – ಆದೇಶ ನೀಡಿದಾಗ ಕಾರ್ಯೋನ್ಮುಖವಾಗಲು ಸಿದ್ಧವಾಗಿರಿತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/329–30**

*ನಮ್ಮ ಯೋಗದಲ್ಲಿ, ಪ್ರಾಣಿಗಳ ಬಗ್ಗೆ ಯಾವ ರೀತಿಯ ಮನೋಭಾವ ತೆಗೆದುಕೊಳ್ಳಬೇಕು?*

ಒಬ್ಬನು ದೈವೀ 'ಏಕತೆ'ಯ ಪ್ರಜ್ಞೆಯನ್ನು ಪಡೆದಾಗ ಮಾತ್ರ ನಿಜವಾದ ಮನೋಭಾವವನ್ನು ಹೊಂದಬಹುದು; ಅಲ್ಲಿಯವರೆಗೆ ಪ್ರಾಣಿಗಳೊಂದಿಗೆ ಗೌರವ ಪ್ರೀತಿ ಮತ್ತು ಕರುಣೆಯಿಂದ ನಡೆದುಕೊಳ್ಳುವುದು ಯಾವಾಗಲೂ ಒಳ್ಳೆಯದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/103** **– ಶ್ರೀಮಾತೆ**

ಪುರುಷನ ಪ್ರೀತಿ, ಸ್ತ್ರೀಯ ಪ್ರೀತಿ, ವಸ್ತುಗಳ ಪ್ರೀತಿ, ನಿನ್ನ ನೆರೆಹೊರೆಯವರ ಪ್ರೀತಿ, ನಿನ್ನ ದೇಶದ ಪ್ರೀತಿ, ಪ್ರಾಣಿಗಳ ಪ್ರೀತಿ, ಮಾನವೀಯತೆಯ ಪ್ರೀತಿ ಈ ಎಲ್ಲಾ ಜೀವಂತ ಪ್ರತಿಬಿಂಬಗಳಲ್ಲಿ ದೇವರ ಪ್ರೀತೀಯು ಪ್ರತಿಫಲಿಸಿರುತ್ತದೆ. ಆದ್ದರಿಂದ ಎಲ್ಲವನ್ನು ಆನಂದಿಸಲು, ಎಲ್ಲರಿಗೂ ಸಹಾಯ ಮಾಡಲು ಮತ್ತು ಎಂದೆಂದಿಗೂ ಪ್ರೀತಿಸಲು, ಪ್ರೀತಿಸಿರಿ ಮತ್ತು ಪ್ರಬಲವಾಗಿ ಬೆಳೆಯಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/491**

.. ಭವ್ಯತೆ ಮತ್ತು ಸಾಮರ್ಥ್ಯದಲ್ಲಿ ಸಿಂಹ, ವೈಭವಯುತ ಮತ್ತು ಅಸಾಧಾರಣ ಶಕ್ತಿಯಲ್ಲಿ ಹುಲಿ, ಬೆಡಗು ಮತ್ತು ವೇಗದಲ್ಲಿ ಜಿಂಕೆ, ಸ್ವರ್ಗದ ಪಕ್ಷಿ, ದೊಡ್ಡ

ಗರಿಯೊಂದಿಗೆ ನವಿಲು, ಕರೆ ಮತ್ತು ತಮ್ಮ ಹಾಡಿನ ಧ್ವನಿಯೊಂದಿಗೆ ಪಕ್ಷಿಗಳು, 'ಜೀವ'ವು ಸೃಷ್ಟಿಸಬಹುದಾದ ಎಲ್ಲಾ ಪರಿಪೂರ್ಣತೆಯನ್ನು ಹೊಂದಿವೆ. ಮತ್ತು ಯೋಚಿಸುವ ಮನುಷ್ಯನು ಅದನ್ನು ಉತ್ತಮಗೊಳಿಸಲು ಸಾಧ್ಯವಿಲ್ಲ; ತನ್ನ ಸ್ವಂತ ಗುಣಧರ್ಮದಲ್ಲಿ ಅವನು ಪ್ರಾಣಿಗಳಿಗಿಂತ ಕೀಳಾಗಿರುತ್ತಾನೆ, ಅವನ ಮನದಲ್ಲಿ, ಅವನ ಯೋಚನೆಯಲ್ಲಿ, ಅವನ ಪ್ರತಿಫಲನದ ಶಕ್ತಿಯಲ್ಲಿ ಮತ್ತು ಸೃಷ್ಟಿಯಲ್ಲಿ ಮಾತ್ರ ಶ್ರೇಷ್ಠವಾಗಿದ್ದಾನೆ; ಆದರೆ ಆತನ ಯೋಚನೆ ಆತನನ್ನು ಸಿಂಹ ಮತ್ತು ಹುಲಿಗಿಂತ ಬಲಿಷ್ಠವನ್ನಾಗಿ ಮಾಡಲಾರದು ಅಥವಾ ಜಿಂಕೆಗಿಂತ ವೇಗಶಾಲಿ, ಸ್ವರ್ಗದ ಪಕ್ಷಿಗಿಂತ ಉಜ್ವಲ ದೃಷ್ಟಿ ಅಥವಾ ಪುರುಷ ಮತ್ತು ಮಹಿಳೆಯ ಯಾವುದೇ ಸೌಂದರ್ಯವು ಯಾವುದೇ ಪ್ರಾಣಿಯ ಅವುಗಳ ಜಾತಿಯ ಪರಿಪೂರ್ಣ ರೂಪಗಳ ಸೌಂದರ್ಯಕ್ಕಿಂತ ಶ್ರೇಷ್ಠವಾಗಿರಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 27/72 – ಶ್ರೀ ಅರವಿಂದರು**

ಹುಲಿ ಅಥವಾ ಸಿಂಹದಂತಹ ಮಗುವು ಹಸಿದಿರುವಾಗ ಮಾತ್ರ ಕೊಲ್ಲುತ್ತದೆ. ಆದರೆ ಮಾನವನು ಕೇವಲ ಹಣಕ್ಕಾಗಿ ಮಾಡುತ್ತಾನೆ.. ಇದು ಮಹಿಳೆಯರಲ್ಲಿ ಅಪ್ರಜ್ಞಾಪೂರ್ವಕದಿಂದ ಕೂಡಿರುತ್ತದೆ; ಬಹಳಷ್ಟು ಮಹಿಳೆಯರು ಯಾರು ಈ ಪ್ರಾಣಿಗಳ ಚರ್ಮವನ್ನು ಧರಿಸುತ್ತಾರೋ ಅವರಿಗೆ ಅದನ್ನು ಒಂದು ಜೀವಂತ ಕಿರುಚುವ ಪ್ರಾಣಿಯಿಂದ ತೆಗೆಯಲಾಗಿದೆ ಎಂದು ಹೇಳಿದೆ. ನಾನು ಖಂಡಿತವಾಗಿ ಹೇಳಬಲ್ಲೆ ಇದು ಅವರಿಗೆ ದುಸ್ವಪ್ನದಂತೆ ತೋರುತ್ತದೆ. ಆದರೆ ಕೆಲವೇ ಕೆಲವರಿಗೆ ಮಾತ್ರ ನಾನು ಏಕೆ ಕಾಳಜಿ ಮಾಡಲಿ ಎನ್ನಬಹುದು. ಆದರೆ ಶ್ರೀಮಂತರಾಗುತ್ತಿರುವವರಲ್ಲಿ ಕ್ರೂರ ಮನುಷ್ಯನು ಒಬ್ಬನಾಗಿದ್ದಾನೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 11, 1969**

ಮನುಷ್ಯನು ಒಂದು ರೀತಿಯಲ್ಲಿ ಹೇಳಬೇಕೆಂದರೆ ಎಲ್ಲಾ ಪ್ರಾಣಿಗಳ ಸಮನ್ವಯದಿಂದ ಮಾಡಲ್ಪಟ್ಟಿದ್ದಾನೆ, ಹುಳುವಿನಿಂದ ಮತ್ತು ಹಲ್ಲಿಯ ಜಾತಿ, ಆನೆಯಿಂದ ಮತ್ತು ಸಿಂಹದವರೆಗೆ ಎಲ್ಲವುಗಳ ಸಮನ್ವಯ. ಆದರೆ ಒಂದು ಪ್ರಾಣಿಯಾಗಿ ಅವನು ಭಯಂಕರವಾಗಿ ಅಪರಿಪೂರ್ಣನಿದ್ದಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/229 – ಶ್ರೀ ಅರವಿಂದರು**

# ಶ್ರೀಮಾತೆ ಮತ್ತು ಪ್ರಾಣಿಗಳು

**– ಅನುವಾದ: ನಾಗಜ್ಯೋತಿ ಎಲಿವಾರ**

## ಬೆಕ್ಕುಗಳೊಂದಿಗೆ ಒಪ್ಪಂದ

*(ಒಬ್ಬ ಶಿಷ್ಯನು ಪ್ರತಿದಿನ ರಾತ್ರಿ ಅವನಿಗೆ ತೊಂದರೆ ನೀಡುತ್ತಿರುವ ಕೆಲವು ಬೆಕ್ಕುಗಳಿಗೆ ವಿಷ ನೀಡಲು ಅನುಮತಿ ಕೇಳುತ್ತಾನೆ. ಶ್ರೀಮಾತೆಯವರು ಉತ್ತರಿಸುತ್ತಾರೆ.)*

ಒಮ್ಮೆ ನನ್ನ ಹತ್ತಿರ ಒಂದು ಬೆಕ್ಕು ಇತ್ತು, ಅದು ಬಹುತೇಕವಾಗಿ ಮಗುವಿನ ಪ್ರಜ್ಞೆಯದಾಗಿತ್ತು. ಮತ್ತು ಯಾರೋ ಒಬ್ಬರು ಅದಕ್ಕೆ ವಿಷ ಉಣಿಸಿದರು ಮತ್ತು ಅದು ವಿಷಪೂರಿತವಾಗಿ, ಸಾಯುತ್ತಾ ಹಿಂದಿರುಗಿದಾಗ, ಬೆಕ್ಕುಗಳಿಗೆ ವಿಷ ನೀಡುವ ಎಲ್ಲಾ ಜನರನ್ನು ನಾನು ಶಪಿಸಿದೆ. ಅದು ಗಂಭೀರವಾಗಿದೆ, ಆದ್ದರಿಂದ ನೀನು ಅದನ್ನು ಮಾಡಬೇಡ, ಅದು ನಿಜವಾದ ಶಾಪವಾಗಿತ್ತು. ಆಗ ನಾನು ಶ್ರೀ ಅರವಿಂದರ ಜೊತೆಗಿದ್ದೆ ಹೀಗಾಗಿ ಈ ವಿಷಯ ಗಂಭೀರವಾಗಿದೆ. ಹೀಗಾಗಿ ಇದನ್ನು ಮಾಡಬೇಡ. ಆದರೆ ಇಲ್ಲೊಂದು ಮಾರ್ಗವಿದೆ..

ನಿನಗೆ ಗೊತ್ತಿದೆಯೇ, ನಾನು ಬೆಕ್ಕುಗಳೊಂದಿಗೆ, ಬೆಕ್ಕುಗಳು ರಾಜನೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇನೆ – ಇದು ಬಹಳ, ಬಹಳ ಹಿಂದೆ. ಮತ್ತು ಇದು ಅಸಾಧಾರಣ, ಅಸಾಧಾರಣ! ಕೆಲವು ನಿರ್ದಿಷ್ಟ ಕಾರಣಗಳಿಗಾಗಿ, "ಬೆಕ್ಕುಗಳ" ರಾಜ ನನಗೆ ಈ ಜೀವಿಗಳ ಮೇಲೆ ಒಂದು ಅಧಿಕಾರವನ್ನು ಕೊಟ್ಟನು ಮತ್ತು ಇದು ನಿಜ. ಕೇವಲ ನಾನು ಮಾತ್ರ ಅವುಗಳನ್ನು ನೋಡಬಹುದಾಗಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 12, 1961**

## ಬಿಗ್ ಬಾಯ್

ನನ್ನ ಹತ್ತಿರ ಮತ್ತೊಂದು ಬೆಕ್ಕು ಇತ್ತು ಅದನ್ನು 'ಬಿಗ್ ಬಾಯ್' ಎಂದು ಕರೆದ. ಓಹ್! ಅದು ಎಷ್ಟು ಸುಂದರವಾಗಿತ್ತು! ಆಗಾಧ ರೈಲಿನ ನಿಲುವಂಗಿಯಂತಹ ಬಾಲ. ಅದು ಸುಂದರವಾಗಿತ್ತು! ಒಂದು ದೊಡ್ಡ ಭಯಾನಕ, ಕೆಟ್ಟದಾದ ಗಂಡು ಬೆಕ್ಕು ಸೇರಿದಂತೆ ಎಲ್ಲಾ ರೀತಿಯ ಬೆಕ್ಕುಗಳು ಸುತ್ತಾಡುತ್ತಿದ್ದರಿಂದ ಬಿಗ್ ಬಾಯ್ ಚಿಕ್ಕದಾಗಿದ್ದಾಗ ನಾನು ಈ ಬಗ್ಗೆ ತುಂಬಾ ಹೆದರುತ್ತಿದ್ದೆ. ಆದ್ದರಿಂದ ರಾತ್ರಿಯಲ್ಲಿ

ಅದನ್ನು ಒಳಗೆ ಬಿಡುತ್ತಿದ್ದೆ (ಈ ರೀತಿ ಮಾಡುವುದು ಬೆಕ್ಕುಗಳಿಗೆ ಕಷ್ಟದಾಯಕ) ನಾನು ಅದಕ್ಕೆ ರಾತ್ರಿ ಹೊರಗಡೆ ಹೋಗುವುದನ್ನು ನಿರ್ಬಂಧಿಸಿದ್ದೆ. ಹಾಗಾಗಿ ಅದು ರಾತ್ರಿಯೆಲ್ಲಾ ಒಳಗೆಯೇ ಇರುತ್ತಿತ್ತು. ಮತ್ತು ನಾನು ಬೆಳಿಗ್ಗೆ ಎದ್ದಾಗ ಅದೂ ಸಹ ಎದ್ದು ಬಂದು ನನ್ನ ಮುಂದೆ ಕೂಡುತ್ತಿತ್ತು. ಆಗ ನಾನು ಹೇಳುತ್ತಿದ್ದೆ, 'ಸರಿ, ಬಿಗ್‌ಬಾಯ್ ನೀನು ಹೋಗಬಹುದು', ಆಗ ಅದು ಕಿಟಕಿಯಿಂದ ಎಗರಿ ಹೊರಗೆ ಹೋಗುತ್ತಿತ್ತೇ ವಿನಃ ಇದಕ್ಕಿಂತ ಮೊದಲೇನಲ್ಲ. ಮತ್ತು ವಿಷ ಉಣಿಸಿದ ಬೆಕ್ಕುಗಳಲ್ಲಿ ಇದೂ ಒಂದಾಗಿತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 12 , 1961**

## ಪ್ರಾಣಿಗಳ ಕುರಿತು ನೆನಪುಗಳು

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

**ಬ್ರೌನಿ**

ಇದಕ್ಕೂ ಮೊದಲು ಒಂದು ಬೆಕ್ಕು ಇತ್ತು, ಬೆಕ್ಕುಗಳಿಗೆ ಆಗುವ ಟೈಫಾಯಿಡ್ ಜ್ವರದಿಂದ ಅದು ಸತ್ತಿತು. ಅದರ ಹೆಸರು ಬ್ರೌನಿ, ತುಂಬ ಸುಂದರವಾದ, ವಿಧೇಯವಾದ, ಅದ್ಭುತವೆನಿಸುವಂಥ ಬೆಕ್ಕು. ತೀರ ಅಸ್ವಸ್ಥವಾದಾಗಲೂ ಅದು ಗದ್ದಲ ಮಾಡುತ್ತಿರಲಿಲ್ಲ. ತನ್ನದೇ ಆದ ಒಂದು ಮೂಲೆಯಲ್ಲಿ ಮುದುರಿ ಕುಳಿತು, ತನ್ನ ಪೆಟ್ಟಿಗೆಯೊಳಗೆ ಒಯ್ದು ಬಿಡುವಂತೆ ತುಂಬ ಮೆದುವಾದ, ಆದರೆ ನೋವಿನಿಂದ ಕೂಡಿದ ಧ್ವನಿಯಲ್ಲಿ ನನ್ನನ್ನು ಕೇಳಿಕೊಳ್ಳುತ್ತಿತ್ತು. ಅದು ತುಂಬ ವಿಧೇಯ, ಮಗುವಿಗಿಂತ ಹೆಚ್ಚು ನಯ, ನಂಬಿಕೆಯುಳ್ಳ ಪ್ರಾಣಿ. ಪ್ರಾಣಿಗಳಲ್ಲಿ ಮನುಷ್ಯರಲ್ಲಿ ಕೂಡ ಇಲ್ಲದಿರುವಷ್ಟು ನಂಬಿಕೆ ಇರುತ್ತದೆ. (ಮಕ್ಕಳಲ್ಲಿ ಕೂಡ ಇದೀಗ ಪ್ರಶ್ನೆ ಮಾಡುವ ಮನಸ್ಸು ಬೆಳದಿದೆ) ಆ ಬೆಕ್ಕಿನಲ್ಲಿ ಒಂದು ರೀತಿಯ ಭಕ್ತಿ, ಆರಾಧನಾ ಭಾವ ಇತ್ತು. ತೋಳಲ್ಲಿ ಎತ್ತಿಕೊಳ್ಳುತ್ತಲೇ, – ಅದಕ್ಕೆ ನಗಲು ಬರುವಂತಿದ್ದರೆ ಮನಸಾರೆ ನಕ್ಕು ಬಿಡುವಂಥ ಪ್ರಾಣಿ – ಆನಂದ ತುಂಬಿ ಬಿಡುತ್ತಿತ್ತು.

ಬೆಕ್ಕು ತುಂಬ ಸುಂದರವಾಗಿತ್ತು. ಬಂಗಾರದ ಚೆಸ್ಟನಟ್ ಹಣ್ಣಿನ ಬಣ್ಣ ಅಂಥ ಬೆಕ್ಕನ್ನು ನಾನು ಮತ್ತೆ ನೋಡಿಲ್ಲ. ನಾನು ಈಗ ಸರ್ವೀಸ್ ಟ್ರೇ ಎಂದು ಹೇಳುತ್ತೇನಲ್ಲ, ಸರಿಯಾಗಿ ಅದರ ಕೆಳಗೆ ಆ ಬೆಕ್ಕನ್ನು ಹುಗಿಯವಾಯಿತು. ನಾನೇ ಅದನ್ನು ಆ ಗಿಡದ ಬೇರುಗಳ ಕೆಳಗೆ ಇರಿಸಿದೆ. ಮೊದಲು ಅಲ್ಲಿ ಒಂದು ಮಾವಿನ ಮರ ಇತ್ತು.

ಅದು ಒಣಗುತ್ತ ಹೊರಟಿತ್ತು, ಅದನ್ನು ಕಿತ್ತು ಅದರ ಸ್ಥಾನದಲ್ಲಿ ಈ ಹಳದಿ ಹೂಗಳ ಗುಲ್‌ಮೊಹರ ಗಿಡ ನೆಡಲಾಯಿತು.

ಪ್ರಾಣಿಗಳ ಜೊತೆ ವ್ಯವಹರಿಸಲು ಬಂದರೆ, ಅವು ನಿಜವಾಗಿ ತುಂಬ ವಿನಯಕಾರಿ, ವಿಧೇಯ ಶಾಲಿಯಾಗಿರುವುದನ್ನು ಕಾಣುತ್ತೀರಿ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಏಪ್ರಿಲ್ 12, 1961**

**ಕಿಕಿ**

ನನ್ನ ಬಳಿ ಒಂದು ಸುಂದರವಾದ ಸಣ್ಣ ಬೆಕ್ಕು ಇತ್ತು, ತುಂಬ ಸುಸಂಸ್ಕೃತಿಯುಳ್ಳ ಅದ್ಭುತ ಬೆಕ್ಕು. ಮನೆಯಲ್ಲೇ ಹುಟ್ಟಿರುವಂಥದು. ಎಲ್ಲ ಬೆಕ್ಕುಗಳಿಗಿರುವಂತೆ ಅದಕ್ಕೂ ಒಂದು ಹವ್ಯಾಸ; ಏನಾದರೂ ಓಡಾಡ ತೊಡಗಿದರೆ ಅದರ ಜೊತೆ ಆಟವಾಡುವುದು. ಮನೆಯಲ್ಲೊಂದು ಸಲ ದೊಡ್ಡ ಚೇಳು ಬಂದಿತ್ತು, ಈ ಬೆಕ್ಕು ಅದರ ಜೊತೆ ಆಟವಾಡಲು ಶುರು ಮಾಡಿತು. ಆ ಚೇಳು ಕುಟುಕಿತು. ಆ ಬೆಕ್ಕು ನನ್ನ ಬಳಿ ಬಂದಿತು, ಅದು ಹೆಚ್ಚು ಕಡಿಮೆ ಸಾಯುವಂಥ ಸ್ಥಿತಿಯಲ್ಲಿತ್ತು. ಚೇಳು ಕುಟುಕಿದ ತನ್ನ ಕಾಲಿನ ಪಂಜನ್ನು ಎತ್ತಿ ನನಗೆ ತೋರಿಸಿತು. ಅದಕ್ಕೆ ಬಾವು ಬಂದಿತ್ತು. ಅಪಾಯಕಾರಿ ಸ್ಥಿತಿ. ನಾನು ಬೆಕ್ಕು ಎತ್ತಿಕೊಂಡು ಮೇಜಿನ ಮೇಲಿರಿಸಿದೆ. ಶ್ರೀ ಅರವಿಂದರನ್ನು ಕರೆದು, ಕಿಕಿಗೆ ಚೇಳು ಕಚ್ಚಿದೆ, ಅದು ಗುಣವಾಗಬೇಕು ಎಂದು ಹೇಳಿದೆ. ಬೆಕ್ಕು ಕೊರಳೆತ್ತಿ ಶ್ರೀ ಅರವಿಂದರನ್ನು ನೋಡಿತು, ಅದರ ಕಣ್ಣುಗಳು ಅದಾಗಲೇ ನಿಸ್ತೇಜವಾಗುತ್ತಿದ್ದವು. ಶ್ರೀ ಅರವಿಂದರು ಅದರೆದುರು ಕುಳಿತರು, ಅದನ್ನು ದಿಟ್ಟಿಸಿ ನೋಡತೊಡಗಿದರು. ನಿಧಾನವಾಗಿ ನೋಡು ನೋಡುತ್ತಿರುವಂತೆ ಬೆಕ್ಕು ಚೇತರಿಸಿಕೊಳ್ಳತೊಡಗಿತು. ಸುಮಾರು ಒಂದು ಗಂಟೆಯ ನಂತರ ಅದು ಪೂರ್ತಿ ಗುಣವಾಗಿ ನೆಗೆಯುತ್ತ ಓಡಿ ಹೋಯಿತು. ಆ ದಿನಗಳಲ್ಲಿ ನಾನು ಶ್ರೀ ಅರವಿಂದರು ಮಲಗುವ ಕೋಣೆಯಲ್ಲಿ (ಅದನ್ನೀಗ ಉಪಯೋಗಿಸುತ್ತಿದ್ದಾನೆ) ಧ್ಯಾನ ಮಾಡುತ್ತಿದ್ದೆ. ಕೆಲ ನಿರ್ದಿಷ್ಟ ಜನ ಮಾತ್ರ ಧ್ಯಾನಕ್ಕೆ ಬರುತ್ತಿದ್ದರು. ಎಲ್ಲವೂ ಸುವ್ಯವಸ್ಥಿತವಾಗಿ ಆಯೋಜಿತವಾಗಿರುತ್ತಿತ್ತು. ಅಲ್ಲೊಂದು ಆರಾಮ ಖುರ್ಚಿ ಇತ್ತು; ಎಲ್ಲರೂ ಬಂದು ಕೂಡುವ ಮೊದಲೇ ಈ ಬೆಕ್ಕು ಅದರ ಮೇಲೆ ಜಿಗಿದು ಕುಳಿತುಬಿಡುತ್ತಿತ್ತು. ಯಾರಾದರೂ ಅದರ ಮೇಲೆ ಕುಳಿತಾರೇನೋ ಎಂದು ಕಾಯುತ್ತಿರಲಿಲ್ಲ, ತಾನೇ ಎಲ್ಲರಿಗಿಂತ ಮೊದಲು ಅದರ ಮೇಲೆ ಹಾರಿ ಕುಳಿತು

ಬಿಡುವುದು. ಧ್ಯಾನ ಆರಂಭವಾದ ತಕ್ಷಣ ಸಮಾಧಿಗೆ ಜಾರಿ ಬಿಡುವುದು. ಅದೇನೂ ಮಲಗಿರುತ್ತಿರಲಿಲ್ಲ, ಆಳವಾದ ಸಮಾಧಿ ಸ್ಥಿತಿಗೆ ಹೋಗುತ್ತಿತ್ತು. ನಡುನಡುವೆ ಕೆಲ ಸಲ ಬೆಚ್ಚಿಬಿದ್ದಂತೆ ಅದುರುವುದು; ಅದಕ್ಕೆ ದರ್ಶನಗಳೂ ಆಗುತ್ತಿದ್ದವು. ಅದು ಒಂದು ರೀತಿಯ ಮೆಲುದನಿಯಲ್ಲಿ ಮಲಗುವುದು; ಗಂಟೆಗಳವರೆಗೆ ಹಾಗೆಯೇ ಇದ್ದು ಬಿಡುತ್ತಿತ್ತು. ಆ ಸ್ಥಿತಿಯಿಂದ ಹೊರಬಂದ ಮೇಲೆ ಅದು ಏನನ್ನು ತಿನ್ನುತ್ತಿರಲಿಲ್ಲ. ನಡುವೆ ಎಚ್ಚರಿಸಿ ಏನಾದರೂ ಕೊಟ್ಟರೂ ನಿರಾಕರಿಸುತ್ತಿತ್ತು. ಮತ್ತೆ ಅದೇ ಖುರ್ಚಿನಲ್ಲಿ ಹೋಗಿ ಸಮಾಧಿಗೆ ಜಾರಿ ಬಿಡುತ್ತಿತ್ತು. ಬೆಕ್ಕಿನಂಥ ಸಣ್ಣ ಜೀವಕ್ಕೆ ಇದು ಅಪಾಯಕಾರಿ. ಆದರೆ ಆ ಬೆಕ್ಕು ಸಾಮಾನ್ಯದ್ದಾಗಿರಲಿಲ್ಲ.

## ಪ್ರಾಣಿಗಳಲ್ಲಿ ಆತ್ಮನಿವೇದನೆ

ಪ್ರಾಣಿಗಳಲ್ಲಿದು ಕೆಲ ಸಲ ಮನುಷ್ಯರಿಗಿಂತ ಹೆಚ್ಚು ಪರಿಶುದ್ಧವಾಗಿರುತ್ತದೆ. ಒಂದು ತೆರನಾದ ಮಮತೆ, ಕಾಳಜಿಯಿಂದ ತಮ್ಮನ್ನು ತಾವು ಮರೆತು ತಮ್ಮ ಸಂತಾನವನ್ನು ಪೋಷಿಸುವ ಅನೇಕ ನಿದರ್ಶನಗಳಿವೆ. ಅದು ಸ್ವಯಂ ಸ್ಫೂರ್ತಿಯಿಂದ ಬಂದಿರುವಂಥದು, ಆಲೋಚನೆ, ವಿಚಾರಗಳಿಂದ ಬಂದಿರುವಂಥದಲ್ಲ. ತಾನೇನು ಮಾಡುತ್ತಿರುವೆನೆಂಬುದನ್ನು ಪ್ರಾಣಿ ಎಂದಿಗೂ ವಿಚಾರ ಮಾಡುವುದಿಲ್ಲ; ಮನುಷ್ಯ ವಿಚಾರ ಮಾಡಿ ಮಾಡುತ್ತಾನೆ. ಅನೇಕ ಸಲ ಇದರಿಂದ ಕೆಲಸ ಕೆಡುತ್ತದೆ. ಕೆಲ ಸಲ ಹೆಚ್ಚಿನ ಉಪಯೋಗ ಆದೀತು, ಇಲ್ಲವೆಂದಲ್ಲ, ಆದರೆ ಅಂಥ ಸಂದರ್ಭ ಕಡಿಮೆ.

## ಶ್ರೀಮಾತೆಯ ಪ್ರತಿ ಪ್ರಾಣಿಗಳ ಪ್ರತಿಕ್ರಿಯೆ

.. ಒಂದು ದಿನ ಓರ್ವ ವ್ಯದ್ಯರು ನನಗೊಂದು ಕ್ಯಾನರಿಗಳಿರುವ (ಆಫ್ರಿಕನ್ ಪಕ್ಷಿ, ತುಂಬ ಸುಂದರವಾಗಿ ಹಾಡುವ ಹಕ್ಕಿ) ಪಂಜರವೊಂದನ್ನು ತಂದು ತೋರಿಸಿದರು. ಆ ಪಕ್ಷಿ ವಾಸ್ತವಿಕವಾಗಿ ತುಂಬ ಚಟುವಟಿಕೆಯಿಂದ ಇರುತ್ತವೆ. ಆ ಪಂಜರವನ್ನು ಅವರು ಕಿಟಕಿಯ ಅಂಚಿನ ಮೇಲೆ ಇರಿಸಿದರು. ನಾನು ಅವುಗಳ ಬಳಿ ಹೋದೆ, ಅವು ಮೂಕವಾಗಿದ್ದವು, ಪಂಜರದ ತಳಕ್ಕೆ ಅಂಟಿಕೊಂಡಿಂತೆ ಕುಳಿತು ಬಿಟ್ಟಿದ್ದೆವು, ಪಕ್ಷವಂತ ಹೊಡೆದಂತೆ. ನಾನು ಅವುಗಳಂತೆ ಶಿಳ್ಳೆ ಹೊಡೆದೆ. (ಆಗ ನಾನು ತುಂಬ ಚೆನ್ನಾಗಿ ಶಿಳ್ಳೆ ಹೊಡೆಯುತ್ತಿದ್ದೆ) ಊಹೂ, ಏನೂ ಪ್ರತಿಕ್ರಿಯೆ ಇಲ್ಲ, ಅವು ಶಬ್ದ ಕೂಡ ಮಾಡಲಿಲ್ಲ. ನಾನು ಮೃದುವಾಗಿ ಹೇಳಿದೆ “ಹೀಗಾದರೆ

ನೀವು ಶಿಳ್ಳು ಹೊಡೆಯಲಾರಿರಿ, ಮತ್ತೊಂದು ಹೊಡೆಯಲಾರಿರಿ. ನಿಮಗೆ ಹಾಡಲೂ ಆಗುವುದಿಲ್ಲ, ಮಾತನಾಡಲೂ ಆಗುವುದಿಲ್ಲ ನೋಡಿ". ಆಶ್ಚರ್ಯ ಅವು ಧ್ವನಿಗೈಯು ತೊಡಗಿದವು.

ಪ್ರಾಣಿಗಳ ಮೇಲೆ ನನ್ನದೊಂದು ಚೆಂದದ ಪ್ರಭಾವ ಇದೆ ಎಂದು ಕಾಣುತ್ತದೆ. ಏಕೆಂದರೆ ಒಂದು ದಿನ ಬಾಲಕನೊಬ್ಬ (M) ನನ್ನನ್ನು ಕಾಣಲು ಒಂದು ಸಣ್ಣ ಪಂಜರ ಹಿಡಿದುಕೊಂಡು ಬಂದಿದ್ದ. ಅದರಲ್ಲೊಂದು ಪುಟ್ಟ ಅಳಿಲು. ಪಂಜರದಿಂದ ಹೊರತೆಗೆದು ನನಗೆ ತೋರಿಸಿದ. ನಾನು ಮೃದುವಾಗಿ ಅದರ ಬೆನ್ನು ತಟ್ಟಿದೆ. ಅಷ್ಟೇ, – ಅದು ಸಮಾಧಿಗೆ ಜಾರಿಬಿಟ್ಟಿತು.

ಇಲ್ಲ, ಅವು ಎಂದಿಗೂ ಅಸಂತೋಷಗೊಳ್ಳುವುದಿಲ್ಲ, ಸದಾ ಸಂತೋಷದಿಂದಲೇ ಇರುತ್ತವೆ. ಹೀಗೆ ಪಂಜರದಲ್ಲಿರಿಸುವುದು ಅವುಗಳಿಗೆ ತುಂಬ ಭಾರ ಆ ಆಫ್ರಿಕನ್ ಪಕ್ಷಿಗಳಂತೆ ಅದೂ ಸಹ ನಿದ್ರೆಗೆ ಹೋಗಿತ್ತು, ಅಥವಾ ನಿಶ್ಚಲವಾಗಿಬಿಟ್ಟಿತು. ಕೊನೆಗೆ ವೈದ್ಯ ಆತಂಕಗೊಂಡು ಕೇಳಿದ. "ಏನಾಯಿತು ಮನೆಯಲ್ಲಿದ್ದಾಗ – ಅವು ಶಿಳ್ಳೆ ಹಾಕುತ್ತಿದ್ದವಲ್ಲ?" ಎಂದು ಅಲವತ್ತುಕೊಂಡ. ನಾನು (ನಗುತ್ತ) ಹೇಳಿದೆ "ಹೌದು, ಇಲ್ಲಿ ಬೇರೆಯೇ!"

ಆತ ತನ್ನ ಪಂಜರ ಎತ್ತಿಕೊಂಡು ಹೋಗಲು ಹೊರಟ ಪಕ್ಷಿಗಳು ಮೈ ಕೊಡವಿ ಎಚ್ಚರಾದವು. ಶಿಳ್ಳೆ ಹಾಕಿದವು, ತುಸು ಹಾಡು ಹಾಡಿದವು. ಆಯಿತು. ಮತ್ತೆ ಸುಮ್ಮನಾಗಿಬಿಟ್ಟವು. ಹೀಗೆಯೇ, ಇಂಥ ಅನೇಕ ಸಂಗತಿಗಳನ್ನು ನೋಡುತ್ತಿರುತ್ತೇವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಸೆಪ್ಟಂಬರ್ 21, 1963**

**ಧೋತಾ–ಓರಾಂಗುಟಾನ್**

*(– ಓರಾಂಗುಟಾನ್ ಒಂದನ್ನು ತಂದು ಶಿಕ್ಷಣದಲ್ಲಿ ಭಾಗವಹಿಸುವಂತೆ ಮಾಡಲು ಓರ್ವ ಶಿಷ್ಯ ಶ್ರೀಮಾತೆಯವರ ಅನುಮತಿ ಕೇಳುತ್ತಾನೆ)*

ಕೆಲವರು ಈಗಾಗಲೇ ಧೋತಾನ ತಕರಾರು ತೆಗೆದಿದ್ದಾರೆ. ಈ ಮೊದಲು ಒಂದು ಗೋರಿಲ್ಲಾ ಇತ್ತು, ಈಗ ಮತ್ತೊಂದು ಓರಾಂಗುಟಾನ್! ಜನ ನನ್ನ ಮೇಲೆ ಸಿಟ್ಟು ಮಾಡಿಕೊಳ್ಳುತ್ತಾರೆ. ಏಕೆಂದರೆ ಆಳುಗಳು ಮೊದಲೇ ಹೆದರಿಕೊಂಡಿದ್ದರು. ನೆರೆಹೊರೆಯವರೂ ತುಂಬ ಹೆದರಿದ್ದರು. ಅದು ಅವರಿಗೆ ಸೇರಿಕೆ ಆಗಿರಲಿಲ್ಲ.

ಧೋತಾ ಬೆಡ್‌ರೂಮಿನೊಳಗೆ ಹೋಗುತ್ತಿತ್ತು. ಕೆಲಸದವಳು ಚೀರಲು ಆರಂಭಿಸುತ್ತಿದ್ದಳು. ಅದೇ ಕಾಲಕ್ಕೆ ನೆರೆಯವನು ಬಂದನು, (ಅದೃಷ್ಟವಶಾತ್ ಅವನು ಜಾಣನಿದ್ದ) ಸುಮ್ಮನೇ ನಿಂತುಕೊಂಡು ಆ ಪ್ರಾಣಿಯನ್ನು ಗಂಭೀರ ದೃಷ್ಟಿಯಿಂದ ನೋಡುತ್ತ ಇದ್ದನು. ಆ ಪ್ರಾಣಿ ಏನೂ ಮಾಡದೇ ಸುಮ್ಮನೇ ಹೋಗಿಬಿಟ್ಟಿತು. ಆದರೆ ಆ ಧೋತಾ ಸಿಟ್ಟಿಗೆದ್ದರೆ ಬೆಡ್‌ಶೀಟ, ಹಾಸಿಗೆ ಹರಿದೊಗೆಯುತ್ತಿತ್ತು, ಎಲ್ಲ ಸಾಮಾನುಗಳನ್ನು ಅತ್ತತ್ತ ಒಗೆದಾಡಿ ಹಾಳು ಮಾಡುತ್ತಿತ್ತು. ಕೊನೆಗೆ ಆ ನೆರೆಯವನು ಬಂದು ನನಗೆ ಹೇಳಿದ (ಬಹಳ ಹಿಂದಿನ ಮಾತಿದು). ನಾನು ಉತ್ತರಿಸಿದೆ. ನಿನಗೆ ಪ್ರಾಣಿಗಳ ಬಗ್ಗೆ ಗೊತ್ತಿಲ್ಲ. ನೀನು ಸಮಾಧಾನ ಸ್ವಭಾವದವನಿರುವುದು ನಿನ್ನ ಅದೃಷ್ಟ. ಆದರೆ ಪ್ರಾಣಿಗಳು ತುಂಬ ಸಂವೇದನಾಶೀಲವಾಗಿರುತ್ತವೆ. ನೀವು ಹೆದರಿದರೋ ಅವು ಹೆದರಿದಿರೋ ಅವೂ ಹೆದರುತ್ತವೆ, ನೀವು ಸಿಟ್ಟಿಗೆದ್ದಿರೋ ಅವೂ ಸಿಟ್ಟಿಗೇಳುತ್ತವೆ. ನೀವು ಸೌಮ್ಯವಾಗಿರಿ ಅವೂ ಸೌಮ್ಯವಾಗಿರುತ್ತವೆ, ಆ ಧೋತಾ ಒಂದು ವಿಶೇಷ. ಮೊದಲ ಸಲ ನಾನದನ್ನು ನೋಡಿದಾಗ ಏನಾಯಿತೆಂಬುದನ್ನು ನಿನಗೆ ಯಾವಾಗಲಾದರೂ ಹೇಳಿದ್ದೇನೆಯೇ? (ಮುಂದೆ ಕೂಡ ಶ್ರೀಮಾತೆ ಏನೂ ಹೇಳಿರಲಿಲ್ಲ) ಅದು ಜೊತೆ ಬಂದಿತು. ಅದು ಆಕೆಯ ತೋಳುಗಳಲ್ಲಿತ್ತು. ನನ್ನನ್ನು ನೋಡುತ್ತಲೇ ಮೊದಲು ತನ್ನ ಕೈಗಳನ್ನು ಮಡಿಸಿಕೊಂಡಿತು. ಅದರ ಬಾಯಿ ಅಲುಗಾಡುತ್ತಿತ್ತು. ನನ್ನ ಜೊತೆ ಮಾತನಾಡಲು ಬಯಸಿತ್ತು. ಧ್ವನಿ, ಶಬ್ದ ಏನಿರಲಿಲ್ಲ. ಬಾಯಿ ಮಾತ್ರ ಅಲುಗಾಡುತ್ತಿತ್ತು. ಅದು ಭಾವಾಭಿವ್ಯಕ್ತಿ ಮಾತ್ರ. ನಾನದನ್ನು ಅಭಿನಂದಿಸಿದೆ. ತಕ್ಷಣ ಅಲ್ಲಿಂದ ಬಂದು ನನ್ನ ಮಡಿಲಲ್ಲಿ ಕುಳಿತುಕೊಂಡು ಕೈಗಳನ್ನು ನನ್ನ ಕೊರಳ ಸುತ್ತ ಬಲಸಿತು. ಅದು ಅರೆಬರೆ ಸಮಾಧಿಯಂಥ ಸ್ಥಿತಿಗೆ ತೆರಳಿತ್ತು. ಸುಮಾರು 5 ನಿಮಿಷ. ನಾನು ಯೋಚಿಸಿದೆ – ಇದು ಇಲ್ಲಿ ಬಹಕಾಲ ಇರಲಾಗದು, ಇದೀಗ ಹೊರಡಬೇಕು. ತಕ್ಷಣ ಅದು ಕಣ್ಣು ತೆರೆಯಿತು. ಟಣ್ಣನೆ ನೆಗೆದು ಹೋಯಿತು. ಕೆಲ ಪ್ರಾಣಿಗಳಲ್ಲಿ ಮಾನವರಿಗಿಂತ ಹೆಚ್ಚಿನ ಗ್ರಹಣಶೀಲತೆ ಇರುತ್ತದೆ.

ಪ್ರಾಣಿಗಳಲ್ಲೊಂದು ಸಹಜ ಮೋಹಕತೆ ಇರುತ್ತದೆ. ನನಗೆ ಪ್ರಾಣಿಗಳ ಜೊತೆ ಒಳ್ಳೆಯ ಸಂಬಂಧ ಇದೆ. ಮಾನವನ ಪ್ರಜ್ಞೆಯಲ್ಲಿ ಮನಸ್ಸಿನ ಚಟುವಟಿಕೆಯಿಂದ ಬರುವ ವಿಕೃತಿ ಅಲ್ಲಿಲ್ಲ. (ಮಾನವನ ಜೊತೆ ಬದುಕಲು ಕಲಿತ ಪ್ರಾಣಿಗಳನ್ನು ಹೊರತು ಪಡಿಸಿ) ನೇರವಾಗಿ ಬರುವ ಪ್ರಾಣಿಗಳಲ್ಲಿ ಸರಳತೆ, ಮುಗ್ಧತೆ ಇರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 13, 1967**

**ಹೆಡೆ ಎತ್ತಿದ ನಾಗರಹಾವು**

ಥಿಯಾನ್‌ನ ಎಸ್ಟೇಟ್‌ನಲ್ಲಿ ನೂರಾರು ವರ್ಷ ಹಳೆಯದಾದ ಆಲಿವ್ ಗಿಡಗಳಿವೆ. ದಿನಾಲೂ ಮಧ್ಯಾಹ್ನ ನಾನು ಅಲ್ಲಿಗೆ ಹೋಗಿ ಮರದ ಕೆಳಗೆ ಕುಳಿತು ಧ್ಯಾನ ಮಾಡುತ್ತಿದ್ದೆ. ತುಂಬಾ ಬಿಸಿಲು, ಆದರೆ ಯಾವಾಗಲೂ ಸೆಖೆ ಅನಿಸುವುದಿಲ್ಲ. ಅದು ನನ್ನನ್ನು ಬಾಧಿಸುವುದಿಲ್ಲ. ಒಂದು ದಿನ ನಾನು ಆಳವಾದ ಧ್ಯಾನದಲ್ಲಿದ್ದೆ. ಸ್ವಲ್ಪ ಸಮಯದ ನಂತರ ನನಗೆ ಏನೋ ಕಸಿವಿಸಿ ಅನಿಸತೊಡಗಿತು. ಕಣ್ಣು ತೆರೆದೆ. ಅಬ್ಬಾ, ಕೇವಲ ಎರಡೇ ಮೀಟರ ಅಳತೆಯಲ್ಲಿ ಭಯಾನಕವಾಗಿ ಹೆಡೆ ಎತ್ತಿ ಘೂತ್ಕರಿಸುತ್ತಿದ್ದ ದೊಡ್ಡ ನಾಗ. ಆಕೆಡೆಗೆ ನಾಗರ ಹಾವಿಗೆ ನಾಜೆಂದು ಕರೆಯುತ್ತಾರೆ. ತುಂಬ ವಿಷವುಳ್ಳ ಹಾವು. ಅಪಾಯಕಾರಿಯಾದ ವಿಷ. ತನ್ನ ಹೆಡೆಯನ್ನು ಅತ್ತಿತ್ತ ತೂಗಾಡಿಸುತ್ತ ಸಿಟ್ಟಿನಿಂದ ಬುಸುಗುಡುತ್ತಿತ್ತು. ಮೊದಲು, ನನಗೆ ಆ ಹಾವು ಅಷ್ಟೇಕೆ ಸಿಟ್ಟಿಗೆದ್ದಿದೆ ಎಂಬುದು ತಿಳಿಯಲಿಲ್ಲ. ಆ ಮೇಲೆ ನೆನಪಾಯಿತು, ನಾನು ಕುಳಿತ ಗಿಡದಲ್ಲಿ ಒಂದು ದೊಡ್ಡ ಪೊಟರೆ ಇತ್ತು. ಬಹುಶಃ ನಾನು ಆ ಪೊಟರೆಗೆ ಸರಿಯಾಗಿ ಅಡ್ಡ ಕುಳಿತಿರಬೇಕು. ಹೀಗಾಗಿ ನಾನು ಅದರ ದಾರಿಗೆ ಅಡ್ಡಿಯಾಗಿರಬೇಕು ಅನಿಸಿತು. ಏನು ಮಾಡುವುದು? ತುಸು ದಿಗಿಲಾಯಿತು. ತುಸು ಕದಲಿದರೂ ಸಾಕು ಹಾವು ಕಚ್ಚಿಬಿಡುತ್ತದೆ. ತಕ್ಷಣ ಥಿಯಾನ್ ಮಾತು ನೆನಪಿಗೆ ಬಂತು. ನನಗೇನೂ ಹೆದರಿಕೆ ಇಲ್ಲ. ಹೆದರದೇ ಅದನ್ನೇ ನೇರವಾಗಿ ದಿಟ್ಟಿಸಿದೆ. ನನ್ನ ಸಂಕಲ್ಪ ಬಲವನ್ನೆಲ್ಲ ಅದರಲ್ಲಿ ಸಮಾನಿಸಗೊಂಡಿದೆ. ನಿಧಾನವಾಗಿ ಆದರೆ ಬುಸುಗುಟ್ಟುವಿಕೆ ಕಡಿಮೆ ಆಯಿತು. ಕೊನೆಗೆ ಬುಸುಗುಡುವುದನ್ನು ನಿಲ್ಲಿಸಿತು. ನಾನು ಅತಿ ನಿಧಾನವಾಗಿ ಒಂದೊಂದು ಕಾಲು ಸರಿಸಿದೆ. ಆದರೆ ಅದರ ಮೇಲಿನ ದೃಷ್ಟಿಯನ್ನು ಅತ್ತಿತ್ತ ಸರಿಸಲಿಲ್ಲ. ಸಂಕಲ್ಪ ಬಲವನ್ನೆಲ್ಲ ಆ ದೃಷ್ಟಿಯಲ್ಲಿ ಕೇಂದ್ರಿಕರಿಸಿ ನೋಡುತ್ತಿದ್ದೆ. ಆ ಹಾವು ತನ್ನ ಹೆಡೆ ಕೆಳಕ್ಕಿಳಿನೆ, ಮಡಿಸಿಕೊಂಡಿತು. ಆ ಮೇಲೆ ಸರ್ರನೇ ಹೊರಳಿ ಸಮೀಪದಲ್ಲಿದ್ದ ಕೊಳದಲ್ಲಿ ನೆಗೆದು ಹೋಗಿಬಿಟ್ಟಿತು.

**ಹಾವುಗಳ ರಾಜ**

ಎಲ್ಲ ಪ್ರಾಣಿಗಳ ಪೈಕಿ ಹಾವುಗಳು ತುಂಬ ಸಂವೇದನೆಯುಳ್ಳ ಪ್ರಾಣಿಗಳು. ಸಮ್ಮೋಹನಕ್ಕೆ ಅವು ಬಹು ಬೇಗೆ ಒಳಗಾಗುತ್ತವೆ. ಆ ಶಕ್ತಿ ನಿಮ್ಮಲ್ಲಿದ್ದರೆ (ಸಂಮ್ಮೋಹನ, ವಶೀಕರಣ ಶಕ್ತಿ ಇವು ತೀರ ಭೌತಿಕ ಪ್ರಾಣಿಕ ಸ್ತರದಿಂದ ಬರುತ್ತದೆ) ನೀವು ಬಹು

ಸುಲಭವಾಗಿ ಹಾವುಗಳ ಮೇಲೆ ಪ್ರಭುತ್ವ ಸಾಧಿಸಬಲ್ಲಿರಿ. ಹಾವುಗಳನ್ನು ಇಷ್ಟಪಡುವ ಎಲ್ಲರಿಗೂ ಅದಿರುತ್ತದೆ, ಅದರ ಮೂಲಕ ಅವರು ಹಾವುಗಳು ತಮ್ಮ ಮಾತು ಕೇಳುವಂತೆ ಮಾಡುತ್ತಾರೆ.. ಲೆಮ್ಸನ್‌ನಲ್ಲಿದ್ದಾಗ ಒಂದು ಭಯಾನಕವಾದ ಕಳಿಂಗ ಸರ್ಪದಿಂದ ಈ ಶಕ್ತಿಯ ಸಹಾಯದಿಂದಲೇ ಪಾರಾಗಿದ್ದೆ. ನಿಮಗೆ ಆ ಕಥೆ ಗೊತ್ತಿದೆಯೇ? ನನ್ನಲ್ಲಿ ಆ ಶಕ್ತಿ ಇದೆ ಎಂದು ಥಿಯಾನ್ ನನಗೆ ಹೇಳಿದ್ದ ಮತ್ತು ನನಗೂ ಸಹ ಅದರ ಅರಿವಿತ್ತು. ಅಂತೆಯೇ ನಾನು ಹಾವುಗಳನ್ನು ಮೋಡಿ ಮಾಡಿ ಆ ಮೇಲೆ ಬಿಟ್ಟು ಬಿಡುತ್ತಿದ್ದೆ. (ನಾನು ಇದನ್ನೂ ನಿಮಗೆ ಹೇಳಿದ್ದೇನೆ). ಒಂದು ಸಲ ಹಾವುಗಳ ರಾಜ ಅಂದರೆ ಸರ್ಪಗಳ ಜಾತಿಯ ರಾಜ ನನ್ನ ಬಳಿ ಬಂದ. ನಾನಾಗ ಲೆಮ್ಸನ್‌ನಲ್ಲದೆ. ಮತ್ತೊಂದು ಸಲ ಒಂದು ಬೆಕ್ಕು ಈ ಆಸ್ಪ ಅಥವಾ ವೈಪರ್ (ಒಂದು ಜಾತಿಯ ಅತಿ ವಿಷ ಹಾವುನಿಂದ ಬಿಡಿಸಿಕೊಳ್ಳಲು ಸಹಾಯ ಮಾಡಿದಾಗ ಬಂದಿದ್ದ. ಬೆಕ್ಕು ತುಸು ದೊಡ್ಡದಾದ ಅಂಗೋರಾ ಜಾತಿಯದು. ಮೊದಲು ಅದು ಸಣ್ಣ ವೈಪರ್ ಜೊತೆ ಆಟವಾಡತೊಡಗಿತು. ಆದರೆ ಆ ಹಾವು ಸಿಟ್ಟಿಗೆದ್ದಿತು. ಅದು ಆ ಬೆಕ್ಕನ್ನು ಹಿಡಿಯಲು ಯತ್ನಿಸಿತು, ಇದು ತಪ್ಪಿಸಿಕೊಂಡಿತು. (ನಾನು ಈ ಕ್ರೀಡೆಯನ್ನು ಸುಮಾರು 10 ನಿಮಿಷ ವೀಕ್ಷಿಸಿದ್ದೇನೆ) ಆನಂತರ ತನ್ನ ಪಂಜಿನಿಂದ ಹಾವನ್ನು ಗಾಸಿಗೊಳಿಸಿತು. ಹಾವು ಹೆಡೆ ಎಲ್ಲಿ ನೆಲಕ್ಕೆ ಬಡಿಯಬೇಕು, ಬೆಕ್ಕು ಅದನ್ನು ಅಲ್ಲಲ್ಲಿ ಪರಚಬೇಕು. ಬರುಬರುತ್ತ ಹಾವು ದಣಿಯಲಾರಂಭಿಸಿತು. ನಾನು ಬೆಕ್ಕನ್ನು ತಡೆದೆ, ಹಾವು ತಿನ್ನುವುದನ್ನು ತಪ್ಪಿಸಿದೆ.

ಇವೆರೆಡು ಘಟನೆಗಳಾದ ನಂತರ ಒಂದು ಸಲ ಸರ್ಪಗಳ ರಾಜ ನನ್ನ ಬಳಿ ಬಂದ. ಅವನ ತಲೆಯ ಮೇಲೊಂದು ಚೆಂದದ ಕಿರೀಟ. ಕಿರೀಟ ಸಾಂಕೇತಿಕ ಬಿಡಿ. ಅಂದರೂ ಅವನು ಸರ್ಪಗಳ ಜಾತಿಯ ರಾಜ. ನೋಡಲು ತುಸು ನಾಗರ ಹಾವಿನಂತೆಯೇ, ಆದರೆ ತುಂಬ ಅದ್ಭುತ. ಭಯಾನಕವಾದ ಆದರೆ ಅದ್ಭುತವಾದ ಪ್ರಾಣಿ. ನನ್ನ ಜೊತೆ ಒಂದು ಒಪ್ಪಂದ ಮಾಡಿಕೊಳ್ಳಲು ಬಂದಿರುವುದಾಗಿ ಹೇಳಿದ. "ಆಯಿತು. ನಾನೇನು ಮಾಡಬೇಕೆಂದು ಬಯಸುವಿ?" ನಾನು ಅವರನ್ನು ಕೇಳಿದೆ. "ಯಾವ ಸರ್ಪವೂ ನಿಮ್ಮನ್ನು ಏನೂ ಮಾಡುವುದಿಲ್ಲ ಎಂಬುದನ್ನಂತೂ ನಾನು ಪ್ರಮಾಣ ಮಾಡಿ ಹೇಳುತ್ತೇನೆ, ಅಲ್ಲದೇ ಅವು ನಿನ್ನ ಆದೇಶ ಪಾಲಿಸುತ್ತವೆ, ವಿಧೇಯವಾಗಿರುತ್ತವೆ. ಆದರೆ ನೀನು ನನಗೊಂದು ವಚನ ನೀಡಬೇಕು, ನೀವು ಯಾವ ಹಾವನ್ನು ಕೊಲ್ಲಬಾರದು." ನಾನು ತುಸು ವಿಚಾರ ಮಾಡಿ ಹೇಳಿದೆ. "ಇಲ್ಲ, ನಾನು ಹಾಗೆ ವಚನ ನೀಡಲಾರೆ. ನನ್ನ ಜನ, ನನ್ನ ಮೇಲೆ ಭರವಸೆ

ಇಟ್ಟಿರುವವರಿಗೆ ನಿಮ್ಮ ಜಾತಿಯ ಪ್ರಾಣಿ ತೊಂದರೆ ಮಾಡಿದರೆ ನನ್ನ–ನಿನ್ನ ನಡುವಣ ಒಪ್ಪಂದ ಮುರಿದುಹೋಗುತ್ತದೆ, ನಾನು ಅವರನ್ನು ರಕ್ಷಿಸಲೇಬೇಕಾಗುತ್ತದೆ. ನಾನು ನಿನಗೆ ಭರವಸೆ ನೀಡಬಲ್ಲೆ, ನನಗೇನೂ ಕೆಟ್ಟ ಭಾವನೆ ಇಲ್ಲ, ಹಾವು ಕೊಲ್ಲಬೇಕೆಂಬ ಇಚ್ಛೆಯಾಗಲಿ, ಉದ್ದೇಶವಾಗಲಿ ಇಲ್ಲ. ಕೊಲ್ಲುವುದು ನನ್ನ ಯೋಜನೆಯಲ್ಲಿ ಇಲ್ಲವೇ ಇಲ್ಲ. ಆದರೆ ಈ ಒಪ್ಪಂದ ನನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಬರುತ್ತದೆ, ಆದ್ದರಿಂದ ನಾನಿದನ್ನು ಒಪ್ಪಿಕೊಳ್ಳುವುದಿಲ್ಲ." ಅವನು ಮರು ಮಾತನಾಡದೇ ಹೋಗಿಬಿಟ್ಟು ಆ ಒಪ್ಪಂದ ಅಲ್ಲಿಗೇ ನಿಂತು ಹೋಯಿತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಫೆಬ್ರವರಿ 4, 1961**

**ಸೀಲ್‌ಗಳು**

ಓಹ್, ಕೆಲದಿನಗಳ ಹಿಂದೆ ನಾನೊಂದು ಭಯಾನಕ ಕಥೆ ಕೇಳಿದೆ – ಮಾನವೀಯತೆ ಎಷ್ಟು ಹಾಳಾಗಿ ಹೋಗಿದೆ.. ನಂಬಿಕೆಯಾಗುವುದಿಲ್ಲ. ನಿಮಗೀ ಕಥೆ ಗೊತ್ತಿದೆಯೇ, ಸೀಲ್ ಮರಿಗಳ ಮಾರಣ ಹೋಮ!

ಸೀಲ್‌ಗಳು ಹುಟ್ಟಿದಾಗ (ಕೆಲ ಜಾತಿಯವು) ಬೆಳ್ಳಗಾಗಿರುತ್ತವೆ. ಕೆಲ ವಾರಗಳ ವರೆಗೆ ಹಾಗೆಯೇ ಇರುತ್ತವೆ. ಆ ಮೇಲೆ ಅವುಗಳ ಕೂದಲೆಲ್ಲ ಉದುರಿ ಹೋಗಿ ಬೂದು ಬಣ್ಣ ಅಥವಾ ಹಳದಿ ಬಣ್ಣಕ್ಕೆ ತಿರುಗುತ್ತವೆ. ಇತ್ತೀಚೆಗೆ ಬಿಳಿ ಫರ್‌ಕೋಟ ಹಾಕುವುದು ಫ್ಯಾಶನ್ ಆಗಿದೆ. ಇದನ್ನು ಕೆಲ ವ್ಯಾಪಾರಸ್ಥರು ವ್ಯವಸ್ಥೆ ಮಾಡುತ್ತಾರೆ, ಉತ್ತರದಲ್ಲೊಂದು ಸ್ಥಳವಿದೆ, ಆ ದ್ವೀಪದಲ್ಲಿ ಸೀಲ್‌ಗಲೆಲ್ಲ ಸೇರಿಕೊಂಡು ಅಲ್ಲಿ ಮರಿ ಇಡುತ್ತವೆ. ಒಂದು ಹೆಣ್ಣು ಸೀಲ್ ಒಂದೇ ಮರಿಯನ್ನು ಹೇರುತ್ತದೆ. ಜನರು ಅಲ್ಲಿಗೆ ಹೋಗುತ್ತಾರೆ, ಮರಿ ಸೀಲ್‌ಗಳನ್ನು ಕೊಂದು, ಸುಮಾರು 15 ಮರಿಗಳಿಂದ ಒಂದು ಕೋಟು ತಯಾರಿಸುತ್ತಾರೆ. ಅದಕ್ಕಾಗಿ ಸೀಲ್‌ಮರಿಗಳ ಹತ್ಯೆಯಾಗುತ್ತದೆ. ಆದರೆ ಈ ಕಗ್ಗೋಲೆ ಕೂಡ ದುಬಾರಿ ಆಗಬಾರದೆಂದು ಎಲ್ಲ ಮರಿಗಳ ತಲೆಗಳನ್ನು ಒಂದೆಡೆ ಸೇರಿಸಿ. ದೊಡ್ಡದಾದ ಕಟುಕರ ಕತ್ತೆಯಿಂದ ಅವು ಜೀವಂತ ಇರುವಾಗಲೇ ಅವುಗಳ ಚರ್ಮವನ್ನು ಸುಲಿಯಲಾಗುತ್ತದೆ... ಅವು ಚೀರಾಡುತ್ತವೆ, ಒದ್ದಾಡುತ್ತವೆ, ಅವೇನೂ ಮೂಕ ಅಲ್ಲವಲ್ಲ. ಅದೊಂದು ರೀತಿಯ ದಾರುಣ...

ಒಂದು ಸಲ ಏನಾಯಿತೆಂದರೆ ಒಬ್ಬ ಟಿವಿ ವರದಿಗಾರ ಅಲ್ಲಿ ಏನು ನಡೆಯುವುದೆಂದು ಅರಿಯದೇ ಹೋದ, ಬೇರೆ ಯಾವುದೋ ಕೆಲಸಕ್ಕೆ ಅವನು

ಅಲ್ಲಿಗೆ ಹೋಗಿದ್ದ. ಅಕಸ್ಮಾತ್ತಾಗಿ ಈ ದೃಶ್ಯ ಅವನ ಕಣ್ಣಿಗೆ ಬಿತ್ತು. ಅವನು ಅದಕ್ಕಾಗಿಯೇ ಹೋದನು, ತೀರ ಕೆಡುಕಿನಿಸಿತು, ಇದನ್ನು ನಿಲ್ಲಿಸಲೇಬೇಕೆಂದು ನಿಶ್ಚಯಿಸಿದ. ಸುಮಾರು ಎರಡು ವರ್ಷ ಅವನು ಹೋರಾಡಿದ, ಟೆಲಿವಿಶನ್‌ಗಳ ಮೂಲಕ, ಎಲ್ಲ ರೀತಿಯ ಮಾಧ್ಯಮಗಳ ಮೂಲಕ ಜನರನ್ನು ಎಚ್ಚರಿಸಿದ. ಅದರಿಂದಾಗಿ ಪ್ರಧಾನ ಮಂತ್ರಿಯ ಮೇಲೆ ತೀವ್ರ ಒತ್ತಡ ಬಂದಿತು. (ಉತ್ತರೀಯ ಕೆನಡಾ ಮತ್ತು ನಾರ್ವೆ). ಎಲ್ಲ ಸೇರಿ ಸೀಲ್ ಮರಿಗಳನ್ನು ಜೀವಂತ ಸುಡುಯುವ ಬದಲು ಅವುಗಳ ಮೇಲೆ ಡೀಸೆಲ್ ಸುರಿಯುವುದು, ಅದರಿಂದ ಅವು ಉಸಿರುಗಟ್ಟಿ ಸಾಯುತ್ತವೆ ಎಂಬ ನಿರ್ಣಯಕ್ಕೆ ಬಂದರು. ಮೊದಮೊದಲು ಡೀಸೆಲ್ ಸುರಿಯುವುದು ಕೂಡ ದುಬಾರಿ ಅನಿಸಿತು (ಎಷ್ಟು ಅಮಾನವೀಯತೆ ನೋಡಿ) ಅವರು ಪುನಃ ಪ್ರಧಾನ ಮಂತ್ರಿಯ ಬಳಿ ಹೋಗಿ ನಿಷೇಧ ತೆಗೆಯಲು ಹೇಳಿದರು, ಅವನು ಒಪ್ಪಿಕೊಂಡ ಮೊದಲಿನಂತೆಯೇ ಅವುಗಳನ್ನು ಸುಲಿಯಲು ಹೇಳಿದ. ಮರಿಗಳ ತಾಯಿ ಸೀಲ್‌ಗಳು ಇದನ್ನು ವಿರೋಧಿಸುತ್ತವೆ, ಕಾದಲು ಬರುತ್ತವೆ ಎಂದು ತಿಳಿದು, ಅವುಗಳ ಕಣ್ಣು ಕೀಳಲು ಆರಂಭಿಸಿದರು. ಇದೆಲ್ಲ ತಿಳಿದ ಮೇಲೆ, ನನಗನಿಸಿತು, ಮಾನವೀಯತೆ ಅನ್ನುವುದು ಎಷ್ಟು ಕೆಳಮಟ್ಟಕ್ಕೆ ಹೋಗಿದೆ, ಪಾತಾಳ ಮುಟ್ಟಿದೆ ಅನಿಸಿತು..

**ಶ್ರೀಮಾತೆ ಈ ಸೀಲ್‌ಗಲಿಗಾಗಿ ಕೋರ್ಟ್ ಪೆಟಿಶನ್ ರುಜು ಹಾಕಿದ್ದು.**

ಆ ಮೇಲೆ ಕೆಲ ವಕೀಲ ಸೇರಿ ನನ್ನ ಬಳಿ ಒಂದು ಕಾರ್ಡ್ ತೆಗೆದುಕೊಂಡು ಬಂದರು. ಕೆಲವರು ಬೇರೆ ಚಳುವಳಿ ಆರಂಭಮಾಡಿದ್ದರು. ದೊಡ್ಡ ಚಿತ್ರಗಳು, ಮರಿ ಸೀಲ್‌ಗಳು ಹತ್ಯಾಕಾಂಡದ ಚಿತ್ರ – ಅವು ತುಂಬ ಸುಂದರವಾಗಿರುತ್ತವೆ, ನಿಮಗೆ ಗೊತ್ತೇ? ಅಷ್ಟೇ ಜಾಣ ಮರಿಕೂಡ! ಇದೆಲ್ಲ ಸಂಗತಿ ಕೇಳುವ ಮೊದಲೇ ನಾನು ಆ ಚಿತ್ರಗಳನ್ನು ನೋಡಿದೆ. ಒಬ್ಬ ಅಡುಗೆಯವನು, ಎಲ್ಲವನ್ನೂ ಹೊಂದಿಸುವವನು, ಓರ್ವ ವರಿದಿಗಾರ, ಆ ಸಣ್ಣ ಸಣ್ಣ ಸೀಲ್ ಮರಿಗಳ ಚಿತ್ರವುಳ್ಳ ಪೋಸ್ಟ ಕಾರ್ಡ್‌ಗಳು. ಅವುಗಳ ಮೇಲೆ ತಲೆಬರಹ, ಫ್ರೆಂಚ್‌ನಲ್ಲಿ ಮತ್ತು ಇಂಗ್ಲೀಷನಲ್ಲಿ – "ಸೀಲ್ ಮರಿಗಳು ಜೀವ ಉಳಿಸಿ" ಈ ರೀತಿ ರುಜು ಹಾಕಲು ಮತ್ತು ಹೆಸರು ಬರೆಯಲು ತುಸು ಸ್ಥಳ. ಹಿಂದಿನ ಬದಿಯಲ್ಲಿ ಏನಾದರೂ ಅಭಿಪ್ರಾಯ ಬೆರೆಯಲು ಒಂದು ಸಣ್ಣ ಕಾಲಂ. ಅವರೆಲ್ಲ ಬಂದು ನನಗೆ ಕಾರ್ಡ್ ಕೊಟ್ಟು ಏನಾದರೂ ಬರೆಯಲು ಹೇಳಿದರು. ಅದರ ಪೈಕಿ ಒಂದು ಕಾರ್ಡ್

ನಾರ್ವೇ ದೇಶದ ಮೀನುಗಾರಿಕೆ ಮಂತ್ರಾಲಯ, ಒಂದು ಕೆನಡಾದ ಮೀನುಗಾರಿಕೆ ಮಂತ್ರಾಲಯ ಇನ್ನೊಂದು ಕೆನಡಾದ ಪ್ರಧಾನ ಮಂತ್ರಿಗೆ.

ನಾನು ರುಜು ಹಾಕಿ "ಶ್ರೀಮಾತೆ, ಶ್ರೀ ಅರವಿಂದ ಆಶ್ರಮ ಪಾಂಡಿಚೇರಿ" ಎಂದು ಮುದ್ರೆ ಹಾಕಿದೆ. ಮತ್ತ ಏನೂ ಬರೆಯಲಿಲ್ಲ. ಯಾವ ವಾಕ್ಯವನ್ನು ಸೇರಿಸಲಿಲ್ಲ. ಅವರಿಗೆ ಕೊಟ್ಟೆ ಅವರು ಅದನ್ನು ಕಳಿಸುತ್ತಾರೆ.

ಹೌದು, ಇದೆ, ಉತ್ತರದಲ್ಲಿ ಒಂದು ರೀತಿಯ ಕಾಡು ವರ್ತನೆ ಇದೆ. ಇದು ಒಂದು ನಿದರ್ಶನ, ಒಂದು ಉದಾಹರಣೆ ಮಾತ್ರ. ಆದರೆ ಇಂಥ ಹೇಯವಾದ ಪ್ರಜ್ಞೆ ಜಗತ್ತಿನಲ್ಲಿ ಎಲ್ಲೆಡೆಯೂ ಇದೆ.

ಅಯ್ಯೋ ಪಾಪ, ಆ ಸಣ್ಣ ಮರಿಗಳು ...

ಸೀಲ್‌ಗಳು ವಿಕಾಸ ಹೊಂದಿದ ಪ್ರಾಣಿಗಳು. ಅವು ಪ್ರಜ್ಞಾಹೀನ ಜೀವಿಗಳಲ್ಲ. ಮುಖಪುಟದಲ್ಲೊಂದು ಸಣ್ಣ ಮರಿ. ನಿಮ್ಮನ್ನೇ ನೆಟ್ಟ ನೋಟದಿಂದ ನೋಡುವ ಸುಂದರ ಮರಿ.. ಅತಿ ಚೆಂದವಾಗಿತ್ತು.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಅಕ್ಟೋಬರ್ 11, 1969**

ಪ್ರೇಮವು ಕೇವಲ ಮಾನವರಲ್ಲಿ ಮಾತ್ರ ಪ್ರಕಟವಾಗುವುದಿಲ್ಲ. ಅದು ಎಲ್ಲೆಲ್ಲೂ ಇದೆ. ಅದು ಸಸ್ಯಗಳಲ್ಲೂ ಇದೆ, ಅಷ್ಟೇ ಏಕೆ ಜಡ ಭೌತಿಕ ವಸ್ತುಗಲ್ಲಿ ಇದೆ. ಪ್ರಾಣಿಗಳಲ್ಲಿ ಅದನ್ನು ಸುಲಭವಾಗಿ ಗುರುತಿಸಬಹುದು. ಈ ದೈವೀ ಶಕ್ತಿಯಲ್ಲಿ ದೋಷಗಳು, ವಿಕೃತಿಗಳು ಕಂಡುಬರಲು ಮುಖ್ಯ ಕಾರಣವೇನೆಂದರೆ ನಿರ್ದಿಷ್ಟ ಮಿತಿಗೊಳಪಟ್ಟ ಉಪಕರಣ ಅಜ್ಞಾನ, ಅಸ್ಪಷ್ಟತೆ ಹಾಗೂ ಸ್ವಾರ್ಥ ಸರತೆ ಇವೇ ಆಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/69–70 – ಶ್ರೀಮಾತೆ**

## ಶ್ರೀ ಅರವಿಂದರ

# 'ವೇದ ರಹಸ್ಯ'

**– ಅನುವಾದ: ಪುಟ್ಟು ಕುಲಕರ್ಣಿ**

**2**

ಇಲ್ಲಿ ನಮಗೆ ಅನುಭವಕ್ಕೆ ಬರುತ್ತಿರುವ ಸಂಗತಿ ಎಂದರೆ, ಅವರು ಈ ರೀತಿಯ ಅಭಿವ್ಯಕ್ತಿಗಳನ್ನು ಅಥವಾ ಪ್ರಕಾಶನಗಳನ್ನು, ಎಷ್ಟು ಅಬ್ಬರದಲ್ಲಿ ಸಾಧ್ಯವೋ ಅಷ್ಟು ಅಬ್ಬರದಲ್ಲಿ ಜೋರಾಗಿಯೇ ಅಪ್ಪಳಿಸುವಂತೆಯೇ ಮತ್ತು ವಿಘಟನಾತ್ಮಕವಾಗಿರುವ ಸಾಮಗ್ರಿಗಳನ್ನೇ ತಮ್ಮ ಚಿಂತನಗಳಲ್ಲಿ ಸೃಷ್ಟಿಗೊಳಿಸುತ್ತ – ಅದರಲ್ಲೂ ಅವುಗಳು ನಿಗದಿತವಾದ ಆಕಾರ ಅಥವಾ ಸ್ವರೂಪಸಿದ್ಧವಾಗಿರುವಂತೆಯೇ ಮತ್ತು ಸ್ಥಿರತೆಯನ್ನು ಹೊಂದಿಕೊಂಡಿರುವಂತೆಯೇ – ರೂಪಿಸಿದ್ದಾರೆ ಎಂದು ಈಗ ಭಾವಿಸುವಂತೆ ಇಲ್ಲ.

ಆದರೂ, ಈ ಅಸ್ಪಷ್ಟ ಮತ್ತು ಬರ್ಬರತೆಯ (ಅನಾಗರಿಕತೆಯ) **ಸಂರಚನೆಗಳು**[1] ಖಚಿತವಾಗಿಯೂ ಎಲ್ಲ ಸಾಹಿತ್ಯಿಕ ಇತಿಹಾಸದಲ್ಲಿ ಭವ್ಯಾತಿಭವ್ಯವಾಗಿರುವ, ಸುಸಂಗತ ಮತ್ತು ಸೌಭಾಗ್ಯ ಸ್ವರೂಪದ ಒಂದು ಸಂರಚನೆಯನ್ನೇ ಹೊಂದಿವೆ. ಇವು ಎಂದಿಗೂ ಪ್ರತಿಷ್ಠಿತ ಜ್ಞಾನದ ವಿಷಯಗಳ ಪ್ರತಿಷ್ಠಿತ ಆಗರವೇ ಆಗಿವೆ. ಇವು ಜಗತ್ತಿನ ಕೇವಲ ಕೆಲವೇ ಕೆಲವು ಶ್ರೀಮಂತ, ಸಮೃದ್ಧ ಮತ್ತು ಪ್ರಗಾಢಪೂರ್ಣ ಧರ್ಮಗಳನ್ನಷ್ಟೇ ಅಲ್ಲದೇ, ಇದರದೇ ಆದ ಸೂಕ್ಷ್ಮಾತಿಸೂಕ್ಷ್ಮ ಅಂಶವಾಗಿರುವ ತಾತ್ತ್ವಿಕ ಮೀಮಾಂಸೆಯ – **ತತ್ತ್ವಜ್ಞಾನಗಳಿಗೂ**[2] ಅನ್ವಯಗೊಂಡಿವೆ. ಒಂದು ನಿರ್ದಿಷ್ಟಪಡಿಸಲಾಗಿದ್ದ ಸಾವಿರಾರು ವರ್ಷಗಳ ಸ್ಥಿರತೆಯಲ್ಲಿ ಇರುವ ಸಂಪ್ರದಾಯದಲ್ಲಿ, ಸರ್ವ ವಿಷಯಕ್ಕೂ ಆಧಾರವಾಗಿ, ಜೊತೆಗೆ ಮಾನಕವಾಗಿ, ಬ್ರಾಹ್ಮಣಗಳು ಹಾಗೂ ಉಪನಿಷತ್ತುಗಳು ಪ್ರಮಾಣವೆಂದು ಅಧಿಕೃತವಾಗಿಯೇ ಸತ್ಯವೆಂದೂ ಆದರಿಸಲಾಗಿತ್ತು. ಅಷ್ಟೇ ಅಲ್ಲದೇ ತಂತ್ರಶಾಸ್ತ್ರ ಮತ್ತು ಪುರಾಣಗಳಲ್ಲಿಯೂ ಸಹಿತ ಹಾಗೂ ಇತರೇ ಮಹಾನ್ ತಾತ್ತ್ವಿಕ ಸಿದ್ಧಾಂತಗಳ ಪಂಥಗಳಲ್ಲಿ ಮತ್ತು ಸುಪ್ರಸಿದ್ಧ ಸಾಧು–ಸಂತ–ಸತ್ಪುರುಷರ ಉಪದೇಶಗಳಲ್ಲಿಯೂ, ಇವು ಸದಾ ಗೌರವಿಸಲ್ಪಟ್ಟೇ ಅನುಷ್ಠಾನಗೊಂಡಿವೆ. ಅದೇ ರೀತಿಯಲ್ಲಿಯೇ ಮುಂದುವರೆದಿವೆ. ಈ ಮೂಲಕ ಅದಕ್ಕೊಂದು ನಾಮಸ್ವರೂಪವನ್ನು ನೀಡಿ

**'ವೇದ'**[3]ವೆಂದು ರೂಪಿಸಲಾಯಿತು. ಅದನ್ನು ಜ್ಞಾನವೆಂದೂ ಸ್ವೀಕರಿಸಲಾಗಿದೆ. ಮಾನವನ ಮನೋಚೇತನದ ಅತ್ಯುನ್ನತ ಹಂತದ ಆಧ್ಯಾತ್ಮಿಕ–ಸತ್ಯದ ಹೆಸರೂ ಸಹಿತ ಇದೇ ಆಗಿದೆ. ಆದರೆ ಪ್ರಸ್ತುತ ಅವಧಿಯಲ್ಲಿ ರೂಪಿತಗೊಂಡಿರುವ ವ್ಯಾಖ್ಯಾನಗಳನ್ನೋ ಅಥವಾ ಪ್ರತಿಪಾದನೆಗಳನ್ನು ಗಮನಿಸಿದರೆ – ಅದೂ **ಸಾಯಣಾಚಾರ್ಯರಿಂದ ರೂಪಿತಗೊಂಡಿರಬಹುದಾದ**[4] ಅಥವಾ ಆಧುನಿಕ ಸಿದ್ಧಾಂತದ ಹಿನ್ನೆಲೆಯಲ್ಲಿ ರೂಪಿತವಾಗಿರಬಹುದು – ಈ ರೀತಿಯ ಎಲ್ಲ ಉದಾತ್ತ (Sublimes) ಮತ್ತು ಪಾವಿತ್ರ್ಯತೆಯ ಖ್ಯಾತಿಯು ಒಂದು ಪ್ರಚಂಡ (colossal)[5] ಕ್ರಿಯೆಯಾಗಿದೆ. ಇದಕ್ಕೆ ವಿರುದ್ಧವಾಗಿ ನಿಷ್ಕಪಟತೆಯ ಮೂಢನಂಬಿಕೆಗಿಂತ ಹೆಚ್ಚಿನದೇನೂ ಬೋಧಿಸದ ಮತ್ತು ಸಂಪೂರ್ಣವಾಗಿ ಜಡತತ್ತ್ವದ ಭೌತಿಕವಾದದಲ್ಲಿಯೇ ಇದ್ದ ಬರ್ಬರ ಜನಾಂಗದವರು ಆಚರಿಸುತ್ತಿದ್ದ ಆಚರಣೆಗಳಿಗೆ, ಅದರಲ್ಲೂ ಭೌತಿಕವಾಗಿ ಲಭ್ಯವಾಗುತ್ತಿದ್ದ ಲಾಭಗಳು ಮತ್ತು ಆನಂದದ ವಿಷಯಗಳಲ್ಲಿ ಸೀಮಿತಗೊಂಡಿದ್ದ ಜೊತೆಗೆ ಅಜ್ಞಾತದಲ್ಲಿಯೇ ಉಳಿದಿದ್ದ ನೈತಿಕ ಪರಿಕಲ್ಪನೆಗಳ ಪ್ರಾಥಮಿಕ ಅಥವಾ ಧಾರ್ಮಿಕ ಆಕಾಂಕ್ಷೆಗಳ **ಪ್ರಾಥಮಿಕ ಹಂತದ ಸ್ವರೂಪದಲ್ಲಿದ್ದವು.**[6] ಇಲ್ಲವೇ ಸಂದರ್ಭೋಚಿತವಾಗಿರುವ ರೀತಿಯಲ್ಲಿ ಪಥಗಳನ್ನು ರೂಪಿಸಿಕೊಂಡು, ಜೊತೆಗೆ ಅವುಗಳೊಡನೆ ಇರಬೇಕಾದ ಪ್ರಾಕೃತಿಕ ಶಕ್ತಿ, ಸೌಷಮ್ಯಪೂರ್ಣವಾಗಿರುವ ಸಾಮರಸ್ಯವೆಂದೋ ಒಟ್ಟೂ ಪ್ರಭಾವವನ್ನು ನಾಶ ಮಾಡಲಾಯಿತು. ಒಂದು ಖಚಿತವಾದ ಆಧಾರವನ್ನು ಹೊಂದಿಕೊಂಡೇ ರೂಪಿತಗೊಂಡ ಅಥವಾ ಅಭಿವ್ಯಕ್ತಗೊಂಡ ಈ ಉಪನಿಷತ್ತುಗಳು, ತದನಂತರದಲ್ಲಿ ಉದ್ಗಮಿಸಿದ ಪಂಥಗಳು ಮತ್ತು ತತ್ತ್ವಜ್ಞಾನಗಳೂ ಈ ಹಿನ್ನೆಲೆಯಲ್ಲಿಯೇ ಜನ್ಮ ತಾಳಿವೆ. ಆದರೆ ಆಮೇಲಾಮೇಲಿನ ಅವಧಿಯಲ್ಲಿ, ಸಾಂಪ್ರದಾಯಿಕವಾಗಿ ಆಚರಣೆಯಲ್ಲಿದ್ದ ವೇದದ ಭೌತಿಕವಾದದ ವ್ಯವಸ್ಥೆಯ ವಿರೋಧದಲ್ಲಿ ರೂಪುಗೊಂಡಿರುವ ಊಹಾತ್ಮಕ ಮತ್ತು ತಾತ್ವಿಕತೆಯ ಮನೋಭಾವದಲ್ಲಿ ಅಭಿವ್ಯಕ್ತಗೊಂಡ ವಿರೋಧಾತ್ಮಕ (ದಂಗೆಯ ಸ್ವರೂಪದ) ರೀತಿಯಲ್ಲಿ ಪರಿಗಣಿತವಾಗಿತ್ತು.

ಆದರೆ ಈ ಕಲ್ಪನೆಯು ಸಮಾನಾಂತರವಾಗಿರುವ ಯುರೋಪಿಯನ್ ಚಿಂತನಾ ಕ್ರಮಾಂಕಗಳಲ್ಲಿಯೂ ಬೆಂಬಲಿಸಲ್ಪಡುತ್ತಲೇ ಬರಲಾಯಿತು. ಆದರೆ ಇಲ್ಲಿ ನಿಜವಾಗಿಯೂ ಅವರು ಏನನ್ನೂ ವಿವರಿಸುತ್ತಿಲ್ಲ. ಉಪನಿಷತ್ತುಗಳಲ್ಲಿ

ಅಡಕಗೊಂಡಿರುವ ಗಂಭೀರ ಮತ್ತು ಆಳವಾದ ಜ್ಞಾನದ ಜೊತೆಗೆ ಚಿಂತನಾ ವ್ಯವಸ್ಥೆಯ ಪರಮೋಚ್ಚ ಹಂತದ ವಿಷಯಗಳು, ಸೂಕ್ಷ್ಮಾತಿಸೂಕ್ಷ್ಮ ಹಾಗೂ ಮನೋವೈಜ್ಞಾನಿಕ ಸ್ವರೂಪದ ವಿಷಯಗಳನ್ನೇ ಈ ಉಪನಿಷತ್ತುಗಳು ಒಳಗೊಂಡಿವೆ. ಹೀಗಾಗಿ, ಈ ಎಲ್ಲ ಆಧಾರಭೂತ ಸಂಗತಿಗಳು ಕೇವಲ ಶೂನ್ಯ ಸ್ಥಿತಿಯಲ್ಲಿದೆ ಎಂದು ಪರಿಭಾವಿಸಲಾಗಿರುವ ಹಿಂದಿನ ಹಂತದಿಂದ ಬಂದಿರುವ ವಿಷಯಗಳೇನೂ ಅಲ್ಲ. ಮಾನವನ ಮನಸ್ಸು **'ಜ್ಞಾನದಿಂದ ಜ್ಞಾನಕ್ಕೆ'**[7] ಯಾವತ್ತೂ ಚಲನಶೀಲತೆಯನ್ನೇ ಹೊಂದಿರುತ್ತದೆ. ಪ್ರಗತಿಗೊಳ್ಳುತ್ತಾ ವಿಕಾಸಗೊಳ್ಳುತ್ತಲೇ ಇರುತ್ತದೆ. ಅದು ತನ್ನ ಪೂರ್ವ ಸ್ಥಿತಿಯಿಂದ ತನ್ನನ್ನೇ ತಾನೆ ಸ್ವಯಂ ನವೀಕರಿಸಿಕೊಳ್ಳುತ್ತಲೇ ಇರುತ್ತದೆ: ವ್ಯಾಪ್ತಗೊಳ್ಳುತ್ತಲೂ ಇರುತ್ತದೆ. ಮರೆ ಮಾಡಿ ಇಡಲ್ಪಟ್ಟಿದ್ದ ಸ್ಥಿತಿಯಿಂದ ಮುಕ್ತವಾಗಿ ಪ್ರಕಾಶನಗೊಳ್ಳುತ್ತ ಇರುತ್ತದೆ. ಆದರೆ ಈ ವಿಷಯವನ್ನೇ ಸಂಪೂರ್ಣವಾಗಿ, ಉದ್ದೇಶಪೂರ್ವಕವಾಗಿಯೇ ಮುಚ್ಚಿಡಲಾಯಿತು. ಆದರೆ ಈ ರೀತಿಯಲ್ಲಿ ಹುದುಗಿಸಿ ಇಡಲಾಗಿದ್ದರೂ ಸಹಿತ ಅದು ನೂತನ ಆವಿಷ್ಕಾರಗಳಿಗೆ ದಾರಿ ಮಾಡಿಕೊಟ್ಟಿದೆ. ಏಕೆಂದರೆ ಈ ಉಪನಿಷತ್ತುಗಳೂ ಸಹಿತ ಚಿಂತನಾಕ್ರಮಾಂಕದ ಮೂಲಸ್ವರೂಪವನ್ನು ಸ್ಪಷ್ಟವಾಗಿ ತೋರುತ್ತಿವೆ: ಉಗಮವನ್ನು ಊಹಿಸಲು ಸಾಧ್ಯವಾಗುತ್ತದೆ. ಹೀಗಾಗಿ ಈ ಉಪನಿಷತ್ತುಗಳು ತನ್ನಷ್ಟಕ್ಕೆ ತಾವೇ ಸ್ವಯಂಸಂಜಾತವಾಗಿದ್ದು ಆದಿಯನ್ನು ಹೊಂದಿದೆ. ಆದರೆ ಇಂತಹ ಸುವ್ಯವಸ್ಥಿತವಾಗಿರುವ ಸಂರಚನಾ ವಿಧಾನದ ಆಯಾಮಗಳು ಸಾಮಾನ್ಯ ಸಿದ್ಧಾಂತಗಳಲ್ಲಿ ಲಭ್ಯವಾಗುವದಿಲ್ಲ. ಹೀಗಾಗಿ ಈ ಸಾಮಾನ್ಯ ಸಿದ್ಧಾಂತಗಳು ಸೊರಗಿವೆ. ಈ ಮಧ್ಯದಲ್ಲಿ ರೂಪಿತಗೊಂಡಿರುವ ಕಂದಕದ ಕುರಿತು ಊಹೆಗಳನ್ನು ರೂಪಿಸಿಕೊಳ್ಳುವ ಮೂಲಕವೇ ಉಪನಿಷತ್ಕಾರರು ಅಂತಹ ಪರಮೋಚ್ಚ ನೆಲೆಯ ಅಮೋಘ ಚಿಂತನಗಳನ್ನು ಅಭಿವ್ಯಕ್ತಗೊಳಿಸಿರುವದರ ಕುರಿತು, ನಾವೂ ಸಹಿತ ಊಹೆಗಳನ್ನು ರೂಪಿಸಿಕೊಂಡು, ಆ ಉಪನಿಷತ್ಕಾರರ ಅಭಿವ್ಯಕ್ತಿಗಳ ಮೂಲಕ ಶೋಧಿಸಿಕೊಳ್ಳಬೇಕಾಗಿದೆ. ಅದರಲ್ಲೂ ಬರ್ಬರ ಸ್ವಭಾವದ ಆಕ್ರಮಣಕಾರರಾಗಿದ್ದ ಆರ್ಯರು ಸುಸಂಕೃತರಾಗಿದ್ದ ದ್ರಾವಿಡರ ಮೂಲಕ ಪಡೆದುಕೊಂಡರು ಎನ್ನುವ ಊಹೆಗಳ ವಿಷಯದಲ್ಲಿಯೂ ಅಧ್ಯಯನ/ಶೋಧನೆ ನಡೆಯಬೇಕಿದೆ. ಈಗ ಇಂತಹದೇ ಒಂದು (ಕಂಜೆಕ್ಚರ್) ಊಹೆಯನ್ನು ಹಾಗೂ ಇಂತಹದೇ ಊಹೆಯಿಂದ ಪಡೆದುಕೊಳ್ಳುವದಾಗಿದೆ. ಇಲ್ಲಿ ರೂಪಿತಗೊಂಡಿರುವ ವಿವರಗಳು ಕೇವಲ ಪಂಜಾಬ (ಖೈಬರ್ ಕಣಿವೆ ಮಾರ್ಗ) ಕಡೆಯಿಂದ ಆಗಮಿಸಿದ ಆಕ್ರಮಣಕಾರರ

ಭಾಷಾ ವಿಷಯವು ಕೇವಲ ಕಾಲ್ಪನಿಕವಾದುದು ಅಲ್ಲ ಎನ್ನುವದು, ಜೊತೆಗೆ ಇವು ನಿಜಕ್ಕೂ ಆರ್ಯರ ವಿವರಗಳೇ? ಎಂದು ಅನುಮಾನ ಬರುತ್ತದೆ.

ಈಗ, ಪ್ರಾಚೀನ ಯುರೋಪಿಯನ್ನ ವಲಯದಲ್ಲಿ ಇರುವ ಬೌದ್ಧಿಕ ಮತ್ತು ತತ್ತ್ವಶಾಸ್ತ್ರೀಯ ಅಧ್ಯಯನದ ವ್ಯವಸ್ಥೆಗಳು ಸಹಿತ **ಅತೀಂದ್ರಿಯ ರಹಸ್ಯಗಳಿಂದಲೇ** ರೂಪಿತಗೊಂಡಿದ್ದವು. **ಓರ್ಫಿಕ್ (Orphic)**[8] **ಮತ್ತು ಎಲ್ಯುಷಿಯಸ್ (Eleusinian)**[9] ರಹಸ್ಯವಾದಗಳು (ಸಿದ್ಧಾಂತಗಳು) ತಮ್ಮ ಸಮೃದ್ಧ ಪೂರ್ಣವಾಗಿರುವ ಪ್ರತಿಪಾದನೆಯ ಮೂಲಕವೇ ಅಲ್ಲಿನ ಚಿಂತನಾ–ವಲಯದ ನೆಲವನ್ನು ಅತ್ಯಂತ ಸಮೃದ್ಧಗೊಳಿಸಿದ್ದವು. ಇದರ ಫಲಿತವಾಗಿಯೇ ಅಲ್ಲಿ ಪ್ಲೇಟೋ ಮತ್ತು ಪೈಥಾಗೋರಸರಂತಹ ಶ್ರೇಷ್ಠ ತತ್ತ್ವಜ್ಞಾನಿಗಳು ಉದಿಸಲು ಕಾರಣವಾಯಿತು.

ಇದೇ ಸ್ವರೂಪದ ಚಿಂತನಾ ವಿಕಾಸ ಸ್ವರೂಪದ ಯಾತ್ರೆಯು ಭಾರತದಲ್ಲಿಯೂ ಪ್ರಾರಂಭಗೊಂಡಿರುವ ಎಲ್ಲ ಸಾಧ್ಯತೆಗಳೂ ಇವೆ. ಬ್ರಾಹ್ಮಣಗಳ ಆಂತರ್ಯ ಮತ್ತು ಉಪನಿಷತ್ತುಗಳಲ್ಲಿ ಅಭಿವ್ಯಕ್ತಗೊಂಡಿರುವ ಪ್ರತಿಮೆಗಳ(Symbol)ಲ್ಲಿ, ಈ ರೀತಿ ವಿಕಸನಗೊಳ್ಳುತ್ತಿದ್ದ ಚಿಂತನಾ ವಿಧಾನಗಳು – ಗ್ರೀಕ್ ತತ್ತ್ವಜ್ಞಾನದಲ್ಲಿ ಇದ್ದ ರಹಸ್ಯಮಯ ಕವಚದಲ್ಲಿಯೇ ಬೋಧಿಸುತ್ತಿದ್ದಂತೆಯೇ – ಇಲ್ಲಿಯೂ ಸಹಿತ ಆಚ್ಛಾದಗೊಂಡೇ ರೂಪಿತಗೊಂಡಿದ್ದವು.

(ಸಶೇಷ)

---

**ಟಿಪ್ಪಣಿ:**

1) **ಸಂರಚನೆಗಳು:** ಅನಾಗರಿಕ ವರ್ಗದಿಂದ ರೂಪಿಸಲ್ಪಟ್ಟವುಗಳ, ಎನ್ನುವ ಕಲ್ಪನೆ ರೂಪುಗೊಂಡದ್ದೇ ಪಾಶ್ಚಾತ್ಯ ದೃಷ್ಟಿಕೋನದಲ್ಲಿ ಅವುಗಳ ಕುರಿತು ದಾಖಲಾತಿಗೊಳಿಸಲಾದ ಸಂಗತಿಗಳೇ ವಿನಾ ಬೇರೆ ಏನೂ ಅಲ್ಲ. ವೇದಗಳು ರಚನೆಗೊಳ್ಳುತ್ತಿದ್ದ ಅವಧಿಯಲ್ಲಿ 'ಲಿಪಿ'ಯಂತೂ ಇನ್ನೂ ಸೃಷ್ಟಿಗೊಂಡಿರಲಿಲ್ಲ. ಹೀಗಾಗಿ ಶ್ರುತಿ ಮತ್ತು ಸ್ಮೃತಿಗಳ ಮೂಲಕವೇ ಅವುಗಳನ್ನು ರಕ್ಷೆ ಮಾಡಿಕೊಂಡು ಬರಲಾಗಿದೆ ಎನ್ನುವದು ವಿದಿತ ವಿಷಯವಾಗಿದೆ. ಅವುಗಳಲ್ಲಿ ರೂಪಿತವಾದ ವಿಭಾಗಗಳೂ ಸಹಿತ – ಕರ್ಮ ಕಾಂಡದ್ದೇ ಇರಲಿ ಅಥವಾ ಜ್ಞಾನ ಕಾಂಡದ್ದೇ ಇರಲಿ, ಎಂದಿಗೂ

ಒಂದನ್ನೊಂದು ವಿರೋಧವೆಂದು ತಿಳಿದುಕೊಳ್ಳಲೇ ಇಲ್ಲ. ಆಗಾಗ ಪಂಡಿತರ ನಡುವೆ ತರ್ಕಾಧಾರಿತವಾಗಿ ಜಿಜ್ಞಾಸೆ ನಡೆದರೂ ಅದೂ ಸಹಿತ ಮೀಮಾಂಸೆಯ ಹಂತದಲ್ಲಿಯೇ ಉಳಿದುಕೊಂಡು ಬಂದಿದೆ. ಆದರೆ, ಪಾಶ್ಚಾತ್ಯ ದೃಷ್ಟಿಕೋನದಲ್ಲಿ, ಶ್ವೇತ ವರ್ಣದ ಮುಂಚೂಣಿಯನ್ನೇ ಉಳಿಸಿಕೊಂಡು ಬರಲು ನಡೆದ ಹುನ್ನಾರುಗಳಲ್ಲಿ ರೂಪಣೆಗೊಂಡ ಈ ರೀತಿಯ ವಿಚಲಿತ ಅಭಿಪ್ರಾಯಗಳನ್ನೇ, ಮುಂದಿನ ಪೀಳಿಗೆಗೆ ಅಧ್ಯಯನದ ವಸ್ತುವನ್ನಾಗಿಸಿ, ವಿಸ್ತಾರಗೊಳಿಸಲು ಯತ್ನಿಸಲಾಯಿತು. ಇವತ್ತಿಗೂ ಈ ರೀತಿಯ ಸಂರಚನಾ ಹಿನ್ನೆಲೆಯ ಬಹುತೇಕ ವಿಭಾಗಗಳು ಪಾಶ್ಚಾತ್ಯ ಲೇಖಕರ/ ಚಿಂತಕರ ಕೊಡುಗೆಗಳೇ ಆಗಿವೆ ಎನ್ನುವದು ಇಲ್ಲಿ ಮುಖ್ಯವಾಗಿದೆ.

2) ತಾತ್ತ್ವಿಕ ಮೀಮಾಂಸೆಯ – **ತತ್ತ್ವಜ್ಞಾನಗಳಿಗೂ** ಬದುಕಿನ ಗತಿ – ವಿಧಾನಗಳಲ್ಲಿ ಹಾಗೂ ಘಟನೆಗಳಲ್ಲಿ ಘಟಿಸಬಹುದಾದ ವಿಚಲನೆಗಳು, ಸಾಂಸ್ಕೃತಿಕ ವಿಕಾಸಕ್ಕೆ ಅಡೆತಡೆಯನ್ನು ಅಥವಾ ಅದರ ಮೂಲಸ್ವರೂಪವನ್ನೇ ತಿರುಚವಂತಹ ಘಟನೆಗಳನ್ನು ಎದುರಿಸಬೇಕಾದಾಗ, ಪರಂಪರೆಯ ವಿಧಾನದ ಅಸ್ಮಿತೆಯನ್ನು ರಕ್ಷಿಸುವ ಸಲುವಾಗಿ ಸಂಘರ್ಷ ಅನಿವಾರ್ಯವಾಗುತ್ತದೆ. ವೇದಗಳಲ್ಲಿ ರೂಪಿತವಾಗಿರುವ ಪಂಚ ಭೂತಗಳಲ್ಲಿ ಮೂರು ಪುರುಷ ಪ್ರಧಾನ ಸ್ವರೂಪದಲ್ಲಿವೆ (ಅಗ್ನಿ, ಆಕಾಶ ಮತ್ತು ವಾಯು). ಉಳಿದೆರಡು (ಭೂಮಿ ಮತ್ತು ಜಲ) ಮಾತ್ರ ಸ್ತ್ರೀ ಪ್ರಧಾನತೆಯಲ್ಲಿಯೇ ಮುಂದುವರೆದುಕೊಂಡೇ ಬಂದಿವೆ. ವೇದಗಳು ರೂಪಿತಗೊಳ್ಳುವ ಮೊದಲೇ ಭಾರತದ ಭೌಗೋಳಿಕ ವ್ಯವಸ್ಥೆಯಲ್ಲಿ ಇದ್ದ "ಶಕ್ತಿ ಮಾತೆ"ಯ ಆರಾಧನೆ/ಪೂಜೆ/ಅಧ್ಯಯನಗಳೂ ಸಹಿತ ವೇದದಷ್ಟೇ ವ್ಯಾಪ್ತಿಯನ್ನು ಹೊಂದಿವೆ. ಇವೆರಡೂ ತತ್ತ್ವಗಳ ಅಪೂರ್ವ ಸಂಗಮವನ್ನು ವೇದೋತ್ತರ ಕಾಲದಲ್ಲಿ ಕಾಣುತ್ತೇವೆ. ಶಿವ–ಶಕ್ತಿಯೋ ಅಥವಾ ದ್ಯಾವಾ–ಪೃಥಿವಿಯೋ – ಇಲ್ಲವೋ ರಾಧಾ–ಕೃಷ್ಣವೋ – ಒಟ್ಟಿನಲ್ಲಿ ಇವೆರಡೂ ಸಂಯೋಗಗೊಂಡೇ ಭಾರತೀಯ ಚಿಂತನಾ ವ್ಯವಸ್ಥೆ ಮತ್ತು ತತ್ತ್ವಜ್ಞಾನಗಳು ವಿಕಾಸಗೊಳ್ಳುತ್ತ ಬಂದಿವೆ. ಇವುಗಳ ಸಂಗಡವೇ ಜಿಜ್ಞಾಸಾ ಕ್ರಿಯೆಯೂ ಅಷ್ಟೇ ಸಮರ್ಥವಾಗಿ ನಡೆದು, ಈ ತತ್ತ್ವಜ್ಞಾನವು ಮತ್ತೂ ಸೂಕ್ಷ್ಮಾತಿಸೂಕ್ಷ್ಮ ಹಂಥದಲ್ಲಿ ವಿಶ್ಲೇಷಣೆಗಳನ್ನೂ ರೂಪಿಸಿತು. ಈ ಸುಸಂಬದ್ಧವಾದ,

ಅದಕ್ಕಿಂತ ಹೆಚ್ಚು ನೈಸರ್ಗಿಕವೆಂದೇ ಆರಾಧಿಸಿ ಅನುಷ್ಠಾನಗೊಳಿಸಿಕೊಂಡಿದ್ದ ಭಾರತೀಯ ಅಭಿವ್ಯಕ್ತಿಯ ವ್ಯಾಪ್ತಿಯನ್ನು ಒಪ್ಪಿಕೊಳ್ಳಲು ಸಿದ್ಧವಿರದ ಪಾಶ್ಚಾತ್ಯ ವಲಯ, ತನಗೆ ಬೇಕಾದ ರೀತಿಯಲ್ಲಿ ಊಹೆಗಳನ್ನು ರೂಪಿಸುತ್ತ, ಅದನ್ನೇ ಆಡಳಿತದ ವ್ಯಾಪ್ತಿಯ ಮೂಲಕ ಹೇರುತ್ತ ಬಂದದ್ದನ್ನು ಕಾಣುತ್ತೇವೆ.

3) **'ವೇದ':** ಜೀವನಾನುಭವವು ನಿಸರ್ಗದೊಂದಿಗೇ ತಾದಾತ್ಮ್ಯತೆಯನ್ನು ಹೊಂದಿ, ಅದರ ವಿಕಾಸದ ನಿಯತಿಯನ್ನು ಮತ್ತು ಅದರ ಗತಿಗಮನವನ್ನು ಅರಿತುಕೊಂಡು ಸ್ಪಂದಿಸುತ್ತಾ, ಅನುಭಾವಗೊಳಿಸಿಕೊಂಡು ಹೊರಹೊಮ್ಮಿದ ಸಹಜ ಅಭಿವ್ಯಕ್ತಿಗಳು, ಯಾವಾಗಲೂ ನಾದದೊಂದಿಗೇ ಸ್ಪಂದಿಸುತ್ತಿದ್ದು, ವಿಶ್ವಸತ್ಯವನ್ನೇ ಸಾಕಾರಗೊಳಿಸತ್ತಾ ಇರುತ್ತವೆ.

4) **ಸಾಯಣಾಚಾರ್ಯರಿಂದ ರೂಪಿತಗೊಂಡಿರಬಹುದಾದ:** 15–16ನೇ ಶತಮಾನವು ಕೇವಲ ಭಾರತವನ್ನು ಮಾತ್ರವಲ್ಲ, ಇಡೀ ಜಗತ್ತನ್ನೇ ರೂಪಾಂತರಗೊಳಿಸಿದ ಅವಧಿಯಾಗಿದೆ. ದಕ್ಷಿಣ ಭಾರತದಲ್ಲಿ ಸಾಯಣಾಚಾರ್ಯರ ಪ್ರತಿಪಾದನೆಯಲ್ಲಿ ರೂಪಣೆಗೊಂಡ "ಭಕ್ತಿ ಪಂಥ"ವು 'ದಾಸ ಪಂಥ'ವಾಯಿತು; ಪೂರ್ವ ಭಾರತದಲ್ಲಿ (ಬಂಗಾಲ ಪ್ರಾಂತ) 'ಚೈತನ್ಯ ಪಂಥ'; ಪಂಜಾಬ ಪ್ರದೇಶದಲ್ಲಿ 'ಸಿಖ್' ಸಂಪ್ರದಾಯ; ಗುಜರಾತ ಪ್ರದೇಶದಲ್ಲಿ 'ಕೃಷ್ಣ ಪಂಥ', ಇವೆಲ್ಲವೂ ಆಯಾ ಕಾಲದ ಸಾಮಾಜಿಕ ತಲ್ಲಣಗಳಿಗೆ ಪರಿಹಾರ ರೂಪಿಸುವ ಉದ್ದೇಶವನ್ನು ಹೊಂದಿಯೇ ಉದಿತಗೊಂಡಿದ್ದವು. ಅದೇ ರೀತಿಯಲ್ಲಿ ಇಂಗ್ಲಂಡಿನಲ್ಲಿಯೂ ಸಹಿತ ಶೇಕ್ಸಪಿಯರ್‌ನ ಪ್ರಭಾವದ ಹಿನ್ನೆಲೆಗೂ ಈ ಸಾಮಾಜಿಕ ಸಾಂಸ್ಕೃತಿಕ ಅಘಾತಕಾರಿ ಆಕ್ರಮಣಗಳಿಂದ ಹೊರಬರುವ ಸಲುವಾಗಿ ರೂಪಿತ–ಗೊಂಡಿರುವ ಚಿಂತನಗಳು. ಆದರೆ ಭಾರತದಲ್ಲಿ ಸಾಯಣಾಚಾರ್ಯರಿಂದ ನಿರೂಪಿತವಾಗಿರುವ ವಿಷಯವನ್ನೇ ಅಂತಿಮ ಎಂದು ವಾತಾವರಣ ನಿರ್ಮಾಣಗೊಳ್ಳತೊಡಗಿತು. ಈ ಮಧ್ಯದಲ್ಲಿ ಆಂಗ್ಲ ಭಾಷಾ ವ್ಯವಸ್ಥೆಯ ಶಿಕ್ಷಣದ ಗುಪ್ತ ಹುನ್ನಾರೂ ಸಹಿತ ಇಂತಹ ಗೊಂದಲಗಳನ್ನು ಉದ್ದೇಶಪೂರ್ವಕವಾಗಿಯೇ ನೀರೆರೆಯುತ್ತಿತ್ತು. ಹೀಗಾಗಿ ಇಲ್ಲಿ ಶ್ರೀ ಅರವಿಂದರು 'ಸಾಯಣರಿಂದ ರೂಪಿತವಾದ ಎಂದು ಬಳಸಿಲ್ಲ, 'ರೂಪಿತಗೊಂಡಿಬಹುದಾದ' ಎಂದು ಹೇಳಿ, ಸಾಯಣರು ಯಾವ

ವಿಷಯಗಳನ್ನು – ಆ ಕಾಲಕ್ಕೆ ಸೂಕ್ತವಲ್ಲವೆಂದು ಬಿಟ್ಟಿದ್ದರೋ – ಪ್ರಸ್ತುತ ಪಡಿಸಿ, ವೇದಕ್ಕೆ ಇರುವ ಜ್ಞಾನಕಾಂಡದ ಗೂಡಾರ್ಥಗಳನ್ನು ಅರಿತುಕೊಳ್ಳುವ ಸೂತ್ರಗಳನ್ನು ನೀಡಿದ್ದಾರೆ.

5) **ಪ್ರಚಂಡ(ಕೊಲೋಜಲ್) ಉದಾತ್ತ(ಸಬ್ಲೈಮ್) ಕ್ರಿಯೆ:** ಈ ರೀತಿಯಾಗಿ ಅದನ್ನು ಉದಾತ್ತೀಕರಣಗೊಳಿಸಿಯೋ ಅಥವಾ ಭವ್ಯತೆಯ ಆವರಣದಲ್ಲಿ ಇರಿಸಿಯೋ ವಿಜೃಂಭಿಸುವ ಕ್ರಿಯೆಯು ಮುಂದುವರೆಯಿತು. ಈ ರೀತಿಯ ಸ್ಥಿತಿಗೆ ಕಾರಣವಾದುದು, ಭಕ್ತಿ ಪಂಥದ ಆಕರ್ಷಣೆಯೋ ಅಥವಾ ಸಮಾಜ ಇನ್ನೂ ತನ್ನನ್ನು ತಾನು ಅರಿತುಕೊಳ್ಳುವ ಹಂತವನ್ನು ತಲುಪಿರಲಿಲ್ಲವೋ ಎನ್ನುವದು ಒಂದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಸಂಸ್ಕೃತಿಯ ಒಂದೇ ಆಯಾಮವು ಮಾತ್ರ ವಿಜೃಂಭಣೆಗೊಳ್ಳುವದು ಎಂದರೆ ಪ್ರತಿಕ್ರಿಯಾತ್ಮಕವಾಗಿ ಸ್ಪಂದಿಸಬೇಕಾಗಿದ್ದ (ಸ್ಪಂದಿಬೇಕಾಗಿರುವ) ತಂತುಗಳು ಇನ್ನೂ ಸಿದ್ಧಗೊಂಡಿಲ್ಲವೋ ಅಥವಾ ಸ್ಪಂದಿಸದಂತೆ ಅದುಮಿಡಲ್ಪಟ್ಟಿದ್ದವೋ ಎನ್ನುವದನ್ನು ಅವಲಂಬಿಸಿರುತ್ತದೆ. 15ನೇ ಶತಮಾನದ ನಂತರ ಭಾರತವು ಚಿಂತನಾ ವಿಧಾನದಲ್ಲಿ ತನ್ನದೇ ಅಸ್ಮಿತೆಯನ್ನು ಕಳೆದುಕೊಂಡೇ ಬದುಕಿನ ನಾಟಕ ನಡೆಸತೊಡಗಿತು. ಸಾಂಸ್ಕೃತಿಕ ಬೇರುಗಳನ್ನು ಕತ್ತರಿಸುವದನ್ನೇ ತಮ್ಮ ವಿಸ್ತಾರವೆಂದುಕೊಂಡು ಮುನ್ನುಗ್ಗುವ ಯಾವುದೇ ಅನ್ಯ ಚಿಂತನಾ ವಿಧಾನಗಳು, ಈ ವ್ಯವಸ್ಥೆಯನ್ನೇ ಶತಾಯಗತಾಯ ನಡೆಸುತ್ತವೆ. ಅದರಲ್ಲೂ ಪೀಳಿಗೆ ಪೀಳಿಗೆಗಳ ಮೇಲೆ ಪ್ರಭಾವ ಬೀರುವ ಹಾಗೆ ಶೈಕ್ಷಣೀಕ ವಲಯದಲ್ಲಿಯೇ ಈ ರೀತಿಯಲ್ಲಿ ಸಂಪೂರ್ಣ ವಿಚಲನೆಗೊಂಡ ಶಿಕ್ಷಣ ಪದ್ಧತಿಯನ್ನೇ ಹೇರಿಕೊಂಡೇ ಮುಂದುವರೆಸಲಾಯಿತು. ಆದರೆ ಇದೆಲ್ಲ ಹುನ್ನಾರವನ್ನು ಮುಚ್ಚಿಕೊಂಡಿರುವ ಹಾಗೆ ಭವ್ಯತೆಯ ಹೊರಕವಚದಲ್ಲಿ ಮರೆಸುತ್ತ ಬರಲಾಯಿತು.

6) **ಪ್ರಾಥಮಿಕ ಹಂತದ ಸ್ವರೂಪದಲ್ಲಿದ್ದವು:** ಪ್ರಕೃತಿ ಸಹಜವಾಗಿಯೇ ವಿಕಾಸದ ಸ್ಪಂದದಲ್ಲಿ ಪರಿಪೂರ್ಣತೆಯತ್ತ ಪಯಣಿಸುವ ಚಿಂತನಾ ವ್ಯವಸ್ಥೆಯು ಪ್ರಾರಂಭಿಕ ಹಂತದಲ್ಲಿದ್ದರೂ, ಅದು ಪ್ರಕೃತಿಯ ಒಂದಂಶವಾಗಿಯೇ ಇತ್ತು. ಮಾನವನ ಚಿಂತನಾ ಸ್ವರೂಪದಲ್ಲಿ ಯಾವುದೇ ಪ್ರತೀಕವೋ ಅಥವಾ ಚಿಹ್ನೆಯೋ ಇನ್ನೂ ಲಭ್ಯವಾಗಿರದ ಹಂತವಾಗಿತ್ತು. ಅದು ಪ್ರಕೃತಿಯೇ

ಆಗಿದ್ದುದರಿಂದ ಅದು ಪ್ರತಿಮಾತ್ಮಕವಾಗಿರುತ್ತದೆ ಎಂದು ಸ್ಪಂದಿಸುವ ಅದನ್ನು ಪರಂಪರೆಯಾಗಿಸುವ ಪ್ರಾರಂಭಿಕ ಹಂತವಾಗಿತ್ತು.

7) **"ಜ್ಞಾನದಿಂದ ಜ್ಞಾನಕ್ಕೆ":** ಚಿಂತನಾ ವಿಧಾನವು ಜ್ಞಾನದ ಕುರಿತು ಕುತೂಹಲದಿಂದಲೇ ಜನಿಸಿ, ಅದರಲ್ಲಿಯೇ ತನ್ಮಯವಾಗುವ ಒಂದು ವಿಧಾನ. ಹೀಗಾಗಿ ಇದನ್ನು ಜ್ಞಾನದಿಂದ ಜ್ಞಾನಕ್ಕೆ ಎನ್ನುವದು. ವಿಶ್ವಸತ್ಯವಾಗಿ ನಿರಕಾರವಾಗಿ ಶಾಶ್ವತವಾಗಿ ಮತ್ತು ಪ್ರಕೃತಿಯಾಗಿ ಇರುವ ಜ್ಞಾನವು, ರೂಪಧಾರಣಾ ವ್ಯವಸ್ಥೆಯಲ್ಲಿ, ಜೀವನಾನುಭವದ ಮೂಲಕ ಆಯಾಮಗಳನ್ನು ಸೃಷ್ಟಿಸಿಕೊಂಡು, ಅಭಿವ್ಯಕ್ತಿಗೊಂಡಾಗ ಆಕೃತಿಯಾಗಿಯೋ ಅಥವಾ ಪ್ರಕೃತಿಯ ಪ್ರತಿಸ್ಪಂದದ ಪ್ರತಿಮೆಯಾಗಿಯೋ ಸಾಕಾರಗೊಳ್ಳುತ್ತದೆ. ಈ ಪ್ರತಿಮೆ ಮುಂದಿನ ಪೀಳಿಗೆಗೆ, ವಿಶ್ವಸತ್ಯದ ಎಡೆಗೆ ಸಾಗಲು ಸೂತ್ರವಾಗುತ್ತದೆ.

**8) ಓರ್ಫಿಕ್(Orphic) ಎಲ್ಯುಷಿಯಸ್(Eleusinian):** ಗ್ರೀಕ್ ಸಂಸ್ಕೃತಿಯಲ್ಲಿರುವ ಗುಹ್ಯಜ್ಞಾನದ ವಿಷಯಗಳಲ್ಲಿ ಇದರ ವಿವರಗಳಿವೆ.

# ಶ್ರೀ ಅರವಿಂದರ

# 'ಗೀತಾ ಪ್ರಬಂಧಗಳು'

**– ಅನುವಾದ: ಜಾನ್ವಿ**

## 3

## ಅಧ್ಯಾಯ – 2

## ದೇವಗುರು

ವಿಶ್ವದ ಶ್ರೇಷ್ಠ ಧರ್ಮಗ್ರಂಥಗಳಲ್ಲಿ ಗೀತೆ ಒಂದು. ಇದರ ವಿಶೇಷತೆ ಏನೆಂದರೆ ಇದೊಂದು ಸ್ವತಂತ್ರ ಗ್ರಂಥವಲ್ಲ; ಏಸುಕ್ರಿಸ್ತ, ಮಹಮ್ಮದ, ಪೈಗಂಬರ, ಬುದ್ಧರಂಥ ಕ್ರಿಯಾಶೀಲ ಯುಗಪುರುಷ ಜೀವನಗಾಥೆಯೂ ಅಲ್ಲ; ವೇದ ಉಪನಿಷತ್ತುಗಳಂತೆ ಶುದ್ಧ ಆಧ್ಯಾತ್ಮಿಕ ಸಂಶೋಧನೆ, ಸಂವಹನ ಗ್ರಂಥವೂ ಅಲ್ಲ. ಬದಲಾಗಿ ಮಹಾಕಾವ್ಯವೊಂದರಲ್ಲಿ ಬರುವ ಸಣ್ಣ ಪ್ರಸಂಗ. ತತ್ಕಾಲೀನ ರಾಷ್ಟ್ರಗಳು, ಅವುಗಳ ರಾಜಕೀಯ ಹಿತಾಸಕ್ತಿ, ವಿದ್ವೇಷ, ಕಲಹ, ಕೊನೆಯ ಜಾಗತಿಕ ಮಹಾಸಮರದಲ್ಲಿ ಪರಿಸಮಾಪ್ತವಾಗುವ ಇತಿಹಾಸವನ್ನು ಮಹಾಭಾರತ ನಮ್ಮ ಕಣ್ಣ ಮುಂದೆ ಚಿತ್ರಿಸುತ್ತದೆ. ಅಂಥ ಒಂದು ಲಕ್ಷ ಶ್ಲೋಕಗಳ ಬೃಹತ್ ಕಾವ್ಯದಲ್ಲಿ ಗೀತೆಯು ಏಳು ನೂರು ಶ್ಲೋಕಗಳ ಒಂದು ಸಣ್ಣ ಉಪಾಖ್ಯಾನ ಮಾತ್ರ. ಅರ್ಜುನ ತತ್ಕಾಲೀನ ಅತ್ಯಂತ ಶ್ರೇಷ್ಠ ಧನುರ್ಧರ ಯೋದ್ಧಾಳು. ಮಹಾಭಾರತ ಯುದ್ಧದ ಆರಂಭದ ಘಟ್ಟದಲ್ಲಿ, ಅವನ ಅಂತರಂಗದಲ್ಲುಂಟಾದ ತಳಮಳದ ನಿಮಿತ್ತ, ಈ ಗೀತೆ ರಚಿತವಾಗಿದೆ. ಯುದ್ಧವೆಂದರೆ ಅಪಾತ ರಕ್ತಪಾತವೇ? ಇದು ವಿಹಿತವೇ? ತನ್ನ ಬದುಕಿನಲ್ಲೇ ಕಂಡೂ ಕೇಳರಿಯದಂಥ ಜಾಗತಿಕ ಸಮರಕ್ಕೆ ತಾನೂ ಕಾರಣವಾಗಬೇಕೆ? ಹಿಂಸೆ, ಕ್ರೌರ್ಯ ತಾಂಡವ ವಾಡುವ ಘನಘೋರ ಯುದ್ಧದಲ್ಲಿ ತಾನು ಭಾಗವಹಿಸಲೇಬೇಕೆ? ಆರಂಭದಲ್ಲೇ ಹಿಂದೆ ಸರಿದು, ಯುದ್ಧ ನಿವೃತ್ತಿ ಘೋಷಿಸಿ ಬಿಟ್ಟರೆ ಹೇಗೆ? ಅರ್ಜುನ ಮನದಲ್ಲಿ ಕಿಂಕರ್ತವ್ಯ ಭಾವ ಕಾಡತೊಡಗಿತು. ಆಗ ಮೂಡಿ ಬಂದುದೇ ಈ ಭಗವದ್ಗೀತೆ. ಕೆಲ ಟೀಕಾಕಾರ ಅಭಿಪ್ರಾಯದಂತೆ ಗೀತೆಯು ಪ್ರಕ್ಷಿಪ್ತ; ಯಾರೋ ಬರೆದು ಮಹಾಭಾರತದಲ್ಲಿ ಸೇರಿಸಿದ್ದಾರೆ ಎಂಬುದು ಅವರ ವಾದ – ಈ ವಾದವು ನಿಜವೋ ಅಲ್ಲವೋ ಎಂಬುದು ನಗಣ್ಯ ಎಂದು ಶ್ರೀ ಅರವಿಂದರು ಹೇಳುತ್ತಾರೆ. ಆದರೂ ತಾವು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ, ಒಪ್ಪದಿರುವುದಕ್ಕೆ ಅನೇಕ

ಪ್ರಬಲ ಸಾಕ್ಷ್ಯಾಧಾರಗಳನ್ನು ಕೊಡಬಹುದು ಎಂದು ಅವರು ಹೇಳುತ್ತಾರೆ. ಗೀತೆಯು ಪ್ರಕ್ಷಿಪ್ತವೇ ಎಂದು ಹೇಳುವ ಸಾಕ್ಷ್ಯಾಧಾರಗಳು ದುರ್ಬಲ ಅಲ್ಲ ಎಂದು ಒಪ್ಪಿದರೂ ಸಹ ಒಂದು ಮಾತನ್ನು ಗಮನಿಸಲೇಬೇಕಾಗುತ್ತದೆ. ಮಹಾಭಾರತದಲ್ಲಿ ಗೀತೆಯನ್ನು ಸೇರಿಸಿದ ಕವಿಯು ಮಾತ್ರ ಅತಿ ಚಾಣಾಕ್ಷನಿರಬೇಕು, ಏಕೆಂದರೆ ಅದನ್ನು ಮಹಾಕಾವ್ಯದ ನೇಯ್ಗೆಯಲ್ಲಿ ತುಸು ಕೂಡ ವ್ಯತ್ಯಾಸವಾಗದಂತೆ ಏಕರೂಪಗೊಳಿಸಿದ್ದಾನೆ. ಗೀತೆಯು ಎಂಥ ಪ್ರಸಂಗದಲ್ಲಿ ಮೂಡಿಬಂದಿತು ಎಂಬುದನ್ನು ಮೇಲಿಂದ ಮೇಲೆ ಓದುಗರಿಗೆ ನೆನಪಿಸಿ ಕೊಡುತ್ತಾನೆ. ಗೀತೆಯ ಕೊನೆಗೆ ಮಾತ್ರ ಅಲ್ಲ, ಗಂಭೀರ, ಗಾನ ತಾತ್ವಿಕ ಚರ್ಚೆಯ ನಡುವೆ ಕೂಡ ಅಲ್ಲಲ್ಲಿ ಸಂದರ್ಭವನ್ನು ನೆನಪಿಸುತ್ತಾನೆ. ಈ ಸಂಗತಿಯನ್ನು ನಾವು ಕಡೆಗಣಿಸುವಂತಿಲ್ಲ. ಗುರುಶಿಷ್ಯರ ಸಂವಾದದಲ್ಲಿ ಇಬ್ಬರೂ ಆಗಾಗ ಈ ಸಂಗತಿಯನ್ನು ನೆನಪಿಸಿಕೊಳ್ಳುವುದು ಅತ್ಯಂತ ಗಮನಾರ್ಹ ಸಂಗತಿಯಾಗಿದೆ. ಆದ್ದರಿಂದ ಗೀತೆಯನ್ನು ಕೇವಲ ಒಂದು ಸಾಮಾನ್ಯ ಆಧ್ಯಾತ್ಮಿಕ ಹಾಗೂ ನೈತಿಕ ಕೃತಿ ಎಂದು ತಿಳಿಯುವಂತಿಲ್ಲ. ನೀತಿ ಶಾಸ್ತ್ರ ಮತ್ತು ಆಧ್ಯಾತ್ಮಿಕತೆ ಎರಡನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವಾಗ ಎದುರಾಗುವ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದೆಂಬ ವಿಷಯವೇ ಗೀತೆಯಲ್ಲಿ ಹೆಚ್ಚಾಗಿ ಚರ್ಚಿತವಾಗಿದೆ. ಆ ಸಮಸ್ಯೆಗಳು ಯಾವುವು? ಅವುಗಳ ಸ್ವರೂಪವೇನು? ಕುರುಕ್ಷೇತ್ರದ ಯುದ್ಧದ ಮರ್ಮವೇನು? ಅರ್ಜುನನ ಅಂತರಂಗದ ಮೇಲೆ ಈ ಯುದ್ಧದ ಪರಿಣಾಮವೇನು? ಇವನ್ನು ಮೊದಲು ಚೆನ್ನಾಗಿ ಅರಿತ ಮೇಲಷ್ಟೇ ಗೀತೆಯ ವಿಚಾರಧಾರೆ ಸ್ಪಷ್ಟವಾಗಿ ತಿಳಿಯಲು ಸಾಧ್ಯ.

ಯುದ್ಧದಂಥ ಒಂದು ಸಾಮಾನ್ಯ (ಅದು ಸಾಮಾನ್ಯ ಸಂಗತಿಯೇ, ಆಕಾಶದಲ್ಲಂತೂ ಸಣ್ಣ ಪುಟ್ಟ ರಾಷ್ಟ್ರಗಳ ನಡುವೆ ನಿರಂತರ ಸಂಘರ್ಷವೇ ಇದ್ದೇ ಇರುತ್ತಿತ್ತು) ಘಟನೆಯ ಮೇಲೆ ಗೀತೆಯಂಥ ಭವ್ಯ ಸೌಧವನ್ನು ಕಟ್ಟಲು ಸಾಧ್ಯವಿಲ್ಲ. ಸಾಮಾನ್ಯ ಸಂಗತಿಗಳಿಗೆ, ದೈನಂದಿನ ಸಾಮಾನ್ಯ ಆಚಾರ ವಿಚಾರಗಳ ನೈತಿಕ ಬೋಧನೆ ಸಾಕು. ಆಧ್ಯಾತ್ಮಿಕ ಜೀವನ ಹಾಗೂ ಸಾಮಾನ್ಯ ಜೀವನಗಳ ನಡುವಣ ಘನಿಷ್ಠ ಸಂಬಂಧ, ಈ ಸಂಬಂಧದ ನಿರ್ವಹಣೆ ಮತ್ತು ಅದರ ಸಮಸ್ಯೆ ಇವುಗಳಿಗೆ ಸಾಮಾನ್ಯ ವೈಚಾರಿಕ ಆದರ್ಶಗಳ ಪರಿಹಾರ ನೀಡಲಾಗದು. ಈ ದೃಷ್ಟಿಯಿಂದ ಗೀತೆಯಲ್ಲಿ ಮೂರು ಮಹತ್ವದ ವಿಷಯಗಳನ್ನು ಕಾಣುತ್ತೇವೆ. ಮಾನವನ ರೂಪದಲ್ಲಿ ಅವತರಿಸಿದ ಭಗವಂತನೇ ಗುರುವಾಗಿ ಮುನ್ನಡೆಸುತ್ತಾನೆ;

ಶಿಷ್ಯನು – ಆಧುನಿಕ ಭಾಷೆಯಲ್ಲಿ ಹೇಳುವುದಾದರೆ ತತ್ಕಾಲೀನ ಯುಗದ ಪ್ರತಿನಿಧಿಯಾದ – ಅರ್ಜುನನು ಅವತಾರ ಪುರುಷನ ಆಪ್ತ ಸಖ, ಭಗವಂತನು ರಹಸ್ಯವಾಗಿ ಆಯೋಜಿಸಿದ ಕಾರ್ಯದಲ್ಲಿ ಆಯ್ದ ಉಪಕರಣ. ಅವನು ಮಹಾನ್ ಸಂಘರ್ಷದ ನಾಯಕನಾಗಿದ್ದರೂ ಅದರ ಉದ್ದೇಶ, ಮರ್ಮ, ಪ್ರಯೋಜನ ಅವನಿಗೆ ತಿಳಿಯದು. ಮಾನವ ಸ್ವರೂಪದ ಭಗವಂತನಿಗೆ ಮಾತ್ರ ಅದು ಗೊತ್ತು. ಆ ಸಂಘರ್ಷವನ್ನು ಅವತಾರ ಪುರುಷನು ತನ್ನ ಸಂಕಲ್ಪಕ್ಕೆ ತಕ್ಕಂತೆ ತಿರುಗಿಸಿಕೊಂಡು, ತನ್ನ ಜ್ಞಾನ, ಬುದ್ಧಿಗಳಿಂದ ಪರದೆಯ ಹಿಂದೆ ನಿಂತು ಎಲ್ಲವನ್ನೂ ನಿರ್ವಹಿಸುತ್ತ ನಿರ್ದೇಶಿಸುತ್ತ ಹೊರಟಿದ್ದಾನೆ. ಆದರೆ ಮಾನವನಾದ ಯುಗ ಪ್ರತಿನಿಧಿ ಅರ್ಜುನನಿಗೆ ಅದರ ಸುಳಿವೂ ಕೂಡ ಇಲ್ಲ. ಗೀತೆಯಲ್ಲಿನ ಗುರು ಶಿಷ್ಯರು ಹೀಗಿದ್ದಾರೆ. ಗುರೂಪದೇಶದ ಪ್ರಸಂಗ ಇಷ್ಟು ವಿಚಿತ್ರವಾಗಿದೆ. ಈ ಸಂಘರ್ಷ ಬೆಳೆಯುತ್ತ ಬೆಳೆಯುತ್ತ ದಾರುಣ ಹತ್ಯಾಕಾಂಡದ ರೂಪ ತಾಳಿದೆ, ಅರ್ಜುನನನ್ನು ಪರೀಕ್ಷೆಯ ಕೊನೆಯ ಗಳಿಗೆಯಲ್ಲಿ ತಂದು ನಿಲ್ಲಿಸಿದೆ. ಆಗಬಹುದಾದ ದುಃಖ, ಹತ್ಯೆಯ ಹಿಂದಿರುವ ವಿಚಾರಧಾರೆ, ಅನೈತಿಕತೆಗಳು ಅವನ ಮನದಲ್ಲಿ ತಳಮಳವನ್ನುಂಟು ಮಾಡಿ, ಒಂದು ವಿಲಕ್ಷಣ ಸಾಕ್ಷಾತ್ಕಾರದ ಅಚ್ಚರಿಯು ಏನು? ಮಾನವನ ಜೀವನದ ಅರ್ಥವೇನು? ಮಾನವನ ಜೀವನ ಯಾರಿಂದ ಪ್ರೇರಿತವಾಗಿದೆ? ಇದೆಲ್ಲ ಯಾವ ಕಡೆಗೆ ಹೊರಟಿದೆ? ಇದರ ಪರಿಣಾಮ ಏನು? ಮುಂತಾದ ಪ್ರಶ್ನೆಗಳು ಅರ್ಜುನನ ಮನದಲ್ಲಿ ಏಳುತ್ತಿವೆ. ಗೀತೆಯ ಗುರೂಪದೇಶದ ಸಂದರ್ಭ ಇಂಥದು.

ಅತಿ ಪ್ರಾಚೀನ ಕಾಲದಿಂದಲೂ ಅವತಾರದ ಸತ್ಯತೆಯ ಮೇಲೆ ಭಾರತೀಯರಿಗೆ ಶ್ರದ್ಧೆ ಇದೆ. ಅವತಾರ ಅಂದರೆ ಸ್ವತಃ ಈಶ್ವರನು ಭೂಮಿಯ ಜೀವನದಲ್ಲಿ ಸಾಕಾರನಾಗಿ ಇಳಿದು ಬರುವುದು. ಅವತರಣ. ಈಶ್ವರನು ಮನುಷ್ಯನ ಆಕಾರದಲ್ಲಿ ಭೂಮಿಯ ಮೇಲೆ ಬರುವುದು. ಪಾಶ್ಚಾತ್ಯದಲ್ಲಿ ಅವತಾರದ ಕಲ್ಪನೆ, ಅವತಾರ ವಿಷಯದಲ್ಲಿ ಶ್ರದ್ಧೆ ಯಾವತ್ತಿಗೂ ಆಳವಾಗಿ ಬೇರೂರಿಲ್ಲ. ಪ್ರಚಲಿತ ಕ್ರಿಸ್ತ ಪಂಥದಲ್ಲಿ ಅವತಾರದ ಕಲ್ಪನೆಗೆ ಒಂದು ಧಾರ್ಮಿಕ ರೂಪವನ್ನೇನೂ ಕೊಡಲಾಗಿದೆಯಾದರೂ ಜನಮಾನಸದಲ್ಲಿ ಅದು ಶ್ರದ್ಧೆಯ ರೂಪದಲ್ಲಿ ಮೂಡಿ ಬಂದಿಲ್ಲ. ಆದರೆ ನಮ್ಮ ಜೀವನದಲ್ಲಿಯೇ ವೇದಾಂತದ ದೃಷ್ಟಿಕೋನವಿರುವುದರಿಂದ, ಈ ತತ್ವಕ್ಕೆ ತರ್ಕಬದ್ಧ ನೆಲೆಗಟ್ಟು ದೊರೆತು ಅದು

ಇನ್ನಷ್ಟು ಆಳವಾಗಿ ಬೇರೂರಿದೆ. ವೇದಾಂತದ ದೃಷ್ಟಿ ಮೂಲತಃ ಹೀಗೆದೆ: ಈಶ್ವರನೊಬ್ಬನೇ ಏಕಮೇವ ಮೂಲ ಸತ್ ಅಥವಾ ಅಸ್ತಿತ್ವ, ಅರ್ಥಾತ್ ಅಸ್ತಿತ್ವದಲ್ಲಿರುವ ಎಲ್ಲವೂ ಈಶ್ವರನ ಅಭಿವ್ಯಕ್ತಿಗಳೇ. ಈ ಅಭಿವ್ಯಕ್ತಿಯು ಈಶ್ವರನಷ್ಟೇ ಸತ್ಯವಾಗಿರಬಹುದು, ಅಥವಾ ಅಭಾಸವಾಗಿರಬಹುದು. ಎಲ್ಲವೂ ಈಶ್ವರನೇ. ಅನಂತನಾದ ಈಶ್ವರನೇ ಅನಂತ ಭಿನ್ನ ಭಿನ್ನ ರೂಪ ಆಕಾರಗಳಲ್ಲಿ ಪ್ರಕಟನಾಗಿದ್ದಾನೆ. ಆದರೆ ಎಲ್ಲದರಲ್ಲೂ ಅವನ ಪ್ರಕಟನೆ ಸಂಪೂರ್ಣವಾಗಿ ಒಂದೆಡೆ, ಸಾಂತದಲ್ಲಿ ಜೀವಿಯ ಅಜ್ಞಾನದ ಮೂಲಕ ಗುಪ್ತವಾಗಿರುವ ಚೇತನ ಇನ್ನೊಂದೆಡೆ. ಇವುಗಳ ನಡುವೆ ಅನೇಕ ಮೆಟ್ಟಿಲುಗಳಿವೆ. ದೇಶಿಯು (ಮಾನವನು) ಅಜ್ಞಾನದಿಂದ ಹೊರಬರುತ್ತ ನಿಧಾನವಾಗಿ ಆತ್ಮಜ್ಞಾನದೆಡೆಗೆ ಸಾಗುತ್ತಾನೆ. ಈಶ್ವರನೂ ತನ್ನ ದಿವ್ಯತ್ವದ ರೂಪ ಪ್ರಮಾಣಗಳಿಂದ ತನ್ನ ಜ್ಞಾನ, ಪ್ರೇಮ, ಆನಂದ ವಿಭೂತಿಗಳ ಮೂಲಕ ತನ್ನ ಶಕ್ತಿ, ಸಾಮರ್ಥ್ಯಗಳನ್ನು ಪ್ರಕಟಪಡಿಸುತ್ತಾನೆ. ಆದರೆ ಚಿತ್‌ಶಕ್ತಿ ತಾನೇ ಮಾನವನ ರೂಪದಲ್ಲಿಳಿದು ಬಂದು ತನ್ನ ಸಂಪೂರ್ಣ ಜ್ಞಾನ, ಶಕ್ತಿ, ಪ್ರೇಮಗಳನ್ನು ಧಾರಣ ಮಾಡಿದಾಗ ಅವನನ್ನು ಪೂರ್ಣರೂಪದ ಅವತಾರವೆಂದು ತಿಳಿಯಲಾಗದು.

ವೇದಾಂತದ ವೈಷ್ಣವ ಪಂಥವು ಈ ಅವತಾರದ ಕಲ್ಪನೆಗೆ ಅತಿ ಮಹತ್ವ ನೀಡಿತು. ಮಾನವನಲ್ಲಿ ಭಗವಂತ, ಭಗವಂತನಲ್ಲಿ ಮಾನವ ಈ ಸಂಬಂಧವನ್ನು ನರನಾರಾಯಣ ಜೋಡಿಯ ಮೂಲಕ ಸ್ಪಷ್ಟವಾಗಿ ತಿಳಿಸಿಕೊಟ್ಟಿತು. ವೈಷ್ಣವ ಪಂಥದ ಬೋಧನೆಯು ಸಂಪೂರ್ಣವಾಗಿ ಗೀತೆಯ ಬೋಧನೆಯನ್ನೇ ತನ್ನದಾಗಿಸಿಕೊಂಡಿದೆ. ನರ ಅಂದರೆ ಮಾನವ ಅಥವಾ ಮಾನವನ ಆತ್ಮ, ನಾರಾಯಣ ಅಂದರೆ ಪ್ರತ್ಯಕ್ಷ ಪರಮಾತ್ಮನೇ! ಗೀತೆಯಲ್ಲಿ ನರನು ನಾರಾಯಣನ ಆಪ್ತ ಸಖನೇ, ಪರಮ ಮಿತ್ರನೇ! ಆದರೆ ನರನಿಗೆ ತಾನು ನಾರಾಯಣನ ಸ್ನೇಹಿತನೆಂಬ ಅರಿವು ಇಲ್ಲ. ನರನಲ್ಲಿ ಈ ಸಂಬಂಧದ ಅರಿವು ಮೂಡಿತೆಂದರೆ – ಗೀತೆಯ ಭಾಷೆಯಲ್ಲಿ ಹೇಳುವುದಾದರೆ – ನರನು ನಾರಾಯಣನಲ್ಲಿಯೇ ಜೀವಿಸಲು ಆರಂಭ ಮಾಡುತ್ತಾನೆ. ನಾರಾಯಣನಾದರೂ ಗುಪ್ತ ಮಾರ್ಗದರ್ಶಕನಾಗಿ ನಿಂತು, ಸಹಾಯಕನಾಗಿ ನಿಂತು ನರನನ್ನು ಮುನ್ನಡೆಸುತ್ತಾನೆ. 'ಈಶ್ವರ: ಸರ್ವಭೂತಾನಾಹೃದ್ದೇಶೇ ತಿಷ್ಠತಿ(18.61)' ಅನ್ನುವಂತೆ ಭಗವಂತನು ಸಕಲ ಜೀವರಾಶಿಗಳ ಹೃದಯದಲ್ಲಿ ಸ್ಥಿತನಾಗಿದ್ದಾನೆ, ನಿಜ, ಆದರೆ ಅಜ್ಞಾನದ ಪರದೆ ಸರಿದು, ಈ ಭಾವ ಸ್ಪಷ್ಟವಾಗಿ ಅರಳಿ,

ಪರಮಾತ್ಮನ ದರ್ಶನವಾಗುತ್ತದೆ, ಪರಮಾತ್ಮನ ವಾಣಿ ಕೇಳಿಸುತ್ತದೆ, ಪರಮಾತ್ಮನ ದಿವ್ಯ ಬೆಳಕು ಕಾಣುತ್ತದೆ, ಅವನ ಅನಂತ ಶಕ್ತಿಯ ಪರಿಚಯವಾಗುತ್ತದೆ. ಆಗ ದೇಹಿಯು–ದೇಹಧಾರಿಯಾಗಿ ಬಂದ ಮಾನವನ ಆತ್ಮವು ಉದ್ಧಾರಗೊಂಡು ಭಗವಂತನ ಶಾಶ್ವತ ರೂಪದಲ್ಲಿ ಸಮಾಹಿತವಾಗಿ ಜೀವಿಸುತ್ತಾನೆ. ಭಗವಂತನಲ್ಲಿಯೇ ನೆಲೆನಿಂತು, ತನ್ನ ಚೇತನವನ್ನು ಭಗವಂತನ ಅಖಂಡ ಚೇತನದಲ್ಲಿ ವಿಲೀನಗೊಳಿಸುತ್ತಾನೆ. ಇದನ್ನು ಗೀತೆಯ "ಉತ್ತಮ ರಹಸ್ಯ" ಎಂದು ಹೇಳುತ್ತದೆ. ಪ್ರತಿ ಮಾನವನಲ್ಲೂ ಸದಾ ನಿರ್ವಹಿಸುವ ಅಥವಾ ಪ್ರತಿಷ್ಠಿತವಾಗಿರುವ ದೈವೀ ಚೇತನವು (ನಾರಾಯಣ ಚೇತನವು) ಮಾನವನ ಚೇತನವನ್ನು (ನರನ ಚೇತನವನ್ನು) ಸಂಪೂರ್ಣವಾಗಿ ಅಥವಾ ಭಾಗಶಃ ತನ್ನ ವಶಕ್ಕೆ ತೆಗೆದುಕೊಂಡಾಗ ಅವನೇ ಮಾರ್ಗದರ್ಶಕನೂ, ಬೋಧಕ ಗುರುವೂ, ಜಗನ್ನಾಯಕನೂ ಆಗಿ ಕಾಣಿಸಿಕೊಳ್ಳುತ್ತಾನೆ. ಅವನು ಸಾಮಾನ್ಯ ಪ್ರಜ್ಞೆಯಲ್ಲಿಯೇ ಜೀವಿಸುತ್ತ ಆಗಾಗ ಕೆಲವಂಶದಲ್ಲಿ ದೈವೀ ಜ್ಞಾನದ ಆನಂದದ ಪರಾಕಾಷ್ಠತೆಯನ್ನು ಅನುಭವಿಸುತ್ತಾನೆ. (ಚೈತನ್ಯ ಮಹಾ ಪ್ರಭುವಿನ ಹೆಸರಲ್ಲೇ ಒಂದು ಪಂಥ ಬೆಳೆದು ಬಂದಿರುವುದು ಎಲ್ಲರಿಗೂ ಗೊತ್ತಿದೆ; ಆ ಚೈತನ್ಯ ಮಹಾ ಪ್ರಭುವಿನಲ್ಲಿ ಪರಮಾತ್ಮನ ದಿವ್ಯ ಶಕ್ತಿ, ಆನಂದ, ಚೈತನ್ಯ ಆಗಾಗ ಇಳಿದು ಬಂದು ಪರವಶಗೊಳಿಸಿಬಿಡುತ್ತಿತ್ತೆಂಬುದು ಜನಜನಿತವಾಗಿದೆ) ಆದರೆ ದೈವೀ ಚೇತನವು ಸಂಪೂರ್ಣ ಶಕ್ತಿ, ಸಾಮರ್ಥ್ಯಗಳನ್ನು ಪೂರ್ಣರೂಪದಿಂದ ತೆಗೆದುಕೊಂಡು ಮಾನವನ ರೂಪದಲ್ಲಿ ಬಂದಾಗ ಅದನ್ನು ಪೂರ್ಣ ಅವತಾರ ಎಂದು ಕರೆಯುತ್ತಾರೆ. ಮಾನಸಿಕ ಅಂತರಂಗದಲ್ಲಿರುವ ದೈವತ್ವವು ನಿಜವಾಗಿಯೂ ಅವನಲ್ಲಿರುವ ಅವತಾರವೇ; ಮಾನವನಲ್ಲಿ ಶಾಂತವಾಗಿ ಪ್ರಕಟವಾಗುವುದೇ ಅದರ ಲಕ್ಷಣ. ಬಾಹ್ಯ ಜಗತ್ತಿನಲ್ಲಿ ಅದರ ಬೆಳವಣಿಗೆಯ ಚಿಹ್ನೆ ಅಂದರೆ ಮಾನವನ ಪ್ರಜ್ಞೆಯ ವಿಕಸನವೇ ಆಗಿದೆ.

ಅವತಾರ ಕಲ್ಪನೆಯನ್ನು ನಾವು ಈ ರೀತಿ ಚೆನ್ನಾಗಿ ಮಾಡಿಕೊಂಡೆವೆಂದರೆ, ಗೀತೆಯ ಮೌಲಿಕ ದೃಷ್ಟಿಯಿಂದ ಯಾವುದು ಮಹತ್ವದ್ದು, ಸಾಮಾನ್ಯತಃ ಆಧ್ಯಾತ್ಮಿಕ ಜೀವನದ ದೃಷ್ಟಿಯಿಂದ ಯಾವುದು ಮಹತ್ವದ್ದು, ಅವತಾರದ ಬಾಹ್ಯ ಸ್ವರೂಪ, ಎಷ್ಟು ಮಹತ್ವದ್ದೆಂಬುದು ತಿಳಿದುಬರುವುದು. ಕ್ರಿಸ್ತನು ಐತಿಹಾಸಿಕ ವ್ಯಕ್ತಿಯೇ? ಎಂಬ ಪ್ರಶ್ನೆ ಇಡೀ ಯುರೋಪದ ತುಂಬೆಲ್ಲ ಚರ್ಚಿತವಾಗಿದೆ, ಆಗುತ್ತಲಿದೆ.

ಆದರೆ ಇಂಥ ಪ್ರಶ್ನೆಯು ಭಾರತೀಯರಿಗೆ ಸುಮ್ಮನೇ ಕಾಲಹರಣವೆಂದು ತೋರುತ್ತದೆ. ಇತಿಹಾಸದ ದೃಷ್ಟಿಯಿಂದ ಈ ಪ್ರಶ್ನೆಗೆ ಮಹತ್ವ ಇದ್ದಿರಬಹುದು, ಇದೆ ಅದು ಬೇರೆ ಮಾತು; ಆದರೆ ಧಾರ್ಮಿಕವಾಗಿ ಆ ವಿಷಯ ಮಹತ್ವದ್ದಲ್ಲವೆಂದೇ ಆಧ್ಯಾತ್ಮಿಕ ಭಾರತೀಯನ ಮನಸ್ಸು ಹೇಳುವುದು. ಜೋಸೆಫ್ ಎಂಬ ಬಡಗಿಗೆ ಕ್ರಿಸ್ತನೆಂಬ ಮಗನು ಹುಟ್ಟಿದ್ದನು, ನಝಾರತ್‌ನಲ್ಲೋ, ಬೆತ್ಲಹೇಮನಲ್ಲೋ ಎಲ್ಲೋ ಅವನ ಜನ್ಮವಾಯಿತು, ಅವನು ಧರ್ಮೋಪದೇಶ ಮಾಡಿದನು, ನಿಜವೋ, ಸುಳ್ಳೋ ಒಟ್ಟಿನಲ್ಲಿ ರಾಜದ್ರೋಹದ ಆಪಾದನೆಯ ಮೇರೆಗೆ ಅವನನ್ನು ಶಿಲುಬೆಗೇರಿಸಲಾಯಿತು – ಈ ಕಥೆ ಸಂಪೂರ್ಣ ಸುಳ್ಳು ಎಂದುಕೊಂಡರೂ ಏನಾಗುವುದು? ಆಧ್ಯಾತ್ಮಿಕ ಅನುಭವದಿಂದ ಅಂತರಂಗದಲ್ಲಿನ ಏಸುಕ್ರಿಸ್ತನನ್ನು ನಾವು ಮನ್ನಿಸುತ್ತೇವೆ; ಅವನು ನೀಡಿದ ಉಪದೇಶದಿಂದ ನಮ್ಮ ಬದುಕನ್ನು ಉನ್ನತೀಕರಿಸಿಕೊಳ್ಳುತ್ತೇವೆ; ಶಿಲುಬೆಯ ಮೇಲಿನ ಅವನ ಮರಣವನ್ನು ಪ್ರಾಯಶ್ಚಿತ್ತವೆಂದು, ಈಶ್ವರನ ಆತ್ಮ ಬಲಿದಾನ ರೂಪ ಅವನ ಮರಣವನ್ನು ಪ್ರಾಯಶ್ಚಿತ್ತವೆಂದು ನಾವು ಭಾವಿಸುತ್ತೇವೆ; ಅದು ಈಶ್ವರನನ್ನು ಸೇರುವ ದಾರಿ ಎಂದುಕೊಳ್ಳುತ್ತೇವೆ. ಇದರಿಂದ ಪ್ರಾಕೃತಿಕ ಹೀನ ಧರ್ಮದಿಂದ (ನಿಯಮಗಳಿಂದ) ಅದರ ಬಲೆಯಿಂದ ಮುಕ್ತರಾಗುತ್ತೇವೆ ಎಂದು ಭಾವಿಸುತ್ತೇವೆ. ಎಲ್ಲಿಯವರೆಗೆ ಈ ರೀತಿಯ ಮನೋಭಾವನೆಯ ಸ್ಥಿತಿ ಇರುವುದೋ ಅಲ್ಲಿಯವರೆಗೆ ಕ್ರಿಸ್ತನ ಕಥೆಯು ಸಂಪೂರ್ಣ ಸುಳ್ಳೇ ಆಗಿದ್ದರೂ ವ್ಯತ್ಯಾಸವೇನೂ ಆಗುವುದಿಲ್ಲ. ಕ್ರಿಸ್ತನು, ಮಾನವನಾಗಿ ಅವತರಿಸಿ ಬಂದ ಈಶ್ವರನೂ ನಮ್ಮ ಆಧ್ಯಾತ್ಮಿಕ ಸ್ವರೂಪದ ಅಂತರಂಗದಲ್ಲಿ ಎಲ್ಲಿಯವರೆಗೆ ವಾಸ ಮಾಡುವುನೋ ಅಲ್ಲಿಯವರೆಗೆ, ಮೇರಿಯ ಮಗನಾದ ಕ್ರಿಸ್ತನು ಜೂಡಿಯಾದಲ್ಲಿ ಹುಟ್ಟಿದನೂ, ಅಸಹ್ಯ ಯಾತನೆ ಅನುಭವಿಸಿ ಮರಣಿಸಿದನು ಎಂಬ ಕಥೆ ಸಂಪೂರ್ಣ ಸುಳ್ಳು ಅಂದರೂ ಸಹ ಯಾವ ವ್ಯತ್ಯಾಸವೂ ಆಗುವುದಿಲ್ಲ. ಇದು ಸ್ಪಷ್ಟವಿದೆ. ಏಸುಕ್ರಿಸ್ತನಂತೆಯೇ ಕೃಷ್ಣನ ಕಥೆ ಕೂಡ; ಇತಿಹಾಸದಲ್ಲಿನ ಕೃಷ್ಣ, ಲೋಕಗುರು ಮತ್ತು ಲೋಕ ನೇತಾರ ಕೃಷ್ಣ ನಮಗೆ ಮಹತ್ವ ಅಲ್ಲ; ಮಾನವನದಲ್ಲಿ ಈಶ್ವರನ ನಿತ್ಯಾವತಾರನಾದ ಕೃಷ್ಣ ನಮಗೆ ಮಹತ್ವವಾಗಿದ್ದಾನೆ.

ಗೀತೆಯ ಉಪದೇಶದ ತಿರುಳು ಏನು ಅನ್ನುವುದನ್ನು ಶೋಧಿಸಿದಾಗ, ಮಹಾಭಾರತದ ಯುದ್ಧದಲ್ಲಿ ಅರ್ಜುನನಿಗೆ ಉಪದೇಶ ಮಾಡಿದ ಕೃಷ್ಣನೇ ನಮಗೆ

ಮಹತ್ವದವನಾಗುತ್ತಾನೆ, ಆ ದೇವ ಮಾನವನ ಆಧ್ಯಾತ್ಮಿಕ ಸ್ವರೂಪವಷ್ಟೇ ನಮಗೆ ಮಹತ್ವದ ವಿಷಯವಾಗುವುದೇ ಹೊರತು ಇತರ ವಿಷಯಗಳು ನಗಣ್ಯವಾಗಿಬಿಡುತ್ತವೆ. ಹಾಗೆಂದು ಕೃಷ್ಣನು ಐತಿಹಾಸಿಕ ವ್ಯಕ್ತಿ ಅಲ್ಲವೇ ಎಂದು ಕೇಳುವ ಕಾರಣವಿಲ್ಲ. ಅವನು ಅವಶ್ಯವಾಗಿ ಓರ್ವ ಐತಿಹಾಸಿಕ ವ್ಯಕ್ತಿ. ಛಾಂದೋಗ್ಯ ಉಪನಿಷತ್ತಿನಲ್ಲಿ ಕೃಷ್ಣನ ಹೆಸರು ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತದೆ. ಛಾಂದೋಗ್ಯದಲ್ಲಿ ದೊರೆಯುವ ವಿವರ ಇಷ್ಟೇ, ಆಧ್ಯಾತ್ಮಿಕ ಪರಂಪರೆಯಲ್ಲಿ ಕೃಷ್ಣನು ಬ್ರಹ್ಮಜ್ಞನೆಂದು ಖ್ಯಾತನಾಗಿದ್ದನು. ದೇವಕೀಸುತ ಕೃಷ್ಣ ಎಂದು ಹೇಳುವ ಎಲ್ಲ ಸಂದರ್ಭಗಳಲ್ಲಿಯೂ ಬ್ರಹ್ಮಜ್ಞ ಕೃಷ್ಣನೆಂಬುದು ಎಲ್ಲರಿಗೂ ತಿಳಿದು ಬಿಡುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನ ಹೆಸರೂ ಕೂಡ ಛಾಂದೋಗ್ಯದಲ್ಲಿ ಬರುತ್ತದೆ. ಮಹಾಭಾರತದ ಯುದ್ಧದಲ್ಲಿ ಈ ಇಬ್ಬರೂ ವ್ಯಕ್ತಿಗಳು ಇಬ್ಬರು ನಾಯಕರಾಗಿದ್ದರೆಂದು ಹೇಳಲಾಗಿದೆ. ಪರಂಪರಾಗತವಾಗಿ ಬಂದ ವಾಙ್ಮಯದಲ್ಲಿ ಕೂಡ ಅವರೀರ್ವರನ್ನೂ ತೀರ ಆಪ್ತರಂತೆ ವರ್ಣಿಸಿರುವುದನ್ನು ನೋಡಿದಾಗ, ಅವರು ಸಮಕಾಲೀನರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಮಹಾಭಾರತ ಕಾವ್ಯವು ಬಹು ದೊಡ್ಡ ಪ್ರಮಾಣದಲ್ಲಿ ಐತಿಹಾಸಿಕ ವ್ಯಕ್ತಿಗಳ ಕಥೆಯನ್ನೇ ಹೇಳುತ್ತದೆ, ಅದರೊಳಗೆ ಬರುವ ಕುರುಕ್ಷೇತ್ರ ಯುದ್ಧವು ಜನಮಾನಸದಲ್ಲಿ ಕೆತ್ತಿದಂತೆ ಮೂಡಿದ ಐತಿಹಾಸಿಕ ಘಟನೆಯಾಗಿದೆ ಎಂದು ಖಂಡಿತವಾಗಿ ಹೇಳಲು ಸಾಧ್ಯವಿದೆ. ಕ್ರಿಸ್ತಪೂರ್ವ ಕೆಲ ಶತಕಗಳ ಹಿಂದೆ ಕೃಷ್ಣ ಮತ್ತು ಅರ್ಜುನರ ಧರ್ಮವಿಹಿತ ಪೂಜೆಯು ಅಸ್ತಿತ್ವದಲ್ಲಿತ್ತು ಎಂಬುದು ನಮಗೆ ಗೊತ್ತಿದೆ; ಇದರಿಂದ ವಿಶಿಷ್ಟವಾದ ಧಾರ್ಮಿಕ–ದಾರ್ಶನಿಕ ಪರಂಪರೆಯೊಂದರಲ್ಲಿ ಇವರಿಬ್ಬರಿಗೂ ಪೂಜೆ ಸಲ್ಲುತ್ತಿತ್ತು ಎಂದೂ ಊಹಿಸಬಹುದು. ಈ ವಿಶಿಷ್ಟ ಪರಂಪರೆಯ ಅನೇಕ ಅಂಶಗಳು ಗೀತೆಯಲ್ಲಿ ಬಂದಿರಬಹುದು. ಜ್ಞಾನ–ಭಕ್ತಿ–ಕರ್ಮಗಳ ಸಮನ್ವಯದ ಅಡಿಪಾಯ ಕೂಡ ಈ ಪರಂಪರೆಯಿಂದ ಬಂದಿರಲೂಬಹುದು. ಮಾನವ ಕೃಷ್ಣನು ಈ ಧಾರ್ಮಿಕ–ದಾರ್ಶನಿಕ ಪಂಥದ ಮೂಲ ಸ್ಥಾಪಕನಿರಬಹುದು, ಅಥವಾ ಪುನರುಜ್ಜೀವನ–ಗೊಳಿಸಿದವನಿರಬಹುದು, ಅಥವಾ ಕನಿಷ್ಠ ಪಕ್ಷ ಪ್ರಾಚೀನ ಗುರು ಪರಂಪರೆಯಲ್ಲಿನ ಓರ್ವ ಗುರುವಾದರೂ ಆಗಿರಲೇಬೇಕು ಎಂಬುದನ್ನು ಕೆಲ ಪುರಾಣಗಳ ಆಧಾರದಿಂದ ಸ್ಪಷ್ಟವಾಗಿ ತೀರ್ಮಾನಿಸಬಹುದು. ಈ ಪ್ರಾಚೀನ ಕೃಷ್ಣನೇ ಉಪದೇಶವನ್ನೇ ಭಾರತೀಯ ವಿಚಾರ ಪರಂಪರೆಯಲ್ಲಿ

ಅಳವಡಿಸಿಕೊಂಡಿದ್ದರ ಫಲವನ್ನೇ ನಾವು ಗೀತೆಯಲ್ಲಿ ಕಾಣುತ್ತಿರಬಹುದು; ಇಷ್ಟೇ ಅದನ್ನು ಆ ಕಾಲದ ಭಾಷೆಗೆ ಅಳವಡಿಸಿಕೊಂಡು ಹೇಳಲಾಗಿರಬಹುದು ಎಂಬುದುನ್ನು ಸಹ ನಾವು ಊಹಿಸಬಹುದು. ಅದೇ ರೀತಿ, ಈ ಉಪದೇಶ ನೀಡಿದ ಐತಿಹಾಸಿಕ ಕೃಷ್ಣನ ಜೊತೆ ಕಲ್ಪಿಸಿದ ಸಂಬಂಧವು ಐತಿಹಾಸಿಕ ಅರ್ಜುನನ ಜೊತೆಗೆ ಹಾಗೂ ಕುರುಕ್ಷೇತ್ರದ ಯುದ್ಧದ ಜೊತೆಗೆ ಜೋಡಿಸಿದ ಸಂಬಂಧವು ನಾಟಕಗಳ ರಚನೆಯಂತೆ ಕೇವಲ ಕಾಲ್ಪನಿಕವಾಗಿರದೇ ಅದರಲ್ಲಿ ಸತ್ಯಾಂಶ ಇದ್ದಿರಲೇಬೇಕು ಎಂದು ತಿಳಿಯಲು ಸಾಕಷ್ಟು ಅವಕಾಶವಿದೆ. ಮಹಾಭಾರತದಲ್ಲಂತೂ ಕೃಷ್ಣನು ಐತಿಹಾಸಿಕ ವ್ಯಕ್ತಿಯಾಗಿದ್ದು ಅವತಾರ ಸ್ವರೂಪನಾಗಿದ್ದನೆಂಬುದನ್ನು ಸ್ಪಷ್ಟವಾಗಿಯೇ ತೋರಿಸಲಾಗಿದೆ. ಆದ್ದರಿಂದ ಹಳೆಯ 'ಭಾರತ'[1] ಕಥೆಗೆ ಮಹಾಭಾರತದ ರೂಪ ಕೊಟ್ಟಿರಬಹುದು, ಕ್ರಿ.ಪೂ. 5ನೆಯ ಶತಮಾನದಿಂದ ಕ್ರಿ.ಪೂ. ಮೊದಲನೆಯ ಶತಮಾನದವರೆಗಿನ ಕಾಲದಲ್ಲಿ ಈ ರೂಪ ಕೊಟ್ಟಿರಬಹುದೆಂದು ತೋರುತ್ತದೆ, ಅದಾಗಲೇ ಕೃಷ್ಣನ ಪೂಜೆ, ಮತ್ತು ಕೃಷ್ಣನ ಅವತಾರದ ಕಥೆ ಜನರಲ್ಲಿ ಬಿಂಬಿತವಾಗಿತ್ತು. ಬೃಂದಾವನದಲ್ಲಿ ಕೃಷ್ಣವತಾರವು ಮಾಡಿದ ಬಾಲಲೀಲೆಗಳ ಸಂಕ್ಷಿಪ್ತ ಉಲ್ಲೇಖ ಮಹಾಭಾರತ ಕಾವ್ಯದಲ್ಲಿ ಇದೆ. ಈ ಬಾಲ್ಯಜೀವನ, ಶಿಶುಜೀವನವನ್ನು ತೆಗೆದುಕೊಂಡೇ ಅವನನ್ನು ಅತಿ ಸಾಮರ್ಥ್ಯಶಾಲಿ ಆಧ್ಯಾತ್ಮಿಕ ವ್ಯಕ್ತಿಯಾಗಿ ಚಿತ್ರಿಸಲಾಗಿದೆ. ಭಾರತದ ಧಾರ್ಮಿಕ ಮನಸ್ಸಿನಲ್ಲಿ ಇದರ ಪ್ರಚಂಡ ಪರಿಣಾಮವನ್ನು ನಾವು ನೋಡುತ್ತೇವೆ. ಹರಿ ವಂಶದಲ್ಲಿ ಕೃಷ್ಣನ ಜೀವನದ ಕಥೆ ಇದೆ, ಈ ಕಥೆಯಲ್ಲಿ ಅನೇಕ ಅದ್ಭುತ ಪವಾಡಗಳನ್ನು ಹೇಳಲಾಗಿದೆ. ಪುರಾಣಗಳಲ್ಲಿ ಹೇಳಲಾದ ಕೃಷ್ಣ ಕಥೆಯು ಹರಿ ವಂಶದ ಆಧಾರದ ಮೇಲೆಯೇ ರಚಿತವಾಗಿರಬಹುದು ಎಂದು ಸುಲಭವಾಗಿ ಊಹಿಸಬಹುದು.

ಐತಿಹಾಸಿಕ ದೃಷ್ಟಿಯಿಂದ ಈ ಸಂಗತಿಗಳು ಬಹಳ ಮಹತ್ವದವಾಗಿದ್ದರೂ ನಮ್ಮ ಗೀತೆಯ ಅಧ್ಯಯನ ದೃಷ್ಟಿಯಿಂದ ಇದಾವುದೂ ಮಹತ್ವದ್ದಲ್ಲ. ಗೀತೆಯು ಈಶ್ವರ, ಭಗವಂತ, ಗುರುವಿನ ರೂಪದಲ್ಲಿ ನಮ್ಮ ಮುಂದಿರಿಸುವ ಕೃಷ್ಣನೇ, ನಮಗೆ ಮುಖ್ಯ, ಅದನ್ನು ಕುರಿತೇ ನಾವು ಚಿಂತಿಸುವವರಿದ್ದೇವೆ. ಮಾನವನಲ್ಲಿ ಆಧ್ಯಾತ್ಮಿಕ ಬೆಳಕನ್ನು ತಂದು ತುಂಬುವ ಸಾಮರ್ಥ್ಯವು ಹೃದಯಸ್ಥ ಭಗವಂತನ ಗುರುತ್ವದಲ್ಲಿದೆ ಎಂಬ ಗೀತೆಯ ಸಿದ್ಧಾಂತವನ್ನು ನಾವು ವಿವೇಚನೆ

ಮಾಡುವವರಿದ್ದೇವೆ. ಏಕೆಂದರೆ ಈಶ್ವರನು ಮಾನವ ನಡುವೆ ಮಾನವನಾಗಿ ಅವತಾರ ತಾಳುತ್ತೇನೆ ಎಂದು ಗೀತೆ ಒಪ್ಪುತ್ತದೆ. "ಬಹೂನಿ ಮೇ ವ್ಯತೀಕಾನಿ ಜನ್ಮಾನಿ" (4:5) ಸಂಭವಾಮಿ ಯುಗೇ ಯುಗೇ (4:8) ಎಂಬುದನ್ನು ಸ್ವತಃ ಕೃಷ್ಣನೇ ಗೀತೆಯಲ್ಲಿ ಹೇಳಿದ್ದಾನೆ. ಅನಂತ ಪ್ರಜ್ಞೆಯ ಪುರುಷನು ಸಾಂತ ಪ್ರಜ್ಞೆಯ ರೂಪ ಧರಿಸಿ, ತನ್ನ ಮಾಯೆ ಎಂಬ ಶಕ್ತಿಯ ಮೂಲಕ ಅನೇಕ ರೂಪಾಕಾರಗಳನ್ನು ತಾಳುತ್ತ ವ್ಯಕ್ತನಾಗುತ್ತಾನೆ, ಅಥವಾ ಜನ್ಮ ತಾಳುತ್ತಾನೆ, ನಾಕಾರ ಅಸ್ತಿತ್ವಕ್ಕೆ ಯೋಗ್ಯವಾದ ಉಪಾಧಿಗಳನ್ನು ಹೊಂದುತ್ತಾನೆ ಎಂದು ಕೃಷ್ಣನೇ ಗೀತೆಯಲ್ಲಿ ಹೇಳುತ್ತಾನೆ. ಹೀಗಿದ್ದರೂ ಸಹ ಈಶ್ವರನ ಬಾಹ್ಯ ಅಥವಾ ಪ್ರಕಟವಾದ ಸಗುಣ ರೂಪಕ್ಕೆ ಗೀತೆಯು ವಿಶೇಷ ಮಹತ್ವ ನೀಡುವುದಿಲ್ಲ. ಬದಲಾಗಿ ಸಕಲ ಕಾರಣನಾದ, ಎಲ್ಲ ಜೀವರಾಶಿಗಳ ಪ್ರಭುವಾದ, ಮಾನವರಲ್ಲಿ ಗುಪ್ತವಾಗಿ ವಾಸಮಾಡುವ ಈಶ್ವರನಿಗೆ ಗೀತೆ ಹೆಚ್ಚಿನ ಮಹತ್ವ ನೀಡುತ್ತದೆ. ಮಾನವ ಹೃದಯಸ್ಥ ಈಶ್ವರನನ್ನು ಕುರಿತು ಗೀತೆ ಆಗಾಗ ಉಲ್ಲೇಖ ಮಾಡುತ್ತಲೇ ಇರುತ್ತದೆ. 'ಅಶಾಸ್ತ್ರವಿಹಿತಂ ಘೋರಂ ತಪ್ಯಂತೇ, ಅಂತಃಶರೀರಸ್ಥಂ ಮಾಂ ಕರ್ಷಾಯಂತಃ (17–56)', 'ಅವಜಾನಂತಿ ಮಾಂ ಮಾಥಾಃ ಮಾನುಷೀಂ ತನುಮಾಶ್ರಿತಂ (9–11)', 'ಅಜ್ಞಾನಜಂ ತಮಂನಾಶಯಾಮ್ಯಾತ್ಮ ಭಾವಸ್ಥೋ ಜ್ಞಾನದೀಪೇನ ಭಾಸ್ವತಾ (10–11)', ಈ ಎಲ್ಲ ಸಂದರ್ಭಗಳಲ್ಲಿ ಹೃದ್ದೇಶಸ್ಥಿತ ಈಶ್ವರನನ್ನು ಕುರಿತು ಗೀತೆ ಹೇಳುತ್ತದೆ. ಗೀತೆಯು ಹೇಳುವಂತೆ ಮಾನವನ ಹೃದಯಸ್ಥ ನಿತ್ಯ ಅವತಾರವೇ ಅದೇ ವ್ಯಕ್ತಿರೂಪ ತಾಳಿ, ಮಾನವನ ರೂಪ ಧರಿಸಿ, ಮಾನವರ ಜೊತೆ ವ್ಯವಹರಿಸುತ್ತದೆ, ಮಾನವನ ಜೀವನ ಉಜ್ವಲಗೊಳಿಸುತ್ತದೆ, ದಿವ್ಯ ಕರ್ಮಗಳ ರಹಸ್ಯವನ್ನು ಮಾನವನಿಂದ ಅನಾವರಣಗೊಳಿಸಲ್ಪಡುತ್ತದೆ. ಅವನಿಗೆ ಮಾರ್ಗದರ್ಶನ ಮಾಡುತ್ತದೆ. ಮಾನವನ ಜೀವನದಲ್ಲಿ ದುಃಖಮಯ ಸನ್ನಿವೇಶ ಬಂದಾಗ, ಏನು ಮಾಡಬೇಕೆಂಬುದೇ ತಿಳಿಯದಿರುವಂಥ ಸ್ಥಿತಿ ಇರುವಾಗ ವಿಶ್ವ ಗುರುವಾದ, ವಿಶ್ವ ಚಾಲಕನಾದ ಕೃಷ್ಣನ ಮಾತು ನೆನಪಿಸಿಕೊಂಡು ಮುನ್ನಡೆಯುವ ಶಕ್ತಿ ನೀಡುತ್ತದೆ. ಭಾರತದ ಧರ್ಮಪರಾಯಣ ಮನಸ್ಸು ಹೃದಯಸ್ಥ ಈಶ್ವರನ್ನು ಸಮೀಪಿಸಲು ಅನೇಕ ರೀತಿಯಿಂದ ಪ್ರಯತ್ನ ಮಾಡುತ್ತದೆ; ದೇವಾಲಯಗಳಲ್ಲಿ ಪ್ರತೀಕಾತ್ಮಕ ಮಾನವ ರೂಪದ ದೇವ ಮೂರ್ತಿಯನ್ನು ಈ ಧಾರ್ಮಿಕ ಮನಸ್ಸು ಸ್ಥಾಪಿಸಿ,

ಪೂಜಿಸುತ್ತದೆ, ತನಗೆ ಗೊತ್ತಿರುವ ಎಲ್ಲ ಅವತಾರಗಳನ್ನು ಆರಾಧಿಸುತ್ತದೆ, ಹೀಗೆ ತನಗೆ ತಿಳಿದಂತೆ ಏನೆಲ್ಲವನ್ನು ಮಾಡುತ್ತದೆ. ಹೃದಯಸ್ಥ ಈಶ್ವರನ ಸಾನ್ನಿಧ್ಯದ ಅನುಭವಕ್ಕಾಗಿ ಈ ಎಲ್ಲ ಮತ್ತು ಇನ್ನೂ ಅನೇಕ ಪ್ರಯತ್ನಗಳನ್ನು ಮಾಡುತ್ತದೆ. ಹೃದಯಸ್ಥ ಈಶ್ವರನ ಸಂದೇಶವನ್ನು, ವಾಣಿಯನ್ನು ಆಲಿಸಬೇಕೆಂಬ ಬಯಕೆ ಈ ರೀತಿ ಮಾಡಲು ಹಚ್ಚುತ್ತದೆ. ಹೃದಯಸ್ಥ ನಿರಾಕಾರ ಈಶ್ವರನನ್ನು ಸಾಕಾರ ಕಾಣಬೇಕೆಂಬ ತವಕ ಅದಕ್ಕೆ. ಪರಮಾತ್ಮನ ಜ್ಞಾನ, ಶಕ್ತಿ, ಪ್ರೇಮಗಳನ್ನು ಸಾಕ್ಷಾತ್ತಾಗಿ ಅನುಭವಿಸಬೇಕೆಂಬ ತುಡಿತ ಇವನ್ನೆಲ್ಲ ಮಾಡಲು ಅವನನ್ನು ಪ್ರೇರೇಪಿಸುತ್ತದೆ.

ಕೃಷ್ಣನನ್ನು ದೇವರು ಎಂದು ವಿಚಾರ ಮಾಡುವಾಗ, ಗೀತೆಯು ಹೃದಯಸ್ಥ ಈಶ್ವರನ ಗುಪ್ತ ರೂಪದ ಮೇಲೆ ಒತ್ತು ನೀಡುತ್ತದೆ. ಅದೇ ರೀತಿ ಈಗ ಮಾನವ ಕೃಷ್ಣನ ಸಂಗತಿ ನೋಡಿ. ಅವನು ಮಹಾಭಾರತ ಸಮಸ್ತ ಕ್ರಿಯಾ ಮಾನವ ಕಲಾಪಗಳ ಹಿಂದೆ ಇದ್ದಾನೆ; ಆದರೆ ಅವನೊಬ್ಬ ವೀರ, ಮಹಾನಾಯಕ, ಗುರು ಅನ್ನುವ ರೀತಿಯಲ್ಲಿ ಅವನನ್ನು ಎಲ್ಲಿಯೂ ವರ್ಣಿಸಿಲ್ಲ. ಆದರೆ ಈ ಎಲ್ಲ ಕಾರ್ಯಗಳ, ಚಟುವಟಿಕೆಗಳ ಹಿಂದೆ ಗುಪ್ತರೂಪನಿಂದ ಅವನೇ ಚಾಲಕನಾಗಿ, ಮಾರ್ಗದರ್ಶಕನಾಗಿ ಇದ್ದಾನೆ ಅನ್ನುವುದನ್ನು ಸೂಚ್ಯವಾಗಿ ಹೇಳುತ್ತದೆ. ಮಹಾಭಾರತದ ವ್ಯವಹಾರವು ಇಡೀ ಮಾನವನ, ರಾಷ್ಟ್ರಗಳ, ಸಮಗ್ರ ವಿಶ್ವದ ವ್ಯವಹಾರವಾಗಿದೆ. ಈ ರಾಷ್ಟ್ರಗಳಲ್ಲಿ, ಮಾನವರಲ್ಲಿ ಕೆಲವರಂತೂ ಯಾವುದೇ ರೀತಿಯ ವೈಯಕ್ತಿಕ ಲಾಭದ ಅಪೇಕ್ಷೆಯಿಂದ ಬಂದಿಲ್ಲ, ಕೇವಲ ಒಂದು ಪ್ರಯತ್ನದ ಅಂಗವಾಗಿ ತಮ್ಮ ದೇಣಿಗೆ ನೀಡಲು ಮಾತ್ರ ಬಂದಿದ್ದಾರೆ. ಇವರ ನೇತೃತ್ವ ಕೃಷ್ಣ ವಹಿಸಿದ್ದಾನೆ. ಕೆಲವರು ಈ ಪ್ರಯತ್ನವನ್ನು ಇದರ ಪರಿಣಾಮವನ್ನು ವಿರೋಧ ಮಾಡುವ ಉದ್ದೇಶದಿಂದಲೇ ಬಂದಿದ್ದಾರೆ, ಈ ವಿರೋಧಕರನ್ನು ಕೃಷ್ಣ ವಿರೋಧಿಸುತ್ತಾನೆ. ಇಂಥವರ ಮೋಸ, ವಂಚನೆಗಳನ್ನೂ ಕೃಷ್ಣ ಸುಲಭವಾಗಿ ಗೆಲ್ಲುತ್ತಾನೆ. ಕೆಲವರು ಅವನನ್ನು ದುಷ್ಟಕಾರ್ಯಗಳಿಗೆ ಕುಮಕ್ಕು ನೀಡುವವನು ಎಂದು ಭಾವಿಸಿದ್ದಾರೆ. ಅಂಥವರ ಭಾವನೆ ಸರಿಪಡಿಸುತ್ತಾನೆ. ಕೆಲವರು ಸಮಾಜ ವ್ಯವಸ್ಥೆ ಇದ್ದಂತೆಯೇ ಇರಲಿ, ಬದಲಿಸುವುದು ಬೇರೆ ಅನ್ನುವರಿದ್ದಾರೆ, ಅವರಿಗೆಲ್ಲ ಸರಿಯಾದ ಬೋಧನೆ ನೀಡಿ ಕೃಷ್ಣ ಅವರನ್ನು ಸರಿಪಡಿಸುತ್ತಾನೆ. ಎಲ್ಲಿ ಪರಿಣಾಮವು ಸಹಜವಾಗಿ, ತಾನೇ ತಾನಾಗಿ ಬರುವುದೋ, ಹಾಗೂ

ಕರ್ಮಯೋಗಿಗಳು ವಿರೋಧಿಗಳಿಂದ ಅಹತವಾದರೂ ಪರೀಕ್ಷೆಯಲ್ಲಿ ಗೆದ್ದು ಪ್ರಭುತ್ವ ಸಾಧಿಸುವುರೋ ಅಂಥಲ್ಲೆಲ್ಲ ಅವತಾರ ತತ್ವ ನೇರವಾಗಿ ಕಾಣಿಸಿಕೊಳ್ಳುವುದಿಲ್ಲ. ಆಗೊಮ್ಮೆ, ಈಗೊಮ್ಮೆ ಭರವಸೆಯ ಬೆಳಕಾಗಿ ತೋರಬಹುದೇ ಹೊರತು ಅವತಾರ ಪ್ರತ್ಯಕ್ಷವಾಗಿ ನೇರ ಕಾರ್ಯ ಪ್ರವೃತ್ತವಾಗುವುದಿಲ್ಲ. ಕೇವಲ ಸಾಂತ್ವನ ಹೇಳಲು ಅಥವಾ ತಾತ್ಕಾಲಿಕ ನೆರವು ನೀಡಲು ಅಂಥ ಪ್ರಸಂಗಗಳಲ್ಲಿ ಅವನು ಬರುವುದುಂಟು ಆದರೆ ನೇರವಾಗಿ ಕಾರ್ಯ ಮಾಡುವುದಿಲ್ಲ. ಕೃಷ್ಣನ ವಿಶೇಷತೆ ಏನೆಂದರೆ ಅವನು ಎಲ್ಲರಿಗೂ ಸಹಾಯ ಮಾಡುತ್ತಾನೆ., ಆದರೆ ಅವನು ಮಾಡುವ ಸಹಾಯ ಹೇಗಿರುತ್ತದೆ ಅಂದರೆ ಎಲ್ಲರಿಗೂ ತಾವೇ ಎಲ್ಲವನ್ನೂ ಮಾಡುವವರು ಎಂಬ ಭಾವ ಉದಯಿಸುತ್ತದೆ. ಅರ್ಜುನನ ಕೃಷ್ಣ ಪ್ರಾಣ ಸಖ, ಜೀವದ ಗೆಳೆಯ, ಹಾಗೆಯೇ ಅವನ ಪ್ರಮುಖ ಸಾಧನವೂ (ಉಪಕರಣವೂ) ಆಗಿದ್ದನು.

(ಸಶೇಷ)

---

**ಟಿಪ್ಪಣಿ:**

1. ಮಹಾಭಾರತದ ಘಟನೆಗಳು ಸಂಹಿತೆಗಳು ನಿರ್ಮಾಣಗೊಳ್ಳುತ್ತಿದ್ದಾಗ ಘಟಿಸಿರುವ ಘಟನೆ ಎಂದು ಕಾವ್ಯಕಂಠ ವಾಸಿಷ್ಠಗಣಪತಿ ಮುನಿಗಳು ತಮ್ಮ "ಮಹಾಭಾರತ ಪರೀಕ್ಷಾ" ಗ್ರಂಥದಲ್ಲಿ ಸೋದಾಹರಣವಾಗಿ ನಿರೂಪಿಸಿದ್ದಾರೆ. [ಸಂ]

## ಶ್ರೀ ಅರವಿಂದರ

# "ಋಗ್ವೇದದ ಪ್ರಥಮ ಋಕ್" – ಒಂದು ಆಧುನಿಕ ವಿಶ್ಲೇಷಣೆ

**– ಅನುವಾದ: ಪುಟ್ಟು ಕುಲಕರ್ಣಿ**

**3**

**ಪುರೋಹಿತಮಮ್**

ಇಲ್ಲಿ ಮುಖ್ಯವಾಗಿ ಗಮನಿಸಲೇಬೇಕಾದ ಸಂಗತಿ ಎಂದರೆ ಇದು ಏಕಶಬ್ದವಲ್ಲ. ಇದು ಎರಡು ಶಬ್ದಗಳ ಸಂಯುಕ್ತ ಪದವಾಗಿದೆ. ಮೇಲ್ನೋಟಕ್ಕೆ ಪುರೋಹಿತ ಎನ್ನುವಂತೆ ಕಂಡುಬಂದರೂ, ಪೂಜೆ ಮಾಡುವವ ಎನ್ನುವ ಅರ್ಥ ವ್ಯಾಪ್ತಿಯಲ್ಲಿ, ಇದ್ದಂತೆ ಕಂಡು ಬರುತ್ತದೆ. ಈ ಶಬ್ದವನ್ನು ಸಂಯುಕ್ತ ಪದವೆಂದೇ ಪರಿಗಣಿಸಿ ನೈಯಾಯಿಕ–ವ್ಯಾವಹಾರಿಕ ವ್ಯಾಖ್ಯಾನಗಳು ರೂಪುಗೊಂಡವು. ಆದರೆ ಈ ಋಕ್ ನಿರ್ಮಾಣಗೊಂಡ ಕಾಲದಲ್ಲಿ ಈ ತೆರನಾದ ಅರ್ಥವು ಇರಲೇ ಇಲ್ಲ. ಇಲ್ಲಿರುವ "ಪುರಃ" ಶಬ್ದವು ಮೂಲತಃ ಷಷ್ಠೀ ವಿಭಕ್ತಿಯಲ್ಲಿ ಇದ್ದು, ಇದು ಪುರ್ ಕ್ರಿಯಾ ವಿಶೇಷಣದ ರೂಪವಾಗಿದೆ. "ಪುರ್" ಎಂದರೆ ದ್ವಾರ, ದ್ವಾರಪಥ, (Gate), ಪುಲೋಸ್ (ನಗರವನ್ನು ಸುತ್ತುವರೆದಿರುವ ಗೋಡೆ/ಕೋಟೆ) ಎಂದಾಗುತ್ತದೆ. ಹೀಗಾಗಿಯೇ ಪೊಲೀಸ್ ಎಂದರೆ ನಗರ ಎನ್ನುವ ಅರ್ಥವ್ಯಾಪ್ತಿ ಇದೆ. ಒಟ್ಟಿನಲ್ಲಿ, ಪ್ರವೇಶದ ಹಂತದಲ್ಲಿ ಪ್ರಪ್ರಥಮವಾಗಿ ಇರುವ ಅಥವಾ ಮುಂದಿರುವ ಎಂದರ್ಥ. ತದನಂತರದ ಅವಧಿಯಲ್ಲಿ ಇದು ನಗರ, ನಗರ ಅಥವಾ ಗೃಹ ಎನ್ನುವ ಅರ್ಥದಲ್ಲಿ ಬಳಕೆಗೊಳ್ಳತೊಡಗಿತು. ಗ್ರೀಕ ಭಾಷೆಯಲ್ಲಿಯೂ ಸಹಿತ ಪುಲೆ ಎನ್ನುವ ಶಬ್ದದ ಅರ್ಥವು ಇದೇ ವ್ಯಾಪ್ತಿಯಲ್ಲಿ ಇದೆ.

ಇನ್ನು ಹಿತಮಮ್ ಎನ್ನುವದು, ಹಿ ಕ್ರಿಯಾಪದದಿಂದ ರೂಪಿತಗೊಂಡ Objective ಕ್ರಿಯಾವಿಶೇಷಣವಾಗಿದೆ. ಹಿ ಎಂದರೆ ಕೆಳಗಿಳಿಸು, ಕೆಳಗೆ ಎಸೆ, ಸ್ಥಳ ಅಥವಾ ಸ್ಥಾಪಿಸು (Plant) ಎಂದರ್ಥದಲ್ಲಿದೆ. ಇದೇ ಅರ್ಥ ವ್ಯಾಪ್ತಿಯ che–ಒ ಎನ್ನುವ ಶಬ್ದವು ಹಿಡಿದ ಅರ್ಥ ವ್ಯಾಪ್ತಿಯಲ್ಲಿ 'ನಾನು ಉತ್ಸರ್ಜಗೊಳ್ಳುತ್ತೇನೆ' ಎಂದಿದೆ. ಹಯಾ, ಪುರೋಹಿತಮ್ ಎಂದರೆ "ಮುಂದುಗಡೆ ಸ್ಥಾಪಿಸಲ್ಪಟ್ಟಂತಹ" ಅಥವಾ "ಈ ಕಾರಣದಿಂದ ರೂಪಿತವಾದ" ಎಂದರ್ಥವಾಗುತ್ತದೆ.

## ಯಜ್ಞಸ್ಯ

ಯಜ್ಞ ಎನ್ನುವದು ವೇದದಲ್ಲಿ ಅತ್ಯಂತ ಪ್ರಮುಖವಾದ ಶಬ್ದವಾಗಿದೆ. ಸರ್ವೇಸಾಮಾನ್ಯವಾದ ಯಾಜ್ಞಿಕ ಕ್ರಿಯೆಯ ಅನುಷ್ಠಾನದ ಹಂತದಲ್ಲಿ 'ಯಜ್' ಎನ್ನುವದು ತ್ಯಾಗ/ಸಮರ್ಪಣೆ/ಬಲಿ(?) ಎಂದೇ ಪರಿಗಣಿತವಾಗಿ, ಇದಕ್ಕೆ ಬೇರೆ ಅರ್ಥಗಳು, ಅಭಿಪ್ರಾಯಗಳು ರೂಪುಗೊಳ್ಳಲೇ ಇಲ್ಲ. ಒಂದು ವೇಳೆ ಈ ಲೌಕಿಕವಾದ ಅಭಿಪ್ರಾಯಗಳನ್ನೇ ಆಧಾರವಾಗಿಟ್ಟುಕೊಂಡರೆ, ಯಾವುದೇ ಕಾರಣಕ್ಕೂ ಭಾರತೀಯ ಆಧ್ಯಾತ್ಮಿಕತೆ ಮತ್ತು ದಿವ್ಯ ಜ್ಞಾನದ ಉಗಮವಾಗಿರುವ ವೇದಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವೇ ಆಗುವದಿಲ್ಲ.

ವೇದದಲ್ಲಿ ಬಳಸಲ್ಪಟ್ಟಿರುವ 'ಯಜ್' ಎನ್ನುವದು ಪರಮ ಪುರುಷೋತ್ತಮನಾದ ವಿಷ್ಣುವಾಗಿದ್ದಾನೆ. ಇದನ್ನೇ 'ಧರ್ಮ' ಎಂದರೆ ಬಲಿ(ದಾನ), 'ತ್ಯಾಗ,' ಎನ್ನುವ ಅರ್ಥಕ್ಕೆ ರೂಪಾಂತರಗೊಳಿಸಲಾಗಿದೆ. ದ್ವಾಪರ ಯುಗದ ನಂತರದಲ್ಲಿ ಈ ಅಭಿಪ್ರಾಯವನ್ನೇ 'ಯೋಗ' ಇಲ್ಲವೇ 'ಧರ್ಮ'ವೆಂದು ಹೇಳಲಾಯಿತು. ಇದರ ಹಲವು ವಿಧದ ರೂಪುಗಳೇ ಸೃಷ್ಟಿಗೊಂಡು ಎಲ್ಲೆಡೆಗೂ ವಿಸ್ತರಿಸಲ್ಪಟ್ಟವು. ಅಷ್ಟೇ ಅಲ್ಲದೇ, ಅಲ್ಲಿಯವರೆಗೂ ಇದ್ದ ಶುದ್ಧ ಜ್ಞಾನವನ್ನು ಹಿಂದೆ ಸರಿಸಲಾಯಿತು. ಹೀಗಾಗಿ ಇದು ವೇದ ರಚನೆಯ ಅವಧಿಯಲ್ಲಿ ರೂಪುಗೊಂಡಿದ್ದ, ನಿಜವಾದ ಅರ್ಥವನ್ನು – ಸೂಕ್ತ ಅರ್ಥವನ್ನು – ಮತ್ತೆ ಮರಳಿ ಪಡೆಯಬೇಕಾಗಿದೆ. ನಿರುಕ್ತದ ಮೂಲಕ ಮಾತ್ರ ಇದನ್ನು ಸಾಧಿಸಬಹುದಾಗಿದೆ. ಇಲ್ಲಿ, ಈ ಹಿನ್ನೆಲೆಯಲ್ಲಿ, ನಿರುಕ್ತದ ತತ್ತ್ವದ ಮೂಲಕ ಗಮನಿಸಬಹುದಾದ ವಿವರಗಳ ಕೆಲವು ಕಿರುನೋಟಗಳಿವೆ.

ಸಂಸ್ಕೃತ ಭಾಷೆ ದೇವಭಾಷೆ ಎಂದು ಕರೆಯಲ್ಪಡುತ್ತಿದ್ದ ಅವಧಿಯಲ್ಲಿ, ಅಥವಾ ಸಂಸ್ಕೃತ ಭಾಷೆ ರೂಪುಗೊಂಡ ಮತ್ತು ಸಂವಹನಾ ಭಾಷೆಯಾಗಿ ಬಳಸಲ್ಪಡುತ್ತಿದ್ದುದು ಉತ್ತರಮೇರು ಭಾಗದ ಜನ ಸಮುದಾಯದಿಂದ ಎನ್ನುವದು ಪುರಾವೆಗೊಂಡಿದೆ. ಅದೂ ಈ ಮನ್ವಂತರವು ಪ್ರಾರಂಭಗೊಳ್ಳುವ ಅವಧಿಯ ಭಾಷೆಯಾಗಿತ್ತು. ಆ ಅವಧಿಯಲ್ಲಿದ್ದ ಭಾಷಾ ಶುದ್ಧತೆಯು, (ನಿಖರತೆಯು) ದ್ವಾಪರ ಯುಗದಲ್ಲಿ ಮತ್ತು ಕಲಿಯುಗದಲ್ಲಿ ಬಳಸಲ್ಪಟ್ಟಿದ್ದ, ಬಳಸಲ್ಪಡುತ್ತಿರುವ ಸಂಸ್ಕೃತ ಭಾಷೆಗೆ ಇಲ್ಲ. ಹೀಗಾಗಿ ಈ ಪರಿಶುದ್ಧ ಹಂತದ ಉತ್ತರಮೇರುವಿನಲ್ಲಿ ಪ್ರಾಚೀನ ಹಂತದಲ್ಲಿದ್ದ ಭಾಷೆಯನ್ನು ಸತ್ಯಯುಗದ ಭಾಷೆಯೆಂದು ಪರಿಗಣಿಸಬೇಕಾಗುತ್ತದೆ. ವಾಕ್ ಮತ್ತು ಅರ್ಥ ಎರಡೂ ಪರಿಪೂರ್ಣತೆಯ ಸಂಯೋಗದಲ್ಲಿ ಇದ್ದು ಧ್ವನ್ಯಾತ್ಮಕವಾಗಿ ಅಭಿವ್ಯಕ್ತಿಗೊಳ್ಳುತ್ತಿದ್ದುದೇ ಮುಖ್ಯ ಗುಣವಾಗಿತ್ತು.

ಭಾಷೆಯಲ್ಲಿರುವ ಪ್ರತಿಯೊಂದು ಸ್ವರಗಳು ಮತ್ತು ವ್ಯಂಜನಗಳು ತನ್ನದೇ ಆದ ಅಸ್ಮಿತೆಯನ್ನು ಹೊಂದಿದ್ದು, ಅದರ ಅವಿಚ್ಛೇದ ಬಲವು(ಶಕ್ತಿಯು) ಪ್ರಕೃತಿಯಿಂದಲೇ ಸೃಷ್ಟಿಗೊಂಡಿರುತ್ತದೆಯೇ ವಿನಾ, ಮಾನವನ ಆಯ್ಕೆಯ ಪರಿಮಿತಿಗೆ ಒಳಪಟ್ಟು ರೂಪಣೆಗೊಳ್ಳುವದಿಲ್ಲ. ಇವುಗಳನ್ನು ಆಧಾರಭೂತ ಧ್ವನಿ(ನಾದ)ಗಳನ್ನಾಗಿಸಿಕೊಂಡೇ ತಾಂತ್ರಿಕ ಕ್ರಿಯೆಗಳಲ್ಲಿ "ಬೀಜಮಂತ್ರಗಳ" ಸೃಷ್ಟಿಯಾಗಿದೆ. ಇವುಗಳ ಮೂಲಕವೇ ಮಂತ್ರಗಳ ಅಮೋಘತೆಯಾಗಲೀ (efficacy) ಅಥವಾ ಫಲೋತ್ಪಾದಕತ್ವವಾಗಲಿ ಉದ್ಭವವಾಗಿವೆ.

ಹೀಗಾಗಿ ಸಂಸ್ಕೃತದ ಪ್ರಾರಂಭಿಕ ಹಂತದಲ್ಲಿ ಪ್ರತಿಯೊಂದು ಸ್ವರ ಮತ್ತು ವ್ಯಂಜನಗಳಿಗೆ ಅವುಗಳದೇ ಆದ ಒಂದು ನಿರ್ದಿಷ್ಟ–ಪ್ರಧಾನ–ಅರ್ಥವ್ಯಾಪ್ತಿ ಇದ್ದು, ಅದು ಆಯಾ ಅಕ್ಷರದ–ಸ್ವರದ–ವ್ಯಂಜನದ ಮೂಲ ಶಕ್ತಿಯಿಂದ ಅಥವಾ ಬಲದಿಂದ ಉದ್ಭವಗೊಳ್ಳುವ ಅರ್ಥವನ್ನು ಆಧರಿಸಿ ರೂಪಿತಗೊಂಡಿವೆ. ಸ್ವರ ಮತ್ತು ವ್ಯಂಜನಗಳನ್ನು ಸಂಯುಕ್ತಗೊಳಿಸುವ ಮೂಲಕ ಮತ್ತು ಸ್ವರದ ಸಂಯೋಜನೆ ಇಲ್ಲದೇ ಕೇವಲ ವ್ಯಂಜನದ ಮೂಲಕ ಮತ್ತು ವ್ಯಂಜನವಿಲ್ಲದೇ ಕೇವಲ ಸ್ವರದ ಮೂಲಕವೇ ಹಲವಾರು ಕ್ರಿಯಾಧಾತುಗಳು ಸೃಷ್ಟಿಯಾಗಿವೆ. ಜೊತೆಗೆ ವ್ಯಂಜನಗಳನ್ನು ಒಳಗೊಂಡಂತೆ ಸೃಷ್ಟಿಯಾಗುವ ಸಹಾಯಕ ಕ್ರಿಯಾ ರೂಪಗಳನ್ನು ತದನಂತರದ ಅವಧಿಯಲ್ಲಿ ರೂಪಣೆಗೊಳಿಸಲಾಯಿತು.

**ಶಬ್ದದ ಸಂರಚನೆ**

ಮಾನವನು ತನ್ನ ಸಂವಹನಕ್ಕಾಗಿ ಬಳಸುತ್ತಿರುವ ಭಾಷೆಯು ಮೃಣ್ಮಯದ ವಲಯದಲ್ಲಿ ರಚಿತಗೊಂಡಿಲ್ಲ; ಬದಲಾಗಿ ಇದು ಇಲ್ಲಿ ಅನುಷ್ಠಾನಗೊಂಡು ಅಭಿವ್ಯಕ್ತಗೊಳಿಸಲ್ಪಟ್ಟಿದೆ. ಹಾಗಾದರೆ ಭಾಷೆಯು ಜನಿಸಿದ್ದು ಎಲ್ಲಿ ಎನ್ನುವ ಪ್ರಶ್ನೆಗೆ ಉತ್ತರ ಬರುವದು "ಸ್ವರ್ಗದಲ್ಲಿ" ಎಂದಿದೆ. ಆದರೆ ಈ ಸ್ವರ್ಗವು ಪುರಾಣಗಳ ಕಲ್ಪನೆಯಲ್ಲಿ ರೂಪುಗೊಂಡು ಪ್ರಚಲಿತದಲ್ಲಿರುವ ಸ್ವರ್ಗವಲ್ಲ.

ಭಾಷೆಯ ಉಗಮವು ಪರಾಕಾಶದ–ಸ್ವರ್ಗಕ್ಕಿಂತಲೂ ಎತ್ತರದ–ಮೇರುವಿನಲ್ಲಿ. ಹೀಗಾಗಿಯೇ ಇದು ಭೂ–ಬದುಕಿಗೆ ಬರುವ ಆತ್ಮವು, ಈ ಭೂ–ಬದುಕಿನ ಸೀಮಿತತನದಿಂದ ಮುಕ್ತವಾಗಿ ಮತ್ತೆ ತನ್ನ ಮೂಲ ನೆಲೆಗೆ ಏರಲು (ಆರೋಹಣಗೈಯಲು), ಸ್ವಸ್ಥಾನಕ್ಕೆ ಮರಳಲು ಬೇಕಾದ ಉಪಕರಣವೇ ಈ ಭಾಷೆಯಾಗಿದೆ. ಅನಂತತೆಯ ವಲಯದಿಂದ ಜನನ–ಮರಣಗಳ ಮಧ್ಯದ

ಪ್ರಯಾಣಕ್ಕೆ ಮತ್ತು ನಿರ್ದಿಷ್ಟ ಗುರಿಯನ್ನು ತಲುಪಲು ಇರುವ ಪಥವೇ ಈ "ಭಾಷಾ ವ್ಯವಸ್ಥೆ"ಯಾಗಿದೆ.

ವಿಶ್ವ ಸತ್ಯದ ತ್ರೈಗುಣ ಶಕ್ತಿಯಿಂದಾಗಿ, ಸುಸ್ಪಷ್ಟತೆಯಲ್ಲಿ ಪ್ರಕಟಗೊಳ್ಳುವ ಬಲದಿಂದ ಮತ್ತು ಪೋಷಣಕ್ಕೆ ಸಹಕಾರಿಯಾದ ತೋಷದಿಂದ ಸರ್ವಸ್ವವೂ ಸೃಷ್ಟಿಗೊಂಡು, ಜಗತ್ತಿನ ವಿಚಾರಗಳ ವಿನ್ಯಾಸಗಳಾಗಿ ಪ್ರಕಾಶಗೊಳ್ಳುತ್ತವೆ. ಇದನ್ನೇ ಪ್ರಾಚೀನ ಕಾಲದಲ್ಲಿ ಪ್ರಾಜ್ಞರು 'ಮಹತ್' ಎಂದು ಕರೆದಿದ್ದರು.

ಸ್ವಯಂಭೂ ಆಗಿ ಅವತರಿಸಿದ(ಪ್ರಕಟಗೊಂಡ) ಮತ್ತು ಪರಿಪಕ್ವತೆಯಲ್ಲಿ ಸಂಯೋಜಿಸಲ್ಪಟ್ಟ ಜ್ಞಾನದ ತತ್ವಗಳಲ್ಲಿ(ನಿಯಮಗಳಲ್ಲಿ) ಇದು ತಾರ್ಕಿಕ ಅಂಶಗಳಲ್ಲಿ ಹೆಚ್ಚಾಗಿ ನಾನಾ ಅರ್ಥಗಳಲ್ಲಿ ವಿಕಸನಗೊಳ್ಳುತ್ತದೆಯಾದರೂ ಬುದ್ಧಿ–ಮನ(Intellectula mind)ದ ಆಧಾರದಲ್ಲಿ ಸುಯೋಜಿತ ತಳಹದಿಯನ್ನು ಹೊಂದಿದ ಪ್ರತಿನಿಧಿತ್ವಗಳಿಂದ ಕೂಡಿಕೊಂಡಿರುವದಿಲ್ಲ. ನವನವೀನವಾದ ಪರಿವೃತ್ತಿಗಳು(Variances) ಮತ್ತು ಕಲುಷಿತಗೊಂಡ ಸಂಸರ್ಗ, ಗೂಡಾರ್ಥದ ಕುಟಿಲತೆಗಳಿಂದ ರೂಪಣೆಗೊಂಡ ಸಾದೃಶ್ಯಗಳು, ಸಂವೇದನೆಗಳು, ರಾಗಗಳು, ಜೊತೆಗೆ ಸಂತೋಷದ ತೋಷದ ಹಿಂದೆ ಅಡಗಿರುವ ರೋಷ ಮತ್ತು ಅಲ್ಪ ಸಂತೃಪ್ತಿಗಳು ಎಲ್ಲವೂ ಕಲ್ಪನೆಯ ಮೂಲಕವೇ ನಿರ್ಮಿತಿಗೊಳ್ಳಲು, ಕಠಿಣ ಮಾರ್ಗದಲ್ಲಿಯೇ ಚಲಿಸಬೇಕಾಗುತ್ತದೆ.

ಆದ್ದರಿಂದ, ಬದಲಾವಣೆ, ನಾಶಗೊಳ್ಳುವಿಕೆ, ಸಾವು, ಪುನರ್ಜನ್ಮಗಳೆಲ್ಲವೂ ಜಗತ್ತಿನ ನಿಯತಿಯಾಗಿವೆ. ಇವೆಲ್ಲವೂ ಮನುಷ್ಯ ಲೋಕದಲ್ಲಿ ಅವತರಣಗೊಳ್ಳುವ ಮೂಲಕವೇ ಘಟಿಸುತ್ತವೆ. ಹೀಗಾಗಿಯೇ ಇವು ಮಾನವನ ಮನೋಲೋಕದಲ್ಲಿ ಮತ್ತು ನಿತ್ಯ ಜೀವನದ(ಲೌಕಿಕದ) ವ್ಯವಹರಣೆಗಳಲ್ಲಿ ಅವತರಣಗೊಳ್ಳುತ್ತಿವೆ. ಹೀಗಾಗಿ ಮಾನವನು ಬಳಸುತ್ತಿರುವ ಭಾಷೆಯು ಒಂದು ಉಗಮದ ಮೂಲವನ್ನು ಹೊಂದಿದ್ದು, ಅದು, ಶಾಶ್ವತವಾದ ನಾದ, ಶಬ್ದದ ವಿವಿಧತೆಗಳನ್ನು ಹೊಂದಿದ ಅಂಶವನ್ನು ಆಧರಿಸಿ, ಜೊತೆಗೆ, ಕೆಲವೊಂದು ವಿಶಿಷ್ಟ ತೆರನಾದ ನಾದಾತ್ಮಕ ತರಂಗಗಳಲ್ಲಿ ಅಭಿವೃದ್ದಿಗೊಳ್ಳುತ್ತ, ಪಕ್ವವಾಗುತ್ತ ಬಂದಿವೆ. ಇದು ವಿಕಸನದ ಹಂತದ ರಚನಾಕ್ರಮಾಂಕದಲ್ಲಿ ಪರಿಪಕ್ವದ ಸೌಷಮ್ಯತೆಯಲ್ಲಿ ಹಾಗೂ ಸಮರೂಪತೆಯ ಹಂತವನ್ನು ಹೊಂದಿದೆ. ಇಂತಹ ಅಪರೂಪದ ವ್ಯವಸ್ಥೆಯನ್ನು ಹೊಂದಿದ್ದ ಭಾಷಾ ವಿಶೇಷವನ್ನು "ದೇವಭಾಷೆ" ಅಥವಾ "ದಿವ್ಯಭಾಷೆ" ಎನ್ನುತ್ತಾರೆ. ಇದು ಸತ್ಯಯುಗ ಅಥವಾ ಕೃತಯುಗದಲ್ಲಿ ಪ್ರಚಲಿತದಲ್ಲಿತ್ತು.

ತದನಂತರದಲ್ಲಿ, ಭಾಷೆಯು ಬದಲಾವಣೆಯ ಗತಿಗೆ ಸಿಲುಕಿ, ಶಿಥಿಲತೆಗೆ ಸಿಲುಕಿ, ಕುಸಿಯುತ್ತ ಬಂದಿತು. ಅಪಾರ ಪ್ರಮಾಣದ ಭಾಷಾ ವೈವಿಧ್ಯತೆಗಳು, ಪ್ರಾಕೃತ ಭಾಷಾಸ್ವರೂಪಗಳು, ಮಾತೃಭಾಷಾ ವ್ಯವಸ್ಥೆಯ ಹಂತಗಳು ರೂಪುಗೊಂಡವು. ಆದರೆ ಪರಿಶುದ್ಧ ಜ್ಞಾನಕ್ಕೆ ಅತ್ಯಾವಶ್ಯವಿರುವ ಈ ನಿರ್ದಿಷ್ಟ ವ್ಯವಸ್ಥೆಯೇ ಜ್ಞಾನದ ಸೂತ್ರಕ್ಕೆ ಆಧಾರವೆಂದು ಅರಿತು, ಕೆಲವರು ಅದನ್ನು ಮೂಲಸ್ವರೂಪದಲ್ಲಿಯೇ ಉಳಿಸಲು, ರಕ್ಷಿಸಲು ಹೆಣಗಿದರು. ಆದರೂ ಅವರಿಗೆ ಅದನ್ನು ಸಮರ್ಥವಾಗಿ ರಕ್ಷಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಕಾಲಕಾಲಕ್ಕೆ ಪುನರ್–ಸಂಯೋಜನೆಗೊಳಿಸುತ್ತ, ಪುನರ್–ಸಂರಚನೆಗೊಳಿಸುತ್ತ, ಆಗಮಿಸುತ್ತಿರುವ ನವನವೀನ ಪ್ರವೃತ್ತಿಗಳ ಜೊತೆಗೆ ಸಂಧಾನವನ್ನೂ ಮಾಡಿಕೊಳ್ಳುತ್ತಲೇ, ಮೂಲ ಭಾಷೆಯ ಭಾಷಾಸ್ವರೂಪದ ವಿಶಿಷ್ಟತೆಯ ಅಸ್ತಿಪಂಜರವನ್ನಾದರೂ ಉಳಿಸಿಕೊಳ್ಳಲು ಯತ್ನಿಸಿದರು. ಅದರ ರಕ್ತ–ಮಾಂಸಗಳು, ಸ್ನಾಯುಗಳು, ಅದಕ್ಕಿಂತ ಮುಖ್ಯವಾಗಿ ಅವುಗಳಿಗಿದ್ದ ಬಲ ಮತ್ತು ಆತ್ಮಶಕ್ತಿಗಳು ಕಣ್ಮರೆಯಾಗುತ್ತಿದ್ದರೂ ಸಹಿತ, ಹಿಂಜರಿಯದೇ, ಪ್ರಯತ್ನಿಸಿದರು. ಈ ರೀತಿಯಾಗಿ ಹೆಣಗಿ, ಹೆಣಗಾಡಿ ಪುನರ್–ಸಂಯೋಜನೆಗೊಳಿಸಿದ ಭಾಷಾ ವ್ಯವಸ್ಥೆಗೆ ನಾವು ಈಗ ಕಾಣುತ್ತಿರುವ "ಸಂಸ್ಕೃತವೆಂದು" ವರ್ಗೀಕರಿಸಿ, ಉಳಿದ ಭಾಷಾಸಮೂಹಗಳನ್ನು "ಪ್ರಾಕೃತ" ವರ್ಗದಲ್ಲಿ ನಿರೂಪಿಸಿದ್ದೇವೆ.

ಈ ರೀತಿಯಲ್ಲಿ ಭಾಷೆಯ ಸಲುವಾಗಿ ಪ್ರಾಚೀನ ಭಾಷಾ ವ್ಯವಸ್ಥೆಯುಳ್ಳ ಅಂಶಗಳ ಅಸ್ತಿಪಂಜರವೊಂದನ್ನು ರೂಪಿಸಿಕೊಳ್ಳಲಾಯಿತು. ಆ ಪ್ರಾಚೀನ ಭಾಷೆಯ ಅಳಿದುಳಿದ ಕ್ರಿಯಾ ಧಾತುಗಳನ್ನು ಆಧರಿಸಿಯೇ ರಚಿತಗೊಳಿಸಲ್ಪಟ್ಟ ಈ ಶಬ್ದದ ಸಂರಚನೆಯಲ್ಲಿ, ವಿವಿಧ ನಿಯಮಗಳನ್ನು ಆಧರಿಸಿ, ಭಾಷೆಗೆ ಒಂದು ಹೊಸ ಆಯಾಮ ಕೊಡಲು ಯತ್ನಿಸಲಾಯಿತು. ಜಗತ್ತಿನ ಎಲ್ಲ ಭಾಷೆಗಳನ್ನು ತುಲನಾತ್ಮಕವಾಗಿ ಗಮನಿಸಿದಲ್ಲಿ, ಅದರಲ್ಲೂ ಪ್ರಾಚೀನತಮ ರಹಸ್ಯ ಭಾಷಾ ವ್ಯವಸ್ಥೆಗೆ ಸಮೀಪದಲ್ಲಿ ಸ್ಪಂದಿಸುತ್ತಿರುವ ಭಾಷೆಗಳೆಲ್ಲವನ್ನೂ ಆರ್ಯನ್ ಭಾಷೆಗಳೆಂದು ವರ್ಗೀಕರಿಸಲಾಯಿತು. ಈ ಎಲ್ಲ ಸೂತ್ರಗಳಲ್ಲಿ ಕ್ರಿಯಾಪದಗಳು, ಧಾತುಗಳು, ಈ ಕ್ರಿಯಾಧಾತುಗಳಿಂದ ಸಂಯೋಜಿಸಲ್ಪಟ್ಟಿರುವ ಶಬ್ದಗಳ ರಚನಾಕ್ರಮಾಂಕಗಳ ಸಂಗತಿಗಳು, ಮತ್ತು ಮಾನವನ ಬೌದ್ಧಿಕ ವಿಕಸನದ ಈ ಕ್ರೀಡಾಸದೃಶ ಚಟುವಟಿಕೆಗಳಲ್ಲಿ ಹಲವು ಪಥಗಳ ಮತ್ತು ಹಲವು ವಿವಿಧ ತೆರನಾದ ಉದ್ದೇಶಗಳ ಮೂಲಕ ಭಾಷೆಯ ಮೂಲಸ್ವರೂಪದ ಮಹತ್ವವನ್ನು ಕಾಣುತ್ತೇವೆ.

ಹೀಗಾಗಿ ಎಲ್ಲ ಶಬ್ದಗಳೂ ಈ ಮೂಲಕ್ರಿಯಾ ಧಾತುವಿನಿಂದಲೇ ರೂಪಣೆಗೊಳಿಸಲ್ಪಟ್ಟಿದ್ದು, ಜೊತೆಗೆ ಶುದ್ಧ ಸ್ವರಗಳನ್ನು, ಸಂಯುಕ್ತ ಸ್ವರಗಳನ್ನು

(ಸಂಯುಜ್ಯ ಸ್ವರಗಳು) ಜೋಡಿಸುವ ಮೂಲಕ, ಸ್ವರ–ವ್ಯಂಜನಗಳನ್ನು ನೇರವಾಗಿ ಅಥವಾ ರೂಪಾಂತರಗೊಳಿಸುವ ಮೂಲಕ ಸಂಕೀರ್ಣ ಶಬ್ದಗಳನ್ನು, ಸಂರಚನಾ ತತ್ವದಂತೆಯೇ ಸೃಷ್ಟಿಸಲಾಯಿತು. ಈ ತೆರನಾದ ಕ್ರಿಯೆಯಲ್ಲಿ, ತೀವ್ರವಾದ ವಿಚಲನೆಗೊಂಡ(Corrupted) ಅರ್ಥದಲ್ಲಾಗಲೀ, ಧ್ವನಿಯಲ್ಲಾಗಲೀ, ಈ ರೀತಿಯಲ್ಲಿ ವಿಚಲಿತಗೊಂಡ ಸಂಸ್ಕೃತವು ತ್ರೇತಾ, ದ್ವಾಪರ ಮತ್ತು ಕಲಿಯುಗದ ಅವಧಿಯಲ್ಲಿ ಚಾಲ್ತಿಗೊಳಿಸಲ್ಪಟ್ಟಿತು. ಈ ಮಧ್ಯದ ಅವಧಿಯಲ್ಲಿ ಅದನ್ನು ಮತ್ತೆ ಪರಿಶೋಧಿಸಿ ಪರಿಶುದ್ಧಗೊಳಿಸುವ ಕ್ರಿಯೆ ನಡೆದರೂ ಸಹಿತ, ಆ ರೀತಿಯಲ್ಲಿ ನಡೆದ ಪರಿಶೋಧನೆಯ ಫಲಿತಾಂಶಗಳನ್ನೂ ಸಹಿತ ವಿಚಲನೆಗೊಳಿಸಲಾಯಿತು. ಇಂತಹ ಏರಿಳಿತದ ಪ್ರಕ್ರಿಯೆಗೆ ಸಿಲುಕಿದ ಭಾಷೆಯು, ಎಷ್ಟೇ ರೂಪಾಂತರದ ಪ್ರಕ್ರಿಯೆಗೆ ಒಳಪಟ್ಟರೂ, ತನ್ನ ಆತ್ಮಗತವಾದ "ಅಸ್ಮಿತೆಯನ್ನು" ಮಾತ್ರ ಕಳೆದುಕೊಳ್ಳಲಿಲ್ಲ. ಭಾರತದಲ್ಲಿ ಸದ್ಯ ಪ್ರಚಲಿತದಲ್ಲಿರುವ ಎಲ್ಲ ಭಾಷೆಗಳ ಪರಿಸ್ಥಿತಿಯೂ ಇದೇ ತೆರನಾಗಿದೆ. ಆದರೆ ಆ ಭಾಷೆ ಎಷ್ಟೇ ಗ್ರಾಮ್ಯ/ಸ್ಥಳೀಯತೆಯನ್ನು ಹೊಂದಿದ್ದರೂ ಸಹಿತ. ಈ ತೆರನಾದ ಬಾಧೆಗೊಳಪಟ್ಟು, ಮತ್ತೆ ವಿಕಾರಕ್ಕೊಳಪಟ್ಟರೂ(Detrition and perversion), ಮೂಲಗುಣದಿಂದ ಪ್ರಾಕೃತಕ್ಕೆ, ಪ್ರಾಕೃತದಿಂದ ಪ್ರಕೃತಿಗೆ, ಮತ್ತೆ ಪ್ರಕೃತಿಯಿಂದ ಪ್ರಾಕೃತಕ್ಕೆ ಹೀಗೆ ರೂಪಾಂತರಗೊಳ್ಳುತ್ತಲೇ ಸಾಗಿತು. ಭಾಷಾ ಶುದ್ಧತೆಯ (ಭಾಷೆಯ ವಿಶೇಷ ಗುಣ–ಲಕ್ಷಣದ) ಕಡೆಯಿಂದ ಅಶುದ್ಧತೆಯ (ಸಂದಿಗ್ಧಾರ್ಥದ) ಕಡೆಗೆ, ಅವರೋಹಣಗೊಳ್ಳುತ್ತ ಬಂದಿತು. ಭಾರತೀಯ ಭಾಷೆಯ ಪರಮಾತಿ ಪರಮ ಪರಿಶುದ್ಧತೆಯ ವಿಶೇಷ ಗುಣಕ್ಕೆ, ಸಂಸ್ಕರಿಸಲ್ಪಟ್ಟ ಭಾಷಾ ವ್ಯವಸ್ಥೆಗೆ ಸಂಸ್ಕೃತವೆಂದು (ಸಂಸ್ಕರಿಸಲ್ಪಟ್ಟ) ಕರೆಯಲಾಯಿತೇ ವಿನಾ ಅದೊಂದು ವಿಶೇಷ ಭಾಷೆಯೆಂದಲ್ಲ.

ಹೀಗಾಗಿ ಪ್ರಕೃತಿಯಿಂದಲೇ ಸೃಷ್ಟಿಗೊಂಡು, ಪ್ರಕೃತಿಜನ್ಯ ಸತ್ಯಗಳನ್ನು ಧ್ವನಿಯ ಮೂಲಕ ಅಭಿವ್ಯಕ್ತಗೊಳಿಸುವ, ಜಗತ್ತಿನ–ಲೋಕದ– ಮತ್ತು ಬ್ರಹ್ಮಾಂಡದ ರಹಸ್ಯಗಳನ್ನು ಸಂಕೇತಿಸುತ್ತ ಸಂವಹನಾನುಕೂಲಿಯಾಗಿ ಸೃಷ್ಟಿಗೊಂಡಿತು. ಈ ತೆರನಾಗಿ ಇದ್ದ ಯಾವುದೇ ಭಾಷೆಯೂ ಸಂಸ್ಕೃತವೇ ಆಗಿರುತ್ತದೆ. ಇದು ಶಾಶ್ವತವನ್ನು ಪರಿಚಯಿಸುವ ಭಾಷೆ; ಹೀಗಾಗಿ ಭಾಷೆಯೂ ಶಾಶ್ವತವಾಗುತ್ತದೆ. ಇದರ ಅಭಿವ್ಯಕ್ತಿಯು ಸದಾ ಮರು–ಪರಿಶೋಧನೆಯಲ್ಲಿಯೇ, ಸಂಸ್ಕರಣಗೊಳ್ಳುತ್ತಲೇ, ಅಂತಹ ಕ್ರಿಯೆಗಳಲ್ಲಿಯೇ ಮುಂದುವರೆದರೆ ಮಾತ್ರ, ಸದ್ಯದ ಭಾಷೆಗಳನ್ನು ಅವುಗಳ ನೈಜ ಅರ್ಥದಲ್ಲಿ

ಪುನರ್–ರೂಪಿಸಬಹುದಾಗಿದೆ. ತದನಂತರದಲ್ಲಿ, ಒಂದು ಶುದ್ಧಾಂಗವಾದ (ಸಂಸ್ಕರಿತಗೊಂಡ) ಭಾಷೆಯೊಂದನ್ನು ಜ್ಞಾನದ ಸಂವಹನಕ್ಕೆ ಸಿದ್ಧಗೊಳಿಸಬೇಕಿದೆ.

ಋಕ್ಕಿನಲ್ಲಿ ನಿರೂಪಿತಗೊಂಡಿರುವ "ಯಜ್" ಎನ್ನುವ ಕ್ರಿಯಾಧಾತುವನ್ನು ಮತ್ತು ಅದರ ಮೂಲಕ ದ್ವಿತೀಯ ಹಂತದಲ್ಲಿ ರೂಪಿಸಲ್ಪಟ್ಟಿರುವ "ಯಜ್ಞ"ವನ್ನೂ ಹಾಗೂ ಇವೆರಡೂ ಮೂಲ ಕ್ರಿಯಾಧಾತುವಾದ "ಯ್" ವ್ಯಂಜನದಿಂದಲೇ ರೂಪುಗೊಂಡಿವೆ. "ಯ್" ದ ಅಸ್ಮಿತೆ ಬಲ ಮತ್ತು ಅದನ್ನು ಅನುಷ್ಠಾನಿಸುವಲ್ಲಿ ಇರುವ ದಯಾಸ್ವಭಾವ(ಸರಳತೆ)ಗಳೇ ಇದರ ಮೂಲಗುಣಗಳಾಗಿವೆ.

ಇದರ ಮೂಲಕವೇ ಕ್ರಿಯೆಯಲ್ಲಿ, ಚಲನೆಯಲ್ಲಿ ಸಾಕಾರಗೊಳ್ಳುತ್ತ ಮತ್ತು ಸಂಬಂಧ ಜೋಡಣೆಗೆ (ಸಂವಹನಕ್ಕೆ) ಇದು ಮುಖ್ಯ ಸಂಗತಿಯಾಗಿದೆ. ಮೂಲ ಕ್ರಿಯಾಪದಗಳಾದ ಯ, ಯಿ, ಯು ಇವುಗಳೇ ಕಾಲಕ್ರಮೇಣ ದೀರ್ಘಾಕ್ಷರಗಳಾಗಿ ಯಾ, ಯೀ ಮತ್ತು ಯೂ ಆಗಿವೆ. ಆದರೆ ಸಂಸ್ಕೃತದ ಪ್ರಾಚೀನ ರೂಪವಾದ ದೇವಭಾಷಾ ಅಥವಾ ಗೀರ್ವಾಣ ಭಾಷಾ ವ್ಯವಸ್ಥೆಯಲ್ಲಿ ಕೇವಲ ಹ್ರಸ್ವಸ್ವರಗಳು ಮತ್ತು ಅಕ್ಷರಗಳು ಇದ್ದವು. ಹೀಗಾಗಿ ಈ ಹ್ರಸ್ವ ಸ್ವರ–ಅಕ್ಷರಗಳನ್ನು ಶುದ್ಧ ರೂಪಗಳೆಂದು ಕರೆಯಲಾಗಿದೆ.

ಈ ಹಿನ್ನೆಲೆಯಲ್ಲಿ "ಯಜ್" ಎನ್ನುವ ಮೂಲ ಧಾತು ""ಯ" ಆಗಿದೆ. ಅಂದರೆ ಅತ್ಯಾವಶ್ಯವಾಗಿ ನಿರಾಕುಲತೆಯಿಂದ ಮತ್ತು ನಿಬಂಧನೆಗಳೊಂದಿಗೆ ಮುಂದುವರೆಯುವ ಕ್ರಿಯೆಯೆಂದೂ ಮತ್ತೆ ತನ್ನನ್ನು ತಾನು ನಿರಾಕುಲತೆಯಿಂದ – ನಿಶ್ಚಿಂತತೆಯಿಂದ ಮತ್ತು ನಿಬಂಧಣೆಗೊಳಪಟ್ಟು ಬಲದೊಂದಿಗೆ ಕರ್ಮಕ್ಕೆ ಎಳಸುವ (ಕ್ರಿಯೆ ತೊಡಗುವ) ಅಥವಾ ಅನುಷ್ಠಾನಿಸುವ ಎನ್ನುವ ಅರ್ಥದಲ್ಲಿ ಪ್ರಚಲಿತದಲ್ಲಿತ್ತು. ಜೊತೆಗೆ ಕ್ರಮಾಗತವಾದ ಅನ್ವಯದೊಂದಿಗೆ ಪ್ರಭುತ್ವ(ಪರಿಪಕ್ವತೆಯನ್ನು)ವನ್ನು – (ಜ್ಞಾನದ ವಿಷಯದಲ್ಲಾಗಲೀ ಅಥವಾ ವ್ಯಕ್ತಿಗತವಾಗಲೀ ಯಾವುದೇ ವಿಷಯವಿದ್ದರೂ) – ಪಡೆಯಲು ಇರುವ ವ್ಯವಸ್ಥೆ ಎನ್ನುವ ಅರ್ಥವಿದೆ. ಜೊತೆಜೊತೆಗೆ ಪ್ರೇಮಪೂರ್ವಕವಾಗಿ ಪರಿಣಾಮಕಾರಿಯಾಗಿ ಸಂಬಂಧವನ್ನು ರೂಪಿಸುವ ಎನ್ನುವ ಅರ್ಥವೂ ಇದೆ. ಅದಕ್ಕಿಂತ ಹೆಚ್ಚಾಗಿ ಸೂಕ್ತ ರೂಪದಲ್ಲಿ ಅಥವಾ ಅಭಿವ್ಯಕ್ತಗೊಳ್ಳುವಲ್ಲಿ ಸುಸ್ಪಷ್ಟತೆಯಿಂದ ಕೂಡಿರುವ ಎನ್ನುವ ಅರ್ಥವೂ ಇದೆ. ಪ್ರಪ್ರಥಮವಾಗಿ ರೂಪಣೆಗೊಂಡ ಅರಿವು, ಅದರ ಮೂಲಸ್ವರೂಪವನ್ನು,ಮತ್ತು ವರ್ಣವನ್ನು ಕಳೆದುಕೊಂಡು, ಮತ್ತೆ ದೀರ್ಘರೂಪದಲ್ಲಿ ಅಭಿವ್ಯಕ್ತಗೊಂಡ "ಯಾ", "ಯಕ್ಷ್", ಮತ್ತೊಂದು ಅರ್ಥದಲ್ಲಿ "ಯಮ್" ಎಂದೆಲ್ಲಾ ರೂಪ ಪಡೆಯಿತು.

ಎರಡನೆಯದಾಗಿ, "ಯಲ್", ಮತ್ತು "ಯಶ್" ಹಂತದಲ್ಲಿ ಹಾಗೂ ಮೂರನೇ ಹಂತದಲ್ಲಿ "ಯಜ್", ಮತ್ತು "ಯಮ್", ಯಂತ್ರ್"ದಲ್ಲಿ ರೂಪಾಂತರಗೊಂಡಿತು. ನಾಲ್ಕನೆಯದಾಗಿ "ಯಜ್", ಮತ್ತು "ಯಾಚ್" ಎನ್ನುವ ರೂಪದಲ್ಲಿ ಪ್ರಕಟಗೊಂಡು ಮೂಲ "ಯಚ್"ಎಂದರೆ, "ಕೊಡುವದು" ಎಂದರ್ಥವಿದೆ. ಈ ಹಂತದಲ್ಲಿ "ಯಮ್ಮ್" ಹೊರತುಪಡಿಸಿ ಕೆಲವೊಂದು ಸಂಯೋಗ ರೂಪಗಳಲ್ಲಿ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡವು. ಐದನೇಯ "ಯಮ್" ಎಂದರೆ "ತೋರಿಸು", "ಪ್ರಸ್ತುತ ಪಡಿಸು" ಎಂದರ್ಥವಿದೆ. ಈ "ಯಚ್"ದ ಜೊತೆಗೆ , ಮತ್ತೆ ಕಣ್ಮರೆಯಾದ ರೂಪಗಳು ಎಂದರೆ "ಯಲ್" ಆಗಿದೆ. ಈ "ಯಲ್" ಎಂದರೆ – ಬಯಸು, ಪ್ರೀತಿಸು, ಅಭಿಲಾಷೆ, ಇಚ್ಛೆ ಎನ್ನುವ ಅರ್ಥವಿದೆ. ಗ್ರೀಕ್ ಭಾಷೆಯಲ್ಲಿ "ಇಯಲ್ಲೋ" (Iallo) ಎಂದೆ ಬಳಕೆಯಲ್ಲಿದೆ. ಇದರ ಅರ್ಥವೂ ಸಹಿತ ಬಯಸು, ಪ್ರೀತಿಸು.. ಎಂದೆ ಇದೆ. ಈಗ ನಮಗೆ ಲಭ್ಯವಿರುವ "ಯಶಃ" ಎನ್ನುವದು ವಿಶೇಷಣದ ಅರ್ಥವಾಗಿದ್ದು, ವಿಶೇಷಣದಲ್ಲಿ ಬಳಸಲ್ಪಡುವ ಪ್ರೀತಿಯ, ಪ್ರೇಮದ, ಆಕರ್ಷಣೀಯ ಎಂದೂ ಜೊತೆಗೆ ನಾಮಪದದ ರೂಪದಲ್ಲಿ ಪ್ರೀತಿಯ, ಅನುಸರಣವೆಂದು ಬಳಕೆಯಲ್ಲಿತ್ತು. ಕೆಲವೊಮ್ಮೊಮ್ಮೆ ಸೌಂದರ್ಯ, ಗುರಿ, ಕೀರ್ತಿ (ಪ್ರಶಂಸೆ) ಅಥವಾ ಪ್ರೇಮ–ಅನುಗ್ರಹ ಎನ್ನುವ ಅರ್ಥದಲ್ಲಿಯೂ ಬಳಕೆಯಲ್ಲಿತ್ತು.

ಇದೆಲ್ಲವೂ ಭಾಷೆಯು ಅನುಸರಿಸಿದ ಪದ್ಧತಿಯ ಸಂಕ್ಷಿಪ್ತ ವಿವರಣೆ ಮಾತ್ರ ಆಗಿದೆ. ಅದು ಪಡೆದುಕೊಂಡಿರುವ ವಿಭಿನ್ನ ಸ್ವರೂಪಗಳನ್ನು ಮತ್ತು ಅದು ಪಡೆದುಕೊಂಡಿರುವ ಛಾಯಾರೂಪಗಳನ್ನು, ಸಂಶಯಗಳು ನಿರ್ಮಾಣ–ಗೊಳ್ಳುತ್ತಿರುವ ಸಂಗತಿಗಳನ್ನು ಮತ್ತು ಈಗಾಗಲೇ ಲೋಪಗೊಂಡಿರುವ ಶಬ್ದಗಳ ಬಗೆಗೆ ಈಗ ಅಧ್ಯಯನ ನಡೆಬೇಕಾಗಿದೆ.

"ಯಜ್" ಕ್ರಿಯಾಪದದಲ್ಲಿ ಪ್ರಧಾನಾಂಶವಾಗಿ ಇರುವ "ಯ್" ವ್ಯಂಜನದ ಶಕ್ತಿಯು ಅರ್ಥ ನಿರ್ಧರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಸಹಜ ಪ್ರಕೃತಿಸ್ವಭಾವವೆಂದರೆ – ತ್ವರಿತತೆ, (ಶೀಘ್ರತೆ), ಅಸಂದಿಗ್ಧತೆ, ಭಾಸುರತ್ವದ ಮತ್ತು ಅವಿಶ್ರಾಂತ (ಸದಾ ಕಾರ್ಯ ಪ್ರವೃತ್ತತೆ) ಎಂದು ಅರ್ಥವೈಶಾಲ್ಯವಿದೆ. ಹೀಗಾಗಿ ಇದು ಘಟನಾತ್ಮಕ ಮತ್ತು ಗಹನತ್ವದ ಬಲವನ್ನು (Frequentative and Intensive force – ಅವಧಾನತ್ವ) ಹೊಂದಿದೆ. ಅಂದರೆ ಇದು, ನಿರಂತರವಾಗಿ (ಅಭ್ಯಸ್ಥಗೊಂಡ), ಯಥಾರೀತಿ ಮತ್ತು ಉತ್ಕಟತೆಯ ಹಂತದಲ್ಲಿ ಪ್ರೀತಿಸುವದಕ್ಕಾಗಿ,

ಆರಾಧಿಸುವದಕ್ಕಾಗಿ ಹಾಗೂ ಆದರಿಸುವ (ಗೌರವಿಸುವ) ಸಲುವಾಗಿ ಎನ್ನುವ ಅರ್ಥವ್ಯಾಪ್ತಿ ಹೊಂದಿದೆ. ಹೀಗಾಗಿಯೇ ಇದು, ಸಮುಚಿತವಾಗಿ, ಮುಕ್ತವಾಗಿ ಕೊಡುವ, ಅದೂ ಸಂಪೂರ್ಣವಾಗಿ ನಿರಂತರವಾಗಿ ಕೊಡುವ ಎನ್ನುವ ಭಾವದಲ್ಲಿದೆ. ಈ ಎಲ್ಲ ಛಾಯಾರೂಪಗಳ ಆವರಣದಲ್ಲಿ ಬಲ/ಸಮರ್ಪಣೆ ಎನ್ನುವ ಅರ್ಥವ್ಯಾಪ್ತಿಯನ್ನು ಪಡೆಯುತ್ತ ಬಂದಿತು. ಆದ್ದರಿಂದಲೇ ಪರಿಪೂರ್ಣವಾಗಿ ಅರ್ಥೈಸಿಕೊಳ್ಳುವ, ನಿರಂತರವಾಗಿ ಹೊಂದುವ, ಪದೇ ಪದೇ ಪುನರಾವೃತ್ತಿಗೊಳಿಸುವ ಮೂಲಕ ಆ ಕ್ರಿಯೆ/ಕರ್ಮದ ಮೇಲೆ ಪ್ರಭುತ್ವವನ್ನು ಸಂಪಾದಿಸುವ ಅರ್ಥವ್ಯಾಪ್ತಿಯನ್ನು ನಿರ್ಮಾಣಗೊಳಿಸಿತು.

**ಯಜ್ಞ ಎಂದರೆ ವಿಷ್ಣು! ಸತ್ಯ ಯುಗದ ವಿಷ್ಣುವಿನ ಹೆಸರು ಯಜ್ಞ!!**

ಇನ್ನು "ಯತ್" ಎಂದರೆ ಉದ್ಯಮಭೂತ (ಪದಾರ್ಥೋದ್ಯಮಭೂತ್– Endeavour) ಎಂದು ಅರ್ಥವಿದೆ. ಆದರೆ "ಯಜ್" ಎನ್ನುವದು ಎಂದಿಗೂ ಈ ಪದಾರ್ಥೋದ್ಯಮ ಭೂತತ್ವವನ್ನು ಒಪ್ಪುವದಿಲ್ಲ; ಏಕೆಂದರೆ ಇದು "ಸಂಶಯಗಳನ್ನು ಸ್ಪಷ್ಟವಾಗಿ ನಿವಾರಿಸಿಕೊಂಡ" "ಅತ್ಯಂತ ಸುನಿಶ್ಚಿತವಾದ", "ವಿಜಯಶಾಲಿಯಾದ" ಮತ್ತು ನಿಖರವಾಗಿ ಪ್ರಭುತ್ವವನ್ನು ಹೊಂದಿದ ಅಥವಾ ಅಧಿಕಾರತ್ವವನ್ನು ಹೊಂದಿದ ಹಾಗೂ ಫಲಿತಾಂಶಕ್ಕಾಗಿ ಇರುವ ಕರ್ಮ– ಸಿದ್ಧಾಂತವನ್ನು ಹೊಂದಿರುತ್ತದೆ. ಹೀಗಾಗಿ ಇದರ ಅರ್ಥವ್ಯಾಪ್ತಿಯು–ಆಳ್ವಿಕೆ ನಡೆಸು, ಪ್ರಶಾಸನಗೊಳಿಸು ಮತ್ತು ಅಧಿಕಾರತ್ವವನ್ನು ಹೊಂದು ಎನ್ನುವಂತೆ ವಿಸ್ತಾರವಾಗಿ ಬಳಕೆಗೆ ಬಂದಿತು.

ಇವೆಲ್ಲ ಹಿನ್ನಲೆಯಲ್ಲಿ ನಿರ್ಧಾರಿತವಾಗುವ ಸಂಗತಿ ಎಂದರೆ 'ಯಜ್ಞ' ಎಂದರೆ 'ವಿಷ್ಣು'. ಈ ವಿಷ್ಣುವು ಬ್ರಹ್ಮಾಂಶವನ್ನು ಪ್ರಶಾಸನಕ್ಕೆ ಒಳಪಡಿಸುವ ಮಹಾನ್–ಬಲಶಾಲಿಯಾಗಿದ್ದಾನೆ. ಇವನೇ ಮಾನವ ವರ್ಗದ ಕ್ರಿಯೆಗಳಿಗೆ/ ಕರ್ಮಗಳಿಗೆ, ದೇಹಕ್ಕೆ, ಚಿಂತನಕ್ಕೆ ಒಡೆಯನಾಗಿದ್ದು, ಈ ಪರಮೋಚ್ಚ ದೇವತೆಯು, ಮಾನವನ ಊರ್ಧ್ವಾತಿ ಊರ್ಧ್ವ ಗಮನಕ್ಕೆ ಅಂದರೆ ಆ ತುರೀಯಕ್ಕೆ ಮಾರ್ಗದರ್ಶಿಯಾಗಿದ್ದಾನೆ. ಅವನಿರುವ ಸ್ಥಾನಕ್ಕೆ 'ಪರಾರ್ಧ' ಅಥವಾ 'ಸಚ್ಚಿದಾನಂದ' ಎಂದು ನಿರ್ಧರಣೆ ಇದೆ.

(ಸಶೇಷ)

## ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

# "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

9

ಆದರೆ ಶ್ರೀ ಅರವಿಂದರ ಇತ್ತಿತ್ತಲಾಗಿನ ಕರ್ತವ್ಯಗಳ ಭಾವನೆಯಲ್ಲಿ ರಾಜಕಾರಣಕ್ಕಿಂತಲೂ ಧರ್ಮದ ಪ್ರಮಾಣವು ಬಹಳ ಹೆಚ್ಚಿತ್ತು. ರಾಜಕಾರಣವನ್ನು ಧಾರ್ಮಿಕ ದೃಷ್ಟಿಯಿಂದ ನಡೆಸಬೇಕೆಂದು ಮನಗಂಡು ಅವರು ಹಾಗೆಯೇ ಉಪದೇಶಿಸಹತ್ತಿದರು. ಸೆರೆಮನೆಯಿಂದ ಹೊರಗೆ ಬಂದ ಕೂಡಲೇ **ಉತ್ತರಪಾಡಾದಲ್ಲಿ**[1] ನೀಡಿದ ಉಪನ್ಯಾಸದದಲ್ಲಿ ಶ್ರೀ ಅರವಿಂದರು ತಮಗೆ ಕಾರಾಗೃಹದಲ್ಲಿ ಶ್ರೀ ವಾಸುದೇವನ ದರ್ಶನವಾಯಿತೆಂದೂ, ಆತನು ತಮಗೊಂದು ಆದೇಶವಿತ್ತನೆಂದೂ ಪ್ರಕಟಿಸಿದರು. ಕೆಲವು ನಾಸ್ತಿಕರಿಗೆ ಇದೊಂದು ಟೀಕೆಯ ವಿಷಯವೇ ಆಯಿತು.

ಯಾವುದೊಂದು ವಿಷಯದ ಮೇಲೆ ಅಭಿಪ್ರಾಯವನ್ನು ಕೊಡುವವರು ಆ ವಿಷಯದಲ್ಲಿ ತಜ್ಞರಿರಬೇಕಾಗುತ್ತದೆ. ಗಣಿತವರಿಯದ ಮೂಢನು ಆ ಶಾಸ್ತ್ರದ ಮೇಲೆ **ಮತ**[2] ಕೊಟ್ಟರೆ ಅದಕ್ಕೆ ಬೆಲೆ ಎಷ್ಟು ಬಂದೀತು? ಧಾರ್ಮಿಕ ವಿಚಾರಗಳ ಮೇಲೆ ಮತವನ್ನು ಕೊಡಬೇಕಾದರೆ ಯೋಗ್ಯತೆ ಬೇಕಾಗುತ್ತದೆ. ಶ್ರೀ ಅರವಿಂದರವರಿಗೆ ಭಗವಾನ್ ವಾಸುದೇವನ ದರ್ಶನವಾದುದರ ಮೇಲೆ ಕೆಲ ಜನರು ಟೀಕೆ ಮಾಡಹತ್ತಿದರು. ಆದರೆ ಆ ಟೀಕೆಗಳಲ್ಲಿ ಹುರುಳು ಇದ್ದಿಲ್ಲ. ಶ್ರೀ ಅರವಿಂದರಿಗೆ ಪರಮಾತ್ಮನು ಪ್ರತ್ಯಕ್ಷವಾಗಿದ್ದರೆ ಆಶ್ಚರ್ಯವೇನು? ಯಾಕೆಂದರೆ 1905 ರಿಂದಲೂ ಅವರು ಈ **"ಸಾಧನಾ ಮಾರ್ಗ"**[3]ದಲ್ಲಿ ಇದ್ದರು. ಅವರ ಪತ್ನಿಯಾದ ಮೃಣಾಲಿನಿ ದೇವಿಗೆ 1905 ರಲ್ಲಿ ಬರೆದ ಪತ್ರದಲ್ಲಿ, ಅವರು ತಮಗೆ ದೇವರನ್ನು ಕಾಣಬೇಕೆಂಬ ಹುಚ್ಚು ಹಿಡಿದಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ದೇವರನ್ನು ಕಂಡುಕೊಳ್ಳದೇ ಬಿಡಲಿಕ್ಕಲ್ಲಿವೆಂಬ ಇವರ ಹಟವು 1909ರ ವರೆಗೂ ಅಂದರೆ 4–5 ವರ್ಷಗಳವರೆಗೆ ಸತತವೂ ಇದ್ದು, ಅದರಲ್ಲಿ ಅವರಿಗೆ ಯಶಸ್ಸು ಸಿಕ್ಕಿದ್ದರೆ ಅಚ್ಚರಿ ಯಾವುದು? ಮನಸ್ಸು ಕಾಮಕ್ರೋಧಾದಿ ವಿಷಯಗಳಿಂದ ದೂಷಿತವಾಗಿದ್ದಾಗ ಅದಕ್ಕೆ ಪರಮೇಶ್ವರೀ ಸಂದೇಶವನ್ನು ಕಂಡುಹಿಡಿಯುವ ಸಾಮರ್ಥ್ಯವು ಇರುವದಿಲ್ಲ. ದೇವದರ್ಶನವಾಗುವದಿಲ್ಲ. ಕನ್ನಡಿಯ ಮೇಲಿನ ಧೂಳು ತೆಗೆಯದ ಹೊರ್ತು ಅದರಲ್ಲಿ ಪ್ರತಿಬಿಂಬವು ಕಾಣುವದಿಲ್ಲ. ಸರೋವರವು ಅಲ್ಲೋಲ ಕಲ್ಲೋಲವಾಗಿ, ನೀರು ಕದಡಿ ಕಶ್ಮಲವಾಗಿದ್ದರೆ ತಲವು ಕಾಣುವ ಬಗೆ ಹೇಗೆ? ಕೊಳವು

ಶಾಂತವಾಗಿದ್ದಾಗ ಅದರ ತಳವು ಉತ್ತಮ ರೀತಿಯಿಂದ ತೋರುವದು. ಮನಸ್ಸಾಗರವು ನಾನಾತರದ ವಿಚಾರಗಳ ಆಘಾತಗಳಿಂದ ಅಲ್ಲೋಲ ಕಲ್ಲೋಲವಾಗುತ್ತಿರಲು ಈಶ ದರುಶನವಾಗುವ ಸಂಭವವೆಂತು?

ಈ ವಿಷಯಕ್ಕೆ "Yogic Sadhana" ಎಂಬ ಚಿಕ್ಕ ಪುಸ್ತಕದಲ್ಲಿ ಒಬ್ಬ ಯೋಗಿಯು ಅನುಭವದಿಂದ ಬರೆದಿರುವದೇನೆಂದರೆ:– "*ಪ್ರಾಣಿಗಳು ತಮ್ಮ ಮನಸ್ಸಿನಂತೆ ತಿಳಿದು ವರ್ತಿಸುತ್ತವೆ. ಭಾವಿಸುತ್ತವೆ, ಮತ್ತು ಪ್ರಾಣಿಗಳು ತಮ್ಮದೇ ಆದ ಚಿತ್ರ, ರೂಪ, ಧ್ವನಿ, ವಾಸನೆ, ಸ್ಪರ್ಶ, ರುಚಿ ಇತ್ಯಾದಿಗಳೊಂದಿಗೆ ಸಂಬಂಧ ಹೊಂದಿರದ ವಿಚಾರಗಳನ್ನು ರೂಪಿಸಲು ಸಾಧ್ಯವಾಗುವುದಿಲ್ಲ. ಅದಕ್ಕಾಗಿಯೇ ಪ್ರಾಣಿಗಳಲ್ಲಿ ಬುದ್ಧಿಯು ಸುಪ್ತವಾಗಿದೆ, ಅದು ಅಲ್ಲಿ ಮುಸುಕಿನ ಹಿಂದೆ ಕಾರ್ಯನಿರ್ವಹಿಸುತ್ತದೆ. "ನಾನು ಅದನ್ನು ನೋಡಿದೆ", "ನಾನು ಅದನ್ನು ಕೇಳಿದೆ", ಆದ್ದರಿಂದ ಇದು ನಿಜ, ಎನ್ನುವ ಅಭಿವ್ಯಕ್ತಿಗಳು ಮಾನವ ಕುಲದ ತಾರ್ಕಿಕ ಕ್ರಿಯೆಯಾಗಿದೆ. ಅದಕ್ಕಾಗಿಯೇ ಬುದ್ಧಿಯನ್ನು ಸರಿಯಾಗಿ ಅಭಿವೃದ್ಧಿಪಡಿಸದ ಜನರು, ತಾವು ನೋಡಿದ್ದಕ್ಕೆ ಅಥವಾ ಪ್ರತ್ಯಕ್ಷಕ್ಕೆ ಮಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ, "ನಾನು ಅದನ್ನು ಮುದ್ರಣದಲ್ಲಿ ನೋಡಿದ್ದೇನೆ" ಎಂದು ಕೇವಲ ಸಾಕ್ಷರ ವ್ಯಕ್ತಿಯಿಂದ ಮಾತ್ರ ಅಭಿವ್ಯಕ್ತಗೊಳಿಸುತ್ತಾನೆ ಮತ್ತು ಈ ಮೂಲಕ ಸಂವಾದವನ್ನು ಮುಕ್ತಾಯಗೊಳಿಸಲು ಅಥವಾ ಮುಚ್ಚಿಡಲು ಸಾಧ್ಯವೆಂದು ಭಾವಿಸುತ್ತಾರೆ... ಆದರೆ, ಅದು (ಮನಸ್ಸು) ಕಾರ್ಯನಿರತವಾಗಿರುವಾಗ, ಜ್ಞಾನದ ರೂಪಣೆಯು ಅಸಾಧ್ಯ. ಆಗ ನೀವು ಜ್ಞಾನದ ತುಣುಕುಗಳನ್ನು ಮಾತ್ರ ಪಡೆಯಬಹುದು. ಅದು ನಿಜ, ಮತ್ತು ಯೋಗಿಗೆ ಇದನ್ನು ಅರಿತುಕೊಳ್ಳುವದು ಸಾಕಷ್ಟು ಅವಶ್ಯಕವಾಗಿದೆ... ಅದಕ್ಕಾಗಿಯೇ ವೇದಾಂತವು ಯಾವಾಗಲೂ ಸಮಾಧಿ ಸ್ಥಿತಿಯ ಹಂತದ ಅನುಸಂಧಾನಕ್ಕೇ ಹೆಚ್ಚಿನ ಮಹತ್ವವನ್ನು ನೀಡುತ್ತದೆ.*"

ಶ್ರೀ ಅರವಿಂದರು ಬಡೋದಾ ಸಂಸ್ಥಾನದಿಂದ ಹೊರಬಿದ್ದ ಬಳಿಕ ಇಂತಹ ವಿಷಯಜಾಲದಿಂದ ಮುಕ್ತರಾಗಿದ್ದರು. ಯುಕ್ತಾಹಾರ ವಿಹಾರಗಳಿಂದ ಸಾಧನೆಯನ್ನು ನಡೆಸಿದ್ದರು. ಬುದ್ಧಿಯನ್ನು ಶುದ್ಧೀಕರಿಸಿಕೊಳ್ಳಲು ಪರಿಶ್ರಮಪಡುತ್ತಿದ್ದರು. ಕಾರಾಗೃಹದಲ್ಲಿ ಹೋದ ಬಳಿಕ ಅನಾಯಾಸವಾಗಿ ಸಿಕ್ಕ ಏಕಾಂತದ ಉಪಯೋಗವನ್ನು ತಮ್ಮ ಇಷ್ಟದಂತೆ ಮಾಡಿಕೊಳ್ಳಹತ್ತಿದರು. ಇದರಿಂದ ಅವರ ಶಕ್ತಿಯು ವೃದ್ಧಿಂಗತವಾಗಿ ಇಷ್ಟ ಸಾಧ್ಯವಾಗಿದ್ದರೆ ಅಜ್ಞಾನೀ ಜನರು ಅದಕ್ಕೆ ಹೆಸರಿಡುವ ಕಾರಣವೇನು? ಶ್ರೀ ಅರವಿಂದರು ತಮ್ಮ ಪತ್ನಿಗೆ ಬರೆದ ಮತ್ತೊಂದು ಪತ್ರದಲ್ಲಿ ಹೇಳಿರುವದೇನೆಂದರೆ, "ಶಾಸ್ತ್ರಗಳಲ್ಲಿ ಹೇಳಿದ ಮಾರ್ಗದಂತೆ

ನಡೆದಿರಲು ಹಾದಿಯಲ್ಲಿ ಹತ್ತುವ ಕೆಲವು ಸಂಗತಿಗಳ ಅನುಬವವು ನನಗೆ ಬರಹತ್ತಿದೆ; ಇದೇ ಕ್ರಮವನ್ನು ಮುಂದೆ ನಡೆಸಿದರೆ ನನಗೆ ಸಿದ್ಧಿಯು ಸಿಗಲಿಕ್ಕೇ ಬೇಕು". ಶುದ್ಧ ಮನಸ್ಸಿನಿಂದ ಜಗತ್ತಿನ ಗೂಢರಹಸ್ಯವನ್ನು ತಿಳಿಯಲಿಕ್ಕೆ ಬರುತ್ತದೆ. ಅದೇ "ಯೋಗಿಕ ಸಾಧನ" ವೆಂಬ ಪುಸ್ತಕದಲ್ಲಿ ಸಹ ಈ ವಿಷಯಕ್ಕೆ ಬರೆದಿರುವದೇನೆಂದರೆ, "ಯಾವಾಗ ಯೋಗಿಕ ಶಕ್ತಿಯು ಪ್ರಗತಿಯಾಗುತ್ತದೆಯೋ .. ಆಗ ಪ್ರತಿಕ್ಷಣವು ಆ ಸಾಕ್ಷಿಯು ನಿಮಗೆ ಲಭ್ಯವಾಗುತ್ತದೆ. ಮಾನವನು ತನ್ನ ಬುದ್ಧಿಯ ಮೂಲಕವೇ ಇಲ್ಲಿಯವರೆಗೂ ಕಾಣದೇ ಇದ್ದ ಮತ್ತು ಅರಿವಿಗೆ ಬರದೇ ಇದ್ದ ವಿಷಯದ ಕುರಿತ ಆ ಸತ್ಯವನ್ನು ದರ್ಶಿಸಲು ಸಾಧ್ಯವಾಗುತ್ತದೆ".

ಸತ್ಯಜ್ಞಾನವು ಪೂರ್ಣಶುದ್ಧ ಮನಸ್ಸಿಗೇ ಆಗುತ್ತದೆ. ಪರಮೇಶ್ವರನ ಆದೇಶವನ್ನು ತಿಳಿಯುವ ಸಾಮರ್ಥ್ಯವೂ ಇಂತಹ ವ್ಯಕಿಗೇ ಇರುತ್ತದೆ. ಆ "ಯೋಗಿಕ ಸಾಧನ" ಮತ್ತೊಂದು ಕಡೆಯಲ್ಲಿ ಹೇಳಿರುವದೇನೆಂದರೆ, "ಕೇವಲ ಶುದ್ಧಾತ್ಮನಾದವನು ಮಾತ್ರ ಈ ರೀತಿಯ ಆದೇಶಗಳನ್ನು ಸ್ವೀಕರಿಸಬಲ್ಲ. ಪರಿಶುದ್ಧವಿಲ್ಲದ ಯೋಗದ ಸಾಧನೆಯಲ್ಲಿ ಕೇವಲ ಕಲ್ಪನೆಗಳು, ಸಂವೇದನೆಗಳು ಅಥವಾ ವಾಂಛೆ ಇಲ್ಲವೇ ಬಯಕೆಗಳನ್ನು ಕುರಿತಾಗಿಯೇ 'ಆದೇಶ'ಗಳನ್ನು ನಿರೀಕ್ಷಿಸುತ್ತಿರುತ್ತವೆ."

ಪರಮೇಶ್ವರನ ಆದೇಶ ಗ್ರಹಣ ಮಾಡಿಕೊಂಡು ಕಾರಾಗೃಹದಿಂದ ಹೊರಬಿದ್ದ ಶ್ರೀ ಅರವಿಂದರ ಯೋಗಿಗಳು ನೂತನ ಉತ್ಸಾಹದಿಂದ ಕಾರ್ಯಕ್ಕೆ ತೊಡಗಿಕೊಂಡರು. ಲೋಕಮಾನ್ಯಾದಿಗಳನ್ನು ಒಂದಿಲ್ಲೊಂದು ತರದಿಂದ ಭರತ ಖಂಡದ ರಂಗಭೂಮಿಯ ಮೇಲಿಂದ ಅದೃಶ್ಯ ಮಾಡಿ ಕೃತಾರ್ಥವಾದ ಸರಕಾರವು ಶ್ರೀ ಅರವಿಂದ ಯೋಗಿಗಳ ಮೇಲೆ ಒಗೆದ ಬಲೆ ತಪ್ಪಿದ್ದನ್ನು ಕಂಡು, ಬಹಳ ವಿಷಾದಪಟ್ಟಿರಬಹುದು. ಶ್ರೀ ಅರವಿಂದ ಯೊಗಿಗಳು ರಾಷ್ಟ್ರಕಾರ್ಯವನ್ನು ಆಜನ್ಮಪರ್ಯಂತರ ನಡೆಸುವದನ್ನು ನಿಶ್ಚಯಿಸಿದಂತೆ ಸರಕಾರದವರು ರಾಷ್ಟ್ರಕಾರ್ಯದಲ್ಲಿ ಕಡೆತನಕವೂ **ಕಲ್ಲು ಹಾಕುವ**[4]**ದ**ನ್ನು ಗೊತ್ತು ಮಾಡಿದ್ದರು. ಆರೋಪದಿಂದ ಮುಕ್ತರಾಗಿ ಪುಟಕೊಟ್ಟ ಬಂಗಾರದಂತೆ, ಕೆತ್ತಿದ ವಜ್ರದ ಹಾಗೆ ಪ್ರಕರ್ಷಿತ ತೇಜಸುಳ್ಳವರಾಗಿ ಶ್ರೀ ಅರವಿಂದ ಯೋಗಿಗಳು ಮತ್ತೆ ಕಾರ್ಯಕ್ಕೆ ತೊಡಗಿದ್ದನ್ನು ಕಂಡು ಅಧಿಕಾರಿಗಳಿಗೆ ಹೊಟ್ಟೆಕಡಿತವು ಎದ್ದಿತು. ಏನಾದರೊಂದು ನೆವವನ್ನು ಹುಡುಕುತ್ತಿದ್ದ ಅಧಿಕಾರಿಗಳಿಗೆ ಅದು ಸಿಗಲಿಕ್ಕೂ ತಡವಾಗಲಿಲ್ಲ. 'ಕರ್ಮಯೋಗಿನ್' 1909ರ ಡಿಸೆಂಬರ ತಿಂಗಳ 5ನೇ ತಾರೀಕಿನ ಸಂಚಿಕೆಯಲ್ಲಿ ಬರೆದ ಲೇಖವು ಆಕ್ಷೇಪಾರ್ಹವಾಗಿದೆ ಸಂಶಯ ತಕ್ಕೊಂಡು, ಶ್ರೀ ಅರವಿಂದ ಯೋಗಿಗಳನ್ನು ಹಿಡಿಯುವದಕ್ಕಾಗಿ 1910 ಮಾರ್ಚ ತಿಂಗಳಲ್ಲಿ ವಾರಂಟು ಹುಟ್ಟಿತು.

**ಮಂದಪಕ್ಷದವರು** ಸರಕಾರದ ಪಕ್ಷದಲ್ಲಿ ಸೇರಿಕೊಂಡಿದ್ದರಿಂದಲೂ, ಮುಸಲ್ಮಾನರು ರಾಜಕಾರಣದಲ್ಲಿ ಅಷ್ಟೊಂದು ಮನಸ್ಸು ಹಾಕದೇ ಇದ್ದುದರಿಂದಲೂ, ಸಾಮಾನ್ಯ ಜನರು ಧೈರ್ಯದಿಂದ ಕಡೆತನಕ ನಿಲ್ಲದ್ದರಿಂದಲೂ, ತಲೆತಿರುಕ ಜನರು ಕೊಲೆಗಳಂಥ ನಿಂದ್ಯಕೃತ್ಯಗಳನ್ನು ಮಾಡಿದುದರಿಂದಲೂ, ಸರಕಾರವು ನ್ಯಾಯಾನ್ಯಾಯಗಳನ್ನು ಲಕ್ಷಿಸದೇ ಉಗ್ರಸ್ವರೂಪವನ್ನು ಧರಿಸಿದುದರಿಂದಲೂ, ವೀರ ಪಕ್ಷದವರಿಗೆ ತಮ್ಮ ಕಾರ್ಯವನ್ನು ಅವ್ಯಾಹತವಾಗಿ ನಡೆಸುವದು ದುಸ್ತರವಾಯಿತೆನ್ನುವದನ್ನು ಈ ಹಿಂದೆಯೇ ಹೇಳಲಾಗಿದೆ. ಇಂಥ ವಿಪರೀತ ಕಾಲದಲ್ಲಿ ಬ್ರಿಟೀಶ **ಹದ್ದಿನಲ್ಲಿ** ನಿಲ್ಲುವದರಿಂದ ಆಗುವ ಕಾರ್ಯಕ್ಕಿಂತ, ಬ್ರಿಟೀಶರ ಕಾಟವಿರದದಂಥಹ ಒಂದು ಸ್ಥಾನಕ್ಕೆ ಹೊಗಿ ಅಲ್ಲಿ ನಿಂತು, ಕೆಲಸ ಮಾಡಿದರೆ ಆಗುವ ಕಾರ್ಯವು ದೇಶಕ್ಕೆ ಹೆಚ್ಚು ಉಪಯುಕ್ತವಾದೀತೆಂದು ಶ್ರೀ ಅರವಿಂದ ಯೋಗಿಗಳು ಗೊತ್ತು ಮಾಡಿದರು. ಮತ್ತು ಇದು ಅವರಿಗಾದ ಪೂರ್ವ ಸೂಚನೆಯಂತೆಯೇ ಪಾಂಡೀಚೇರಿಗೆ–ಫ್ರೆಂಚ್ ಹದ್ದಿನಲ್ಲಿ– ಹೋಗಿ ಶಾಂತತನದಿಂದ ಕಾರ್ಯಕ್ಕೆ ತೊಡಗಿದರು. ಅನೇಕ ಗುಪ್ತಚಾರರೂ ಬೇರೆ ಬೇರೆ ವೇಷಗಳಲ್ಲಿ ಹೋಗಿ ಶ್ರೀ ಅರವಿಂದ ಯೋಗಿಗಳನ್ನು ಪೀಡಿಸಹತ್ತಿದರು. ಆದರೆ ಯಾವ ಕಾಟಗಳಿಂದಲೂ ಧ್ಯೇಯಚ್ಯುತರಾಗದೆ ಶ್ರೀ ಅರವಿಂದ ಯೋಗಿಗಳು ತಮ್ಮ ಮಹಾಕಾರ್ಯವನ್ನು ಅವ್ಯಾಹತವಾಗಿ ಇಂದಿಗೂ ನಡೆಸಿದ್ದಾರೆ.

ಶ್ರೀ ಅರವಿಂದ ಯೊಗಿಗಳು ಪಾಂಡಿಚೇರಿಗೆ ಹೋದ ಬಳಿಕ, ಸೌ.ಮೃಣಾಲಿನೀದೇವಿಯವರು ಮನೆಯಲ್ಲಿ ಕಾಲಹರಣ ಮಾಡಿದರು. ಇವರ ಪ್ರವೃತ್ತಿಯು ವೈರಾಗ್ಯದ ಕಡೆಗೆ ವಿಶೇಷವಾಗಿದ್ದಿಲ್ಲ. ಇವರಿಗೆ ಮಕ್ಕಳಿಲ್ಲ. ಮೊನ್ನಿನ (1918ರಲ್ಲಿ ಬಂದ)[5] ಇನ್‌ಫ್ಲೂಯೆಂಝಾ ಪಿಡುಗಿನಲ್ಲಿ – 17ನೇ ಡಿಸೆಂಬರ 1918 ರಂದು ಮೃಣಾಲಿನೀದೇವಿಯವರು ಸ್ವರ್ಗಸ್ಥರಾದರು.

ಶ್ರೀ ಅರವಿಂದ ಯೋಗಿಗಳು ಪಾಂಡೀಚೇರಿಯಲ್ಲಿ ಫ್ರೆಂಚರ ವೈಭವದ ಕಾಲದಲ್ಲಿ ಕಟ್ಟಿದ ಒಂದು ದೊಡ್ಡ ಅರಮನೆಯಂತಹ ಹಳೇವಾಡೆಯಲ್ಲಿ ವಾಸವಾಗಿದ್ದಾರೆ, ಈ ಪುಣ್ಯಭವನದ ಅಂತರ್ವ್ಯವಸ್ಥೆಯೆಲ್ಲ ಹಿಂದೂ ಪದ್ಧತಿಯಂತೆಯೇ ಇರುತ್ತದೆ. ಶ್ರೀ ಅರವಿಂದ ಯೋಗಿಗಳು ಇಲ್ಲಿಗೆ ಬಂದು ಈಗ ಸುಮಾರು 12 ವರ್ಷಗಳಾಗಿವೆ. ಸರ್ವ ಕಾಲವೂ ಬಹುತರವಾಗಿ ಏಕಾಂತದಲ್ಲಿಯೇ ಕಳೆಯುತ್ತಾರೆ. ಇಲ್ಲಿ ಇವರ ತೀರ ಪರಿಚಯದೊಳಗಿನ ಜನರೇ ಕಡಿಮೆ. ಇಬ್ಬರು ಫ್ರೆಂಚ್ ಮುಮುಕ್ಷುಗಳು ಶ್ರೀ ಅರವಿಂದ ಯೋಗಿಗಳ ಸಹಕಾರಿಗಳಾಗಿದ್ದಾರೆ.

1910ರ ಏಪ್ರಿಲ್ ತಿಂಗಳಲ್ಲಿ ಎಮ್.ರಿಚರ್ಡರು ಫ್ರಾನ್ಸದಿಂದ ಅದೇ ಹೊಸದಾಗಿ ಪಾಂಡಿಚೇರಿಗೆ ಬಂದಾಗ, ಶ್ರೀ ಅರವಿಂದ ಯೋಗಿಗಳ ಪ್ರಥಮ ದರ್ಶನವಾಯಿತು. ಯೋಗಸಾಧನದ ಜಿಜ್ಞಾಸುವುಳ್ಳವರಾಗಿ ಶ್ರೀ ಎಮ್.ರಿಚರ್ಡರು ಫ್ರಾನ್ಸದಿಂದ ಬರುವಾಗ ತಮ್ಮ ಪತ್ನಿ ಮೀರಾ ರಿಚರ್ಡರನ್ನು ಸಂಗಡ ಕರೆದುಕೊಂಡು ಬಂದಿದ್ದರು. ಆದರೆ ಕೂಡಲೇ ಯುದ್ಧವು ಪ್ರಾರಂಭವಾದುದರಿಂದ ಮತ್ತು ಫ್ರಾನ್ಸ ದೇಶವು ಅದರಲ್ಲಿ ಭಾಗ ತಕ್ಕೊಳ್ಳುತ್ತಲೇ, ಇವರಿಬ್ಬರೂ ಫ್ರಾನ್ಸಗೆ ಹೋಗಲೇಬೇಕಾಯಿತು. ಆದರೆ ಯುದ್ಧವು ಮುಗಿದುದರಿಂದ, ಈಗ ಮತ್ತೆ ಪಾಂಡಿಚೇರಿಗೆ ಅವರು ಬಂದಿದ್ದಾರೆ. ಪ್ರತಿ ರವಿವಾರಕ್ಕೊಮ್ಮೆ ಬಹುತರ ಶ್ರೀ ಅರವಿಂದ ಯೋಗಿಗಳು ವಿಚಾರವಿನಿಮಯಕ್ಕಾಗಿ ಸಹಕಾರಿ ಬಂಧುಗಳೊಡನೆ ಒತ್ತಟ್ಟಿಗೆ ಕೂಡುವರು. ಧ್ಯಾನ–ಧಾರಣಾದಿ ಯೋಗಸಾಧನಗಳಲ್ಲಿಯೂ, ಉದಾತ್ತ ವಿಚಾರಗಳ ಲೇಖನದಲ್ಲಿಯೂ ಮಹರ್ಷಿಗಳ ಎಲ್ಲ ವೇಳೆಯೂ ಹೋಗುವದು. ಎಷ್ಟೋ ಜನರು ಈ ಅದ್ಭುತ ಚರಿತ್ರದ ಈ ಯೋಗಿಯನ್ನು ಕಂಡು ನೇತ್ರಸಾಫಲ್ಯ ಮಾಡಿಕೊಳ್ಳಬೇಕೆಂದು ಹೋಗುತ್ತಾರೆ. ಆದರೆ ದರ್ಶನವಾಗುವದೇ ದುರ್ಲಭವು. ಒಳ್ಳೆ ಪ್ರಯತ್ನದಿಮದ ದರ್ಶನದ ಸುಪ್ರಸಂಗವು ಬಂದರೂ ಸಂಭಾಷಣದ **ಕಪಿಲಾಷ್ಠಯ ಯೋಗ**ವು ಬರುವದು ಅಸಾಧ್ಯವು. ಅನೇಕರು ಭೇಟಿಗೆ ಹೋಗುವರು. ಆಗ ಶ್ರೀ ಅರವಿಂದರೊಂದು ವೇತ್ರಾಸನದ ಮೇಲೆ, ಪ್ರೇಕ್ಷಕರು ಮತ್ತೊಂದರ ಮೇಲೆ ಗಂಭೀರವಾದ ಮೌನವನ್ನು ತಾಳಿ ಸ್ವಸ್ಥವಾಗಿ ಕುಳಿತುಕೊಳ್ಳುವ ಪ್ರಸಂಗವೇ ಬಹುತರವಾಗಿ ಬರುವದು. ಈಗ ಯೋಗಿಗಳಿಗೆ ಪೂರ್ಣಾವಸ್ಥೆಯು ದೊರೆತಿದ್ದು, ಆಹಾರ ನಿದ್ರಾದಿಗಳನ್ನು ಸಹ ಪೂರ್ಣವಾಗಿ ಜಯಿಸಿದ್ದಾರೆ. ಸುದೀರ್ಘ ತಪಶ್ಚರ್ಯದಿಂದ ಭೌತಿಕ ಶರೀರವು ಕೃಶವಾಗಿದ್ದರೂ ಯೋಗ ಶಕ್ತಿಯ ಹೆಚ್ಚಳದಿಂದ ಆತ್ಮನ ಸ್ಫುರಣಗಳು ಹೆಚ್ಚಾಗಿವೆ. ಆಹಾರಾದಿಗಳ ನಿಯಮನದಿಂದ ಒಳಸಿಕ್ಕಿದ್ದರೂ ಅವುಗಳೊಳಗಿನ ತಪಃಪ್ರಭಾವದ ತೇಜಸ್ಸಿನ ಮಿಂಚು ಹೊರಬೀಳುತ್ತಾ ಇದೆ. ಶ್ರೀ ಅರವಿಂದರ ತಪಃಪ್ರಭಾವದಿಂದ ತೇಜೋಮಯವಾಗಿರುವ ಆ ಕೃಶಾಂಗವು, ಆತ್ಮಾನಂದದಿಂದ ಉಂಟಾದ ಶಾಂತಿಯನ್ನು ವ್ಯಕ್ತಪಡಿಸುವ ಮಂದಸ್ಮಿತದಿಂದ ಒಪ್ಪುವ ಆ ರಮ್ಯ ಮುಖವು, ವಿಶ್ವದ ರಹಸ್ಯಕ್ಕೆ ಕೈಹಾಕಿದ ಆ ಭೇದಕ ದೃಷ್ಟಿಯು, ಆತ್ಮಸಾಧನೆಯೊಳಗಿನ ನಿಮಗ್ನತೆಯನ್ನು ಸೂಚಿಸುವ ಭುಜದ ಮೇಲೆ ಅಲ್ಲಾಡುವ ಆ ಜಡೆಯು, ಮಹರ್ಷಿಗಳ ವಿಷಯಕ್ಕೆ ಪ್ರೇಕ್ಷಕರಲ್ಲಿ ಪೂಜ್ಯಬುದ್ಧಿಯನ್ನು ಉಂಟುಮಾಡದೇ ಬಿಡುವದಿಲ್ಲ.

(ಸಶೇಷ)

**ಟಿಪ್ಪಣಿಗಳು:**

1. **ಉತ್ತರಪಾಡಾ:** ಸೆರೆಮನೆಯಿಂದ ಬಿಡುಗಡೆ ಹೊಂದಿ ಹೊರಬಂದ ಶ್ರೀ ಅರವಿಂದರು ಸಾರ್ವಜನಿಕರನ್ನು ಉದ್ದೇಶಿಸಿ ಮಾಡಿದ ಈ ಉಪನ್ಯಾಸವು ಒಂದು ಸಾಂಸ್ಕೃತಿಕ ವಿಕಾಸನದಲ್ಲಿ – ಬುದ್ಧನ ಪ್ರಥಮ ಉಪದೇಶ, ಸ್ವಾಮಿ ವಿವೇಕಾನಂದರ 'ಚಿಕ್ಯಾಗೋ ಸಂದೇಶ'ದ ನಂತರದಲ್ಲಿ ಯುಗಮೌಲ್ಯದ ಸ್ವರೂಪದಲ್ಲಿಯೇ ಆರಾಧಿಸಲ್ಪಡುತ್ತದೆ. ಶ್ರೀ ಅರವಿಂದರನ್ನು "ಉತ್ತರ ಯೋಗಿ" ಎನ್ನುವ ನಾಮಕರಣದಲ್ಲಿಯೂ ಈ ಘಟನೆ ರೂಪಿಸಿದೆ.

2. **ಮತ:** ಇದು ಸಮ್ಮತಿಯಾಗಿದೆ. ಅಭಿಪ್ರಾಯವೂ ಹೌದು. ನಾವು ಈಗ ಕಾಣುತ್ತಿರುವ ಮತ(ದಾನ) ಆಗಿನ್ನೂ ರೂಪುಗೊಂಡಿರಲಿಲ್ಲ. ಅದೂ ಅಲ್ಲದೇ ಧರ್ಮ–ಮತ–ಜಾತಿ ಎನ್ನುವ ಆಯಾಮವೂ ಸಹಿತ ಸಾಂಸ್ಕೃತಿಕ ಚಿಂತನಗಳಲ್ಲಿ ರೂಪಿತವಿರಲಿಲ್ಲ. ಹೀಗಾಗಿ ಇಲ್ಲಿ 'ಮತ' ಎನ್ನುವದು ಅಭಿಪ್ರಾಯ ರೂಪಣೆ ಎನ್ನುವದನ್ನು ಸೂಚಿಸುತ್ತದೆ.

3. **ಸಾಧನಾ ಮಾರ್ಗ ಮತ್ತು ಯೋಗ ಸಾಧನೆ ಗ್ರಂಥ:** ಶ್ರೀ ಅರವಿಂದರಿಗೆ ದೊರೆತ ಈ ಗ್ರಂಥದ ವಿವರಗಳು ಲಭ್ಯವಾಗಬೇಕಿದೆ. ಶ್ರೀ ಅರವಿಂದರು ಅನುಸಿರಿಸಿರುವ ಯೋಗ ಮಾರ್ಗದ ಕುರಿತು ಇಡೀ ಭಾರತದಲ್ಲಿ ಕೆಲವೇ ಕೆಲವು ಚಿಂತಕರು ಮಾತ್ರ ಈ ಪಥದಲ್ಲಿ ಸಾಗಿರುವದನ್ನು ಕಾಣುತ್ತೇವೆ. ಕಾರಣಾಂತರದಿಂದಾಗಿ, ಜನಮಾನಸದಿಂದ ದೂರವೇ ಉಳಿದು, ಆಚ್ಛಾದದಲ್ಲಿ ಸಿಲುಕಿಕೊಂಡಿದ್ದ ಜ್ಞಾನವನ್ನು ಈ 'ಯೋಗ ಸಾಧನೆ'ಯ ಮೂಲಕ ದೃಷ್ಟ ಮಾಡಿಕೊಳ್ಳಬಹುದು.

4. **ಕಲ್ಲು ಹಾಕು:** ಅಡೆ ತಡೆ ಒಡ್ಡು/ಪ್ರತಿಬಂಧಿಸು/ಎಲ್ಲದಕ್ಕೂ ತೊಂದರೆ ಕೊಡುವ.

5. **ಇನ್‌ಫ್ಲೂಯೆಂಝಾ:** ಒಂದನೇ ಮಹಾಯುದ್ಧದ ನಂತರ ಬಂದ ಸಾಂಕ್ರಾಮಿಕ ರೋಗ; ಮಹಾಯುದ್ಧದಲ್ಲಿ ಜಯಗಳಿಸುವದಕ್ಕಾಗಿ ಜನಸಮುದಾಯದ ರಕ್ಷಣೆಯನ್ನೂ ಮರೆತು, ಕ್ರೂರವಾಗಿ ವರ್ತಿಸಿದ ರಾಷ್ಟ್ರ ರಾಷ್ಟ್ರಗಳ ಹೋರಾಟದ ಫಲವಿದು. ಲಕ್ಷಾಂತರ ಅಮಾಯಕ ಜನರು ಇದರಿಂದ ಪ್ರಾಣ ಕಳೆದುಕೊಂಡರು. ಈಗಲೂ ಸಹಿತ ಸಾಂಕ್ರಾಮಿಕ ರೋಗವಾಗಿ ಇಡೀ ಜಗತ್ತನ್ನೇ ತಲ್ಲಣಗೊಳಿಸುತ್ತಿರುವ ಕೊರೋನಾ ಸಹಿತ ಇದೇ ರೀತಿಯ ಅಪ್ರತ್ಯಕ್ಷ ಯುದ್ಧದ ಹುನ್ನಾರೇ ಆಗಿದೆ.

## "ಶ್ರೀ ಅರವಿಂದರು–150"

### ಸಾಧಕರ ಪರಿಚಯ – 1

### ಆಧ್ಯಾತ್ಮಿಕ ಆಗಸದ ಧ್ರುವತಾರೆ ಶಿರಸಿಯ ಶ್ರೀ ಎಂ.ಪಿ. ಪಂಡಿತ

**– ಶ್ರೀ ವಾಸುದೇವ ಸೋಂದೆ, ಶಿರಸಿ**

ರಾವ್‌ಬಹದ್ದೂರ ಪುಂಡಲೀಕ ನಾರಾಯಣ ಪಂಡಿತರು ಶಿರಸಿಗೆ ನೀಡಿದ ಕೊಡುಗೆಗಳು ಅನೇಕ. ಅದರಲ್ಲಿ ಮುಖ್ಯವಾಗಿ 1905ರಲ್ಲಿ ಪ್ರಾರಂಭಗೊಂಡ 'ರೂರಲ್ ಡೆವೆಲಪ್‌ಮೆಂಟ್ ಕ್ರೆಡಿಟ್ ಸೊಸೈಟಿ'. ಇದರ ಸಂಸ್ಥಾಪಕ ಅಧ್ಯಕ್ಷರು ಪುಂಡಲೀಕ ನಾರಾಯಣ ಪಂಡಿತರರು. ಈ ಸಂಸ್ಥೆಯೇ ಮುಂದೆ "ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್" ಎಂದು ಪ್ರಸಿದ್ಧವಾಗಿ 117ನೇ ವರ್ಷದಲ್ಲಿಯೂ ಯಶಸ್ವೀ ಸೇವೆ ಸಲ್ಲಿಸುತ್ತ ಶಿರಸಿಯ ಆರ್ಥಿಕ ಚಟುಟಿಕೆಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಆರೋಗ್ಯ ಕ್ಷೇತ್ರದಲ್ಲಿಯೂ ಸಹಿತ ಅವರು ಸ್ಥಾಪಿಸಿದ "ಪಂಡಿತ ಜನರಲ್ ಆಸ್ಪತ್ರೆ"ಯು ಇಂದು ಸರಕಾರೀ ಆಸ್ಪತ್ರೆಯಾಗಿ ಜನರ ಸೇವೆ ಮಾಡುತ್ತಿದೆ. ಶತಮಾನೋತ್ಸವವನ್ನು ಆಚರಿಸಿದ ಪ್ರಖ್ಯಾತ "ಪಂಡಿತ ಜನರಲ್ ಲೈಬ್ರರಿ" ಅವರದೇ ಕರಕಮಲ ಸಂಜಾತ ಸಂಸ್ಥೆಯಾಗಿ ಜನರ ಜ್ಞಾನದಾಹ ನೀಗುವ ಸರಸ್ವತೀ ಮಂದಿರವಾಗಿ ಈಗಲೂ ಕಾರ್ಯ ನಿರ್ವಹಿಸುತ್ತಿದೆ. ಇಂದು ಸಹಕಾರೀ ಕ್ಷೇತ್ರದಲ್ಲಿ ತಮ್ಮದೇ ಉತ್ತುಂಗಕ್ಕೇರಿರುವ ಟಿ.ಎಸ್.ಎಸ್.ಸಂಸ್ಥೆ ಶಿರಸಿ ಕೂಡ ತನ್ನ ಪ್ರಾರಂಭಿಕ ದಿನಗಳಲ್ಲಿ ಪಿ.ಎನ್ ಪಂಡಿತರ ಸಕ್ರಿಯ ಸೇವೆ ಪಡೆದುಕೊಂಡಿದೆ. ಹೀಗೆ ಆರ್ಥಿಕ, ಶೈಕ್ಷಣಿಕ, ಆರೋಗ್ಯ ಮತ್ತು ಸಹಕಾರೀ ಕ್ಷೇತ್ರಗಳಲ್ಲಿ ತಮ್ಮದೇ ಕೊಡುಗೆ ನೀಡಿದ ಪುಂಡಲೀಕ ನಾರಾಯಣ ಪಂಡಿತರು ಆಧ್ಯಾತ್ಮಿಕ ಕ್ಷೇತ್ರಕ್ಕೂ ನೀಡಿದ ದೊಡ್ಡ ಕೊಡುಗೆ ಎಂದರೆ ಅವರ ಪುತ್ರರಾದ **ಶ್ರೀ ಎಂ.ಪಿ. ಪಂಡಿತರು.**

ಕೆಲವರು ಹುಟ್ಟುತ್ತಾರೆ, ಹುಟ್ಟಿದ್ದಕ್ಕಾಗಿ ಸಾಯುತ್ತಾರೆ. ಕೆಲವರು ಸತ್ತೇ ಹುಟ್ಟುತ್ತಾರೆ, ಕೆಲವೇ ಕೆಲವು ಮಾತ್ರ ಸತ್ತರೂ ಜನಮಾನಸದಲ್ಲಿ ಜೀವಂತವಾಗಿಯೇ ಉಳಿಯುತ್ತಾರೆ. ಈ ಮೂರನೇ ಶ್ರೇಣಿಗೆ ಸೇರಿದವರು **ಶ್ರೀ ಮಾಧವ ಪುಂಡಲೀಕ ಪಂಡಿತರು.** ಜಗತ್ತಿನಾದ್ಯಂತ ಇವರನ್ನು ಎಂ.ಪಿ. ಪಂಡಿತ ಎಂದೇ ಪ್ರಖ್ಯಾತರಾಗಿದ್ದಾರೆ. ಇವರು ಹುಟ್ಟಿದ್ದು ಬೆಳೆದದ್ದು ಶಿರಸಿಯಲ್ಲಿ. ಆದರೆ ಬೆಳೆದು ಬೆಳಗಿದ್ದು ಜಗತ್ತಿನಾದ್ಯಂತ ಆಧ್ಯಾತ್ಮ ದೀವಿಗೆಯನ್ನು. ಅವರು ಏರಿದ ಎತ್ತರ ಎಲ್ಲರಿಗೂ ಆಶ್ಚರ್ಯಪಡುವಂತಹದು. ಆದರೆ ಅವರು ನಮ್ಮವರಾಗಿಯೂ ನಮಗೆಲ್ಲ ಅಪರಿಚತಾರಗಿಯೇ ಉಳಿದರು. ಹಿತ್ತಲ ಗಿಡ ಮದ್ದಲ್ಲ ಎನ್ನುವಂತೆ

ನಾವು ಎಷ್ಟೋ ಬಾರಿ ನಮ್ಮವರನ್ನೇ ತಿಳಿದುಕೊಳ್ಳುವ ಪ್ರಯತ್ನ ಮಾಡುವದಿಲ್ಲ! ಜಗತ್ತು ಅವರ ಬಗೆಗೆ ಹೇಳಿದ ಮೇಲೆಯೇ ನಮಗೆ ಅವರ ಮಾಹಿತಿ ಗೊತ್ತಾಗುತ್ತದೆ! ಎಂ. ಪಿ. ಪಂಡಿತರ ಬಗೆಗೂ ಆಗಿದ್ದು ಹೀಗೆಯೇ. ಅವರು ಶಿರಸಿಯ ವರಪುತ್ರರು ಎನ್ನುವದು ಈಗಲೂ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಆದರೆ ಅಂಥ ದೈತ್ಯಪ್ರತಿಭೆಯನ್ನು ಜಗತ್ತಿಗೆ ನೀಡಿದ ಹೆಮ್ಮೆ ಎಂದೆಂದೂ ಶಿರಸಿ ನಗರಕ್ಕೆ ಇದೆ, ಇದು ಐತಿಹಾಸಿಕ ಸತ್ಯವೂ ಆಗಿದೆ!

ಪುಂಡಲೀಕ ನಾರಾಯಣ ಪಂಡಿತರ ಏಳನೇ ಪುತ್ರರಾಗಿ 1918ರಲ್ಲಿ ಜನಿಸಿದ ಮಾಧವ ಪಂಡಿತರಿಗೆ ತಂದೆ–ತಾಯಿಗಳು ಇಟ್ಟ ಹೆಸರು 'ನೀಲಕಂಠ' ಎಂದು. ಆದರೆ ಅವರ ಅಣ್ಣಂದಿರಾದ ಸುಂದರರಾವ್ ಪಂಡಿತರು ತಮ್ಮನನ್ನು 'ಮಾಧವ' ಎಂದೇ ಕರೆಯುತ್ತಿದ್ದರು. ಅದೇ ಹೆಸರು ಎಲ್ಲರಿಗೂ ಒಪ್ಪಿಗೆಯಾಗಿ, ಮುಂದೆ ಎಂ.ಪಿ. ಪಂಡಿತರೆಂದೇ ಅವರು ಖ್ಯಾತರಾದರು.

ಮಾಧವ ಪಂಡಿತರ ಪ್ರಾಥಮಿಕ ವಿದ್ಯಾಭ್ಯಾಸವು ಶಿರಸಿಯಲ್ಲಿಯೇ ನಡೆಯಿತು. ಅವರು ಅಜಮಾಸು 122 ವರ್ಷದವರಾಗಿದ್ದಾಗ ಒಂದು ಘಟನೆ ನಡೆಯಿತು. ಶ್ರೀರಮಣ ಮಹರ್ಷಿಗಳ ಶಿಷ್ಯಂದಿರಾದ ವಾಸಿಷ್ಠ ಗಣಪತಿ ಮುನಿಗಳು ಶಿರಸಿಗೆ ಬಂದು ಸುಂದರರಾಯರ ಸ್ನೇಹಿತರಾಗಿದ್ದ ದೇವೇಂದ್ರ ವಿಶ್ವಾಮಿತ್ರರ ಮನೆಯಲ್ಲಿ ಉಳಿದುಕೊಂಡಿದ್ದರು. ಆಗ ಅವರ ತಂದೆ ಪುಂಡಲೀಕರಾಯರು ಕೀಲುನೋವಿನಿಂದ ಬಳಲುತ್ತಿದ್ದರು. ಸುಂದರರಾಯರು ಗುರುಗಳನ್ನು ಕಂಡು ತಂದೆಯವರ ಈ ವ್ಯಾಧಿಯನ್ನು ಮುಕ್ತಗೊಳಿಸಲು ಕೇಳಿಕೊಂಡರು. ವೇದ, ಅಧ್ಯಾತ್ಮಿಕ, ಉಪನಿಷತ್ತು ಧರ್ಮಾನುಷ್ಠಾದಲ್ಲಿ ಪರಿಣಿತರಾಗಿದ್ದ ಗಣಪತಿ ಮುನಿಗಳು ಆಯುರ್ವೇದ ಔಷಧಿಗಳಲ್ಲೂ ನಿಷ್ಣಾತರಾಗಿದ್ದರು. ಅವರು ಹೇಳಿದ ಔಷಧಿಯನ್ನು ಸೇವಿಸಿದ್ದರಿಂದ, ಪುಂಡಲೀಕರಾಯರು ತಮ್ಮ ಕೀಲುನೋವಿನ ಸಂಕಷ್ಟದಿಂದ ಮುಕ್ತರಾದರು. ಇದರಿಂದ ತಂದೆ ಮಕ್ಕಳಾದಿಯಾಗಿ ಇಡೀ ಪಂಡಿತ ಕುಟುಂಬವೇ ಗಣಪತಿ ಮುನಿಗಳ ಶಿಷ್ಯಂದಿರಾದರು.

ಇದಾದ ಕೆಲವು ವರ್ಷದ ನಂತರದಲ್ಲಿ ವಾಸಿಷ್ಠ ಗಣಪತಿ ಮುನಿಗಳ ಶಿಷ್ಯರಾದ ಕಪಾಲಿ ಶಾಸ್ತ್ರಿಗಳು ಶಿರಸಿಗೆ ಬಂದು, ಸುಂದರರಾಯರ ಮನೆಯಲ್ಲಿ ವಸತಿ ಮಾಡಿದರು. ಕಪಾಲಿ ಶಾಸ್ತ್ರಿಗಳು ವೇದಪಾರಂಗತರು, ತಂತ್ರ–ಜಪಗಳಲ್ಲಿ ನಿಷ್ಣಾತರು. ಜ್ಯೋತಿಷ್ಯದಲ್ಲಿ ಪಂಡಿತರು. ಸಂಸ್ಕೃತ ಸಾಹಿತ್ಯವನ್ನೂ ರಚಿಸಿದವರು. ಶ್ರೀ ಅರವಿಂದ ಯೋಗಿಗಳ ಅನುಯಾಯಿಗಳು.

ಕಪಾಲಿ ಶಾಸ್ತ್ರಿಗಳ ಆಚಾರ–ವಿಚಾರಗಳು ಬಾಲಕ ಮಾಧವನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದವು. ಮಾಧವ ಅವರ ವಿದ್ವತ್ತಿಗೆ ಮರುಳಾದ. ಮಾಧವನ ಇನ್ನೊಬ್ಬ ಅಣ್ಣ ರಾಘವೇಂದ್ರರಾಯರು ಬೆಳಗಾವಿಯಲ್ಲಿ ಅಸಿಸ್ಟೆಂಟ ಕಮೀಶನರ್ ಆಗಿದ್ದರು. ಮಾಧವ ತನ್ನ ಕಾಲೇಜು ಶಿಕ್ಷಣಕ್ಕಾಗಿ ಆಗ ಬೆಳಗಾವಿಗೆ ಹೋದರು. ಅಲ್ಲಿನ ಕರ್ನಾಟಕ ಕಾಲೇಜಿನಲ್ಲಿ ಸ್ವಲ್ಪ ದಿನ ಓದಿ ಮುಂದಿನ ಶಿಕ್ಷಣಕ್ಕಾಗಿ ಮುಂಬಯಿಗೆ ಹೋಗಿ ಬಿ.ಎ., ಪರೀಕ್ಷೆ ಪಾಸಾದರು.

ಬೆಳಗಾವಿಯಲ್ಲಿ ಅಸಿಸ್ಟೆಂಟ ಕಮೀಶನರ್ ಆಗಿದ್ದ ಮಾಧವನ ಅಣ್ಣ ರಾಘವೇಂದ್ರರಾಯರು ತಮ್ಮ 38ನೇ ವಯಸ್ಸಿನಲ್ಲಿಯೇ ಅಕಾಲಿಕವಾಗಿ ನಿಧನ ಹೊಂದಿದರು. ಅದೇ ವರ್ಷ ತಂದೆ ಪುಂಡಲೀಕರಾಯರೂ ಗತಿಸಿದರು. ಮನೆತನದಲ್ಲಿ ನಡೆದ ಈ ಎರಡೂ ಸಾವುಗಳು ಯುವಕರಾಗಿದ್ದ ಮಾಧನವ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದವು. ಅವರ ಮನಸ್ಸು ಸಾವಿನ ರಹಸ್ಯವನ್ನು ಹುಡುಕಲು ತುಡಿಯತೊಡಗಿತು. ಮೋಕ್ಷದ ಮಾರ್ಗವನ್ನು ಕಂಡುಕೊಳ್ಳಲು ಹಾತೊರೆಯತೊಡಗಿತು. ಇದರಿಂದಾಗಿ ಅವರಲ್ಲಿ ಆಧ್ಯಾತ್ಮವನ್ನು ಅರಿಯುವ ಹಸಿವು ಹೆಚ್ಚತೊಡಗಿತು. ಅವರ ಮನಸ್ಸು ಕ್ರಮೇಣ ಶ್ರೀ ಅರವಿಂದ ಸಾಹಿತ್ಯದೆಡೆಗೆ ಆಕರ್ಷಿತವಾಯಿತು. ಅವರು ಶ್ರೀ ಅರವಿಂದ ಸಾಹಿತ್ಯ ಮತ್ತು ಶ್ರೀಮಾತಾ ಅವರ ಗ್ರಂಥಗಳನ್ನು ಅಭ್ಯಾಸ ಮಾಡತೊಡಗಿದರು. ಬಿ.ಎ., ಬಿ.ಕಾಂ., ಎಲ್.ಎಲ್.ಬಿ.ವರೆಗೆ ಓದಿದ ನಂತರದಲ್ಲಿ ಶಿಕ್ಷಣದಲ್ಲೂ ಪ್ರತಿಭಾವಂತ ವಿದ್ಯಾರ್ಥಿಯಾಗಿ ಪ್ರಥಮ ಶ್ರೇಣಿಯಲ್ಲಿ ಪಾಸಾಗುವಂತಹ ಜಾಣ್ಮೆ ಅವರದಾಗಿತ್ತು. ಇನ್ನೂ ಮುಂದಕ್ಕೆ ಓದಿ, ದೊಡ್ಡಣ್ಣನ ಹುದ್ದೆಗೆ ಹೋಗಬಹುದಾಗಿದ್ದ ಪಾಂಡಿತ್ಯ ಅವರಿಗಿತ್ತು. ಆದರೆ ಪಾಂಡಿಚೇರಿಯ ಆಶ್ರಮವು ಅವರನ್ನು ಕೈಬೀಸಿ ಕರೆಯುತ್ತಿತ್ತು. ಹೀಗಾಗಿ ಗಟ್ಟಿಯಾದ ನಿರ್ಧಾರ ಮಾಡಿ 1937 ಎಪ್ರಿಲ್4 ರಂದು ಪಾಂಡಿಚೇರಿಗೆ ಹೋಗಿ ಅಲ್ಲಿದ್ದ ಕಪಾಲಿ ಶಾಸ್ತ್ರಿಗಳನ್ನು ಭೆಟ್ಟಿಯಾದರು.

ಕಾಪಾಲಿ ಶಾಸ್ತ್ರಿಗಳ ಮೂಲ ಹೆಸರು ಟಿ.ವಿ.ಕಾಪಾಲಿ ಶಾಸ್ತ್ರೀ. 03–09–1886 ರಂದು ಮದ್ರಾಸಿನ ಮೈಲಾಪೂರದಲ್ಲಿ ವೈದಿಕ ಕುಟುಂಬದಲ್ಲಿ ಜನಿಸಿದ ಶಾಸ್ತ್ರಿಗಳಿಗೆ ತಂದೆ–ತಾಯಿ ತಮ್ಮ ಕುಲದೈವ "ಕಬ್ಬಾಳೇಶ್ವರ"ನ ಹೆಸರಾದ 'ಕಬ್ಬಾಳಿ' ಎಂದು ನಾಮಕರಣ ಮಾಡಿದ್ದು, ಮುಂದೆ ಅದು ರೂಢಿಯಲ್ಲಿ 'ಕಪಾಲಿ' ಎಂದು ಹ್ರಸ್ವವಾಗಿ ಅದೇ ಹೆಸರು ಶಾಶ್ವತವಾಯಿತು. ತಂದೆ ವಿಶ್ವೇಶ್ವರ ಶಾಸ್ತ್ರಿಗಳಿಂದ ಸಂಸ್ಕೃತ ಕಲಿತು, ತನ್ನ 12ನೇ ವಯಸ್ಸಿನಲ್ಲಿಯೇ ವೇದ, ಉಪನಿಷತ್ತುಗಳ ಬಗೆಗೆ ಜ್ಞಾನವನ್ನು ಪಡೆದುಕೊಂಡರು. ಈ ಜ್ಞಾನದ ಬಲದಿಂದಲೇ 18ನೇ ವರ್ಷಕ್ಕೇ

ಮದ್ರಾಸಿನ ಮುತ್ಯಾಲಪೇಟ ಹೈಸ್ಕೂಲಿನಲ್ಲಿ ಸಂಸ್ಕೃತ ಶಿಕ್ಷಕರಾಗಿ ಸೇರಿದರು. ಅಲ್ಲಿರುವಾಗಲೇ ಇವರಿಗೆ ಶ್ರೇಷ್ಠ ವಿದ್ವಾಂಸರೂ, ವೇದವಿದ್ಯಾವಿಶಾರದರು ಆದ ವಾಸಿಷ್ಠ ಗಣಪತಿ ಮುನಿಗಳ ಸಂಪರ್ಕ ಸಿಕ್ಕಿತು. ಅವರನ್ನೇ ತಮ್ಮ ಗುರುಗಳಾಗಿ ಸ್ವೀಕರಿಸಿ, ಸರ್ವಸಂಗ ಪರಿತ್ಯಾಗಿಗಳಾಗಿ ಅವರ ಜೊತೆಯಲ್ಲಿಯೇ ತಮ್ಮ ಜೀವನಪೂರ್ತಿ ಸೇವೆ ಸಲ್ಲಿಸುತ್ತ ಪರಮಾಪ್ತ ಶಿಷ್ಯರಾದರು. ಗಣಪತಿ ಮುನಿಗಳೂ ಕೂಡ ತಮ್ಮ ಎಲ್ಲ ಜ್ಞಾನವನ್ನು ಶಿಷ್ಯನಿಗೆ ಧಾರೆ ಎರೆದು ಅವರನ್ನೊಬ್ಬ ವೇದಶಾಸ್ತ್ರ ಪರಿಣಿತರನ್ನಾಗಿಸಿದರು. ಇವರು ಇಂಗ್ಲೀಷ್, ತಮಿಳು, ತೆಲುಗು ಮತ್ತು ಸಂಸ್ಕೃತದಲ್ಲಿ ಅನೇಕ ಪುಸ್ತಕಗಳನ್ನು ಬರೆದು, ವೇದೋಪನಿಷತ್ತುಗಳ ಮಹತ್ವವನ್ನು ಸಾಮಾನ್ಯರಿಗೂ ತಲುಪುವಂತೆ ಮಾಡಿದರು. ಕಪಾಲಿ ಶಾಸ್ತ್ರಿಗಳ ಬರಹಗಳಿಂದ ಪ್ರಭಾವಿತರಾದ ಶ್ರೀ ಎಂ.ಪಿ. ಪಂಡಿತರು ಅವರನ್ನೇ ತಮ್ಮ ಮಾನಸಿಕ ಗುರುಗಳನ್ನಾಗಿ ಸ್ವೀಕರಿಸಿದ್ದರು. ಶಾಸ್ತ್ರಿಗಳು ಕೂಡ ಕೇವಲ ಪತ್ರ ವ್ಯವಹಾರದ ಮೂಲಕವೇ ಪಂಡಿತರ ಜ್ಞಾನ ಮತ್ತು ಅಧ್ಯಯನವನ್ನು ಗುರುತಿಸಿ ಅವರನ್ನು ಶಿಷ್ಯರನ್ನಾಗಿ ಸ್ವೀಕರಿಸಲು ತೀರ್ಮಾನಿಸಿದ್ದರು. ಇದರಿಂದ ಪಂಡಿತರು ಪಾಂಡಿಚೇರಿಗೆ ಬಂದಾಗ ಅವರನ್ನು ಹಾರ್ದಿಕವಾಗಿ ಬರಮಾಡಿಕೊಂಡರಲ್ಲದೇ ಶ್ರೀಮಾತಾಜಿಯವರಿಗೆ ಪರಿಚಯಿಸಿ ಶ್ರೀಮಾತೆಯ ಆಶೀರ್ವಾದಕ್ಕೆ ಅರ್ಹರನ್ನಾಗಿಸಿದರು. ಶ್ರೀಮಾತಾಜಿಯವರ ಪ್ರಥಮ ಭೇಟಿಯ ರೋಮಾಂಚಕ ಅನುಭವವನ್ನು, ಅವರು ತಮ್ಮ ಗ್ರಂಥದಲ್ಲಿ ದಾಖಲಿಸಿದ್ದಾರೆ, ಅಂದಿನಿಂದ ಅವರು ತಮ್ಮ ಸರ್ವಸವನ್ನೂ ಶ್ರೀ ಮಾತೆಯ ಚರಣಗಳಲ್ಲಿ ಸಮರ್ಪಿಸಿದರು. ಆಗ ಅವರ ವಯಸ್ಸು ಕೇವಲ 19 ಮಾತ್ರ.

ಮುಂದೆ ಎರಡೇ ವರ್ಷಗಳಲ್ಲಿ ಅಂದರೆ 1939ರಲ್ಲಿ ತನ್ನ ಜೀವನದ ಏಕೈಕ ಗುರಿಯಾದ ಪಾಂಡಿಚೇರಿಯ ಶ್ರೀ ಅರವಿಂದಾಶ್ರಮವನ್ನು ಸೇರಿದರು. ಅಲ್ಲಿಯೇ ಶಾಶ್ವತವಾಗಿ ನೆಲೆಸಿದರು.

ಅಲ್ಲಿ ಅವರು ಕಪಾಲಿ ಶಾಸ್ತ್ರಿಗಳಿಂದ ವೇದ, ಮಂತ್ರ, ಜಪ–ತಪ–ಕುಂಡಲಿನಿ ಯೋಗಗಳ ಕುರಿತು ತಿಳಿದುಕೊಂಡರು. ಗೀತೆ, ಉಪನಿಷತ್ತುಗಳನ್ನು ಓದಿದರು. ಶ್ರೀ ಅರವಿಂದರ ಸಾಹಿತ್ಯದ ಆಳ, ಅಗಲಗಳನ್ನು ತಿಳಿದುಕೊಂಡರು. ರಾಮಕೃಷ್ಣ ಪರಮಹಂಸ, ವಿವೇಕಾನಂದರ ಸಾಹಿತ್ಯವನ್ನು ಓದಿಕೊಂಡರು. ಯೋಗಾಭ್ಯಾಸ ಮಾಡಿದರು. ಯೋಗಾಂಗಗಳ ಸಾಧನೆ ಮಾಡಿದರು. ಈ ಎಲ್ಲ ಪ್ರಕ್ರಿಯೆಗೆ ಕಪಾಲಿ ಶಾಸ್ತ್ರಿಗಳೇ ಗುರುಗಳಾಗಿ, ಹಿತಯಷಿಯಾಗಿ, ಮಾರ್ಗದರ್ಶಕರಾಗಿ ನಿಂತರು. ಹೆಜ್ಜೆಹೆಜ್ಜೆಗೂ ಮಾಧವ ಪಂಡಿತರನ್ನು ತಿದ್ದಿ ಬೆಳೆಸಿದವರು ಕಪಾಲಿ ಶಾಸ್ತ್ರಿಗಳು. ಕಪಾಲಿ ಶಾಸ್ತ್ರಿಗಳ ಕುರಿತು ಗೌರವಪರ ನುಡಿಗಳನ್ನು ಪಂಡಿತರು ತಮ್ಮ ಅನೇಕ

ಗ್ರಂಥಗಳಲ್ಲಿ ಆಗಾಗ ಬರೆದಿದ್ದಾರೆ. ಅವರ ಪತ್ರಗಳನ್ನು ಪ್ರಸಿದ್ಧಿಸಿದ್ದಾರೆ. ಸಪ್ಟೆಂಬರ 3, 1986ರಲ್ಲಿ ಕಪಾಲಿ ಶಾಸ್ತ್ರಿಗಳ ಶತಮಾನೋತ್ಸವವನ್ನು ಆಚರಿ, ಒಂದು ಗೌರವ ಗ್ರಂಥ ಹೊರತಂದು ತಮ್ಮ ಗುರುಋಣ ಸಲ್ಲಿಸಿದ್ದಾರೆ.

ಕಪಾಲಿ ಶಾಸ್ತ್ರಿಗಳು ತಮಗೆ ನೀಡಿದ ಮೂರು ಜೀವನ ಸೂತ್ರಗಳನ್ನು ಪಂಡಿತರು ತಮ್ಮ ಅನೇಕ ಲೇಖನಗಳಲ್ಲಿ ದಾಖಲಿಸಿದ್ದಾರೆ. ಅವು ಎಲ್ಲರಿಗೂ ಜೀವನದಲ್ಲಿ ಯಶಸ್ಸು ಗಳಿಸಲು ಮಾರ್ಗದರ್ಶಿ ಸೂತ್ರಗಳಾಗಿವೆ,

1) ಯಾವುದೇ ಸಮಸ್ಯೆ ಬಂದಾಗ ಅದನ್ನು ಸಂಪೂರ್ಣವಾಗಿ ಸ್ವತಃ ಅಭ್ಯಾಸ ಮಾಡಬೇಕು. ಅದರ ಕುರಿತು ಸತ್ಯಾಸತ್ಯತೆಯನ್ನು ಅರಿಯಬೇಕು. ಅನಂತರವೇ ಅದರ ಪರಿಹಾರದ ನಿರ್ಧಾರ ಮಾಡಬೇಕು. ಗೊಂದಲಮಯ ಮಾನಸಿಕ ಸ್ಥಿತಿಯಲ್ಲಿ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದು.

2) ಅನುಭವದಿಂದ ಪಾಠ ಕಲಿಯಬೇಕು. ಯಶಸ್ಸಿನ ಗುಟ್ಟನ್ನು ಅರಿಯಲು ಸಮಯ ಬೇಕಾಗುತ್ತದೆ. ಹೇಳುವದು ಸುಲಭ ಆದರೆ ಆಚರಿಸುವದು ಕಷ್ಟ. ನುರಿತ ಭಾಷಣಕಾರನೇ ಆದರೂ ವಿರೋಧಿ ಮನೋಭಾವವನ್ನು, ಹೊಂದಿರುವ ಸಭೆಯನ್ನು ಶಾಂತಗೊಳಿಸಲಾರ. ನಮ್ಮ ವೈಫಲ್ಯಗಳೇ ನಮ್ಮ ಯಶಸ್ಸಿನ ಸೌಧದ ಇಟ್ಟಂಗಿಗಳಾಗಬೇಕು.

3) ಯಾವುದೇ ಅವಕಾಶ ತಾನಾಗಿ ಬಂದಾಗ ಅದನ್ನು ತಿರಸ್ಕರಿಬಾರದು. ಅದನ್ನು ಸದವಕಾಶವನ್ನಾಗಿ ಪರಿವರ್ತಿಸಬೇಕು. ಶಾಂತವಾಗಿದ್ದು ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸುವುದಾದಲ್ಲಿ ಮಾತ್ರ ಜ್ವಲಂತ ಭವಿಷ್ಯ ನಮ್ಮದಾಗುತ್ತದೆ.

ಶಾಸ್ತ್ರಿಗಳು ಹೇಳಿದ ಯಶಸ್ಸಿನ ಗುಟ್ಟು "ನಿಮ್ಮ ಗುರಿಯನ್ನು ತಲುಪಲು ನೀವೇ ಪ್ರಯತ್ನಿಸಬೇಕೇ ಹೊರತು ಇನ್ನೊಬ್ಬರೊಂದಿಗೆ ಚರ್ಚಿಸುವದರಿಂದ ಅದು ಸಾಧ್ಯವಾಗುವದಿಲ್ಲ".

ಈ ಎಲ್ಲ ಆದರ್ಶಗಳನ್ನು ಮುಂದೆ ಪಂಡಿತರು ತಮ್ಮ ಮೊದಲ ಪುಸ್ತಕ "ಹೌ ಆಯ್ ಬಿಗಿನ್"ದಲ್ಲಿ ವಿಶದವಾಗಿ ತಿಳಿಸಿದ್ದಾರೆ.

ಎಂ.ಪಿ. ಪಂಡಿತರ ಗಾಢವಾದ ಜ್ಞಾಪಕಶಕ್ತಿ ಮತ್ತು ಕಪಾಲಿ ಶಾಸ್ತ್ರಿಗಳು ಅವರನ್ನು ಎಷ್ಟೊಂದು ಪ್ರೀತಿಸುತ್ತಿದ್ದರು ಎನ್ನುವದಕ್ಕೆ ಒಂದು ಉದಾಹರಣೆ ಎಂದರೆ, ಒಮ್ಮೆ ಶ್ರೀ ಅರವಿಂದಾಶ್ರಮದಲ್ಲಿ ಕಪಾಲಿ ಶಾಸ್ತ್ರಿಗಳು ಕೆಲವು ಜಿಜ್ಞಾಸುಗಳ ಶಂಕೆಗಳಿಗೆ ಉತ್ತರಿಸುತ್ತಿದರು. ವೇದಗಳು 'ಶ್ರುತಿಗಳು' – ಅಂದರೆ ಯಾವುದೇ

ಬರವಣಿಗೆಯ ದಾಖಲೆ ಇಲ್ಲದೇ ಗುರುವಿನಿಂದ ಶಿಷ್ಯನಿಗೆ, ಬಾಯಿಯಿಂದ ಕಿವಿಗೆ ಕೇವಲ ಜ್ಞಾಪಕಶಕ್ತಿಯಿಂದಲೇ ಶತಶತಮಾನಗಳ ಕಾಲದಿಂದ ಊರ್ಜಿತವಾಗಿ ಬಂದವುಗಳು ಎನ್ನುವ ಬಗೆಗೆ ಸಂಶಯವಿತ್ತು. ಆಗ ಶಾಸ್ತ್ರಿಗಳು ಆಗಿನ ಋಷಿಮುನಿಗಳ "ಮೇಧಾಶಕ್ತಿ" ಅದ್ಭುತವಾಗಿದ್ದು, ಅವರೆಲ್ಲರೂ "ಏಕಖಂಡಗ್ರಾಹಿಗಳಾಗಿದ್ದರು ಎಂದು ಹೇಳಿದರೂ ಜಿಜ್ಞಾಸುಗಳಿಗೆ ಸಮಾಧಾನವಾಗಲಿಲ್ಲ. ಆಗ ಇವರೆಲ್ಲ ಸಂಶಯ ನಿವಾರಣೆಗೆ ಶಾಸ್ತ್ರಿಗಳು ಒಂದೇ ಪರಿಹಾರವೆಂದು ಯೋಚಿಸಿದರು. ಎಂ.ಪಿ. ಪಂಡಿತರು ಆಗಷ್ಟೇ ಸಮುದ್ರ ತೀರದ ಬೀಚ್ ರಸ್ತೆಯಲ್ಲಿ ವಾಯು ವಿಹಾರ ಮುಗಿಸಿ ಮನೆಗೆ ಮರಳಿದ್ದರು. ಅವರನ್ನು ಶಾಸ್ತ್ರಿಗಳು "ಇಂದಿನ ವರ್ತಮಾನವನ್ನು ಹೇಳು" ಎಂದರು.

ಮಾಧವ ಪಂಡಿತರು ನಿಂತಲ್ಲೇ ಶಿಲಾಮೂರ್ತಿಯಂತೆ ಸ್ತಬ್ಧರಾದರು. ಕಣ್ಣು ಮುಚ್ಚಿ ಒಂದು ಕ್ಷಣ ಧ್ಯಾನಸ್ಥರಾದರು. ನಂತರ ಅರ್ಧಘಂಟೆ ಮುಂಚೆ ತಾನು ಬೀಚ್ ರೋಡಿನಲ್ಲಿ ಹಚ್ಚಿದ್ದ ಧ್ವನಿವರ್ಧಕದಿಂದ ಕೇಳಿದ 'ಡಿಮೆಲೆಲೊ ರೇಡಿಯೋ' ವಾರ್ತಾ ಪ್ರಸಾರವನ್ನು ಒಂದು ಶಬ್ದವನ್ನೂ ಬಿಡದೇ ಅದೇ ಧಾಟಿ ಮತ್ತು ಧ್ವನಿಯಲ್ಲಿ ಹತ್ತು ನಿಮಿಷ ಕಾಲ ಪುನರುಚ್ಚರಿಸಿದರು. ಇದು ಅಲ್ಲಿ ನೆರೆದಿದ್ದ ಎಲ್ಲರನ್ನೂ ಆಶ್ಚರ್ಯ–ಚಕಿತರನ್ನಾಗಿಸಿತು, ಅವರ 'ಮೇಧಾಶಕ್ತಿ'ಯ ಬಗೆಗೆ ಇದ್ದ ಸಂಶಯ ಕ್ಷಣಮಾತ್ರದಲ್ಲಿ ದೂರವಾಗಿತ್ತು. ಹೀಗೆ ಮಾಧವ ಪಂಡಿತರ ಮೇಧಾಶಕ್ತಿ 'ಏಕಪಾಠಿ'ಯಾಗಿತ್ತು.

1950 ಅಗಸ್ಟ 15ರಂದು ಪಂಡಿತರ ಮೊಟ್ಟಮೊದಲ ಪುಸ್ತಕ "Grace of the great and other Essays' ಎಂಬ ಗ್ರಂಥ ಪ್ರಕಟವಾಯಿತು. ಅನಂತರ ಅವರು ಹಿಂತುರಿಗಿ ನೋಡದೇ ಸುಮಾರು 150 ಗ್ರಂಥಗಳನ್ನು ಆಂಗ್ಲ ಭಾಷೆಯಲ್ಲಿ ರಚಿಸಿದ್ದಾರೆ. ಅಷ್ಟೇ ಅಲ್ಲದೇ, 18–11–1973 ರಂದು ಶ್ರೀಮಾತಾ ನಿರ್ವಾಣದ ನಂತರ ಅವರು ಆಶ್ರಮದಿಂದ ಹೊರಟು ಜಗತ್ತಿನ ಮೂಲೆಮೂಲೆಗೂ ಹೋಗಿ ಶ್ರೀ ಅರವಿಂದ ತತ್ತ್ವಜ್ಞಾನದ ಮೇಲೆ ಬೆಳಕು ಚೆಲ್ಲುವಂತಹ ಭಾಷಣಗಳನ್ನು ಮಾಡಿದರು.

ಕಪಾಲಿ ಶಾಸ್ತ್ರಿಗಳು ಸಂಸ್ಕೃತದಲ್ಲಿ ಬರೆದ ಅನೇಕ ಗ್ರಂಥಗಳನ್ನು ಅವರು ಇಂಗ್ಲೀಷಿಗೆ ಭಾಷಾಂತರಿಸಿದರು. ಗೀತೆಯ ಮೇಲೆ ಭಾಷ್ಯ ಬರೆದರು. ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ'ಯನ್ನು ಹಿಂಜಿ ಹಿಂಜಿ ಅರ್ಥೈಸಿದರು. ಶ್ರೀ ಅರವಿಂದ ಫಿಲಾಸಾಫೀಯನ್ನು ಲೀಲಾಜಾಲವಾಗಿ ಅರ್ಥೈಸುವ ಪಂಡಿತರು, ಪಾಂಡಿಚೇರಿ ಆಶ್ರಮದ ಉತ್ತರಾಧಿಕಾರಿಯಾಗಿ ದೇಶವಿದೇಶಗಳಲ್ಲಿ ಅದರ

ಹಿರಿಮೆಯನ್ನು ಸಾರಿದರು. ಭಾರತೀಯ ಅಧ್ಯಾತ್ಮದ ಸುಗಂಧವನ್ನು ಜಗತ್ತಿನಾದ್ಯಂತ ಪಸರಿಸಿದರು. ಪಂಡಿತರ ತಮ್ಮ ಮನೆತನದ 'ಪಂಡಿತ' ಹೆಸರನ್ನು ನೈಜ ಅರ್ಥದಲ್ಲಿ ಸಾರ್ಥಕಗೊಳಿಸಿದರು.

ಹೀಗೆ ಆಜನ್ಮ ಬ್ರಹ್ಮಚಾರಿಯಾಗಿ ಉಳಿದು ತಮ್ಮ ಜೀವನವನ್ನೇ ಆಧ್ಯಾತ್ಮದ ಉತ್ಥಾನಕ್ಕಾಗಿ ಮೀಸಲಾಗಿಟ್ಟು ಶ್ರೀ ಅರವಿಂದ ತತ್ತ್ವಗಳನ್ನೂ, ಶ್ರೀಮಾತೆಯ ವಿಚಾರ ಬೋಧೆಯನ್ನೂ ಜಗತ್ತಿನಾದ್ಯಂತ ಪಸರಿಸುತ್ತ 1973 ರಿಂದ 1993ರ ವರೆಗೆ 20 ವರ್ಷಗಳ ಕಾಲ ಪಾಂಡಿಚೇರಿಯ 'ಪರಮ ಗುರು'ಗಳಾಗಿ ಈ ಕೇಂದ್ರವನ್ನು ದೇಶವಿದೇಶಗಳಲ್ಲಿಯೂ ಪ್ರಸಿದ್ಧಿಗೊಳಿಸಿದರು. ಈ ಅವಧಿಯಲ್ಲಿಯೇ ಅವರು 150ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದು; ಪ್ರಕಟಿಸಿದ್ದು. ಮಹರ್ಷಿ ಶ್ರೀ ಅರವಿಂದರ ಬೋಧನೆಗಳನ್ನು ಚಿರಸ್ಮರಣೀಯವಾಗುವಂತೆ ಮಾಡಿದ ಈ ಮಹಾನ್ ಚೇತನ 14–03–1993 ರಂದು ಪರಮಾತ್ಮನ ಪದತಲದಲ್ಲಿ ಲೀನವಾಯಿತು.

1978ರಲ್ಲಿ ಅವರನ್ನು ಶಿರಸಿಗೆ ಕರೆಸಲಾಗಿತ್ತು. ಅವರ ಪ್ರವಚನ ಕೇಳಿದ್ದು, ಅವರನ್ನು ಹುಟ್ಟಿದೂರಿನಲ್ಲಿಯೇ ಸನ್ಮಾನಿಸಿದ್ದು ಎಂದಿಗೂ ಮರೆಯಲಾರದ ಘಟನೆಯಾಗಿದೆ. ಶಿರಸಿಯಲ್ಲಿ ಅವರ ಮಹಾನ್ ವ್ಯಕ್ತಿತ್ವವನ್ನು ಯುವಜನತೆಗೆ ಪರಿಚಯ ಮಾಡಿಕೊಡಲು 'ಶ್ರೀ ಅರವಿಂದ ಅಭ್ಯಾಸ ಮಂಡಳಿ' ಇದೆ. ಶಿರಸಿ ತೋಟಗಾರ್ಸ ಹಾಸ್ಟೆಲ್‌ನಲ್ಲಿ ಶ್ರೀ ಅರವಿಂದ ಸಭಾಭವನದಲ್ಲಿ ಎಂ.ಪಿ. ಪಂಡಿತರ ಭಾವಚಿತ್ರವನ್ನು 06–07–1983 ರಂದು ಅನಾವರಣಗೊಳಿಸಲಾಗಿದೆ. ಶಿರಸಿ ಅರ್ಬನ್ ಬ್ಯಾಂಕ್ ವತಿಯಿಂದ 'ಒಂದು ಲಕ್ಷ ರೂಪಾಯಿಯ ಶಾಶ್ವತ ನಿಧಿ'ಯೊಂದನ್ನು ಸ್ಥಾಪಿಸಿ, ಪ್ರತಿವರ್ಷ 'ಮಾಧವ ಪಂಡಿತ ದತ್ತಿನಿಧಿ ಉಪನ್ಯಾಸ' ಏರ್ಪಡಿಸಲಾಗುತ್ತಿದೆ. ಎಂ.ಪಿ. ಪಂಡಿತರು ರಚಿಸಿರುವ 150 ಪುಸ್ತಕಗಳನ್ನು ಪಾಂಡಿಚೇರಿಯಿಂದ ತರಿಸಿ ಶಿರಸಿಯ 'ಎಂ.ಎ.ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ವಾಚನಾಲಯ'ದಲ್ಲಿ ಸಂಗ್ರಹಿಸಿ ಇಡಲಾಗಿದೆ. ಇದು ಎಂ.ಪಿ. ಪಂಡಿತರ ಹೆಸರನ್ನು ಅಜರಾಮರ–ಗೊಳಿಸಲು ಶಿರಸಿಯವರ ಚಿಕ್ಕ ಕೊಡುಗೆಯಾಗಿದೆ.

---

**ಕೃಪೆ:** "ಧ್ಯೇಯನಿಷ್ಠ ಪತ್ರಕರ್ತ" ದಿನಪತ್ರಿಕೆ ಶಿರಸಿಯಲ್ಲಿ ಇದು ಲೇಖನ ಸ್ವರೂಪದಲ್ಲಿ ಪ್ರಕಟವಾಗಿತ್ತು. ಶ್ರೀ ವಾಸುದೇವ ಸೋಂದೆಯವರು ಶಿರಸಿ ಅರ್ಬನ್ ಬ್ಯಾಂಕ್‌ನ ಅಧ್ಯಕ್ಷರಾಗಿದ್ದರು. ಲೇಖಕರೂ ಹೌದು. ಅವರು 2012ರಲ್ಲಿ ಪ್ರಕಟಿಸಿದ 'ನೆನಪಿನ ಖಜಾನೆ' ಎನ್ನುವ ಪುಸ್ತಕದಲ್ಲಿ ಇದು ದಾಖಲಾಗಿದೆ. [ಸಂ]



ಈ ಲೋಕ–ಕ್ಷಮತೆ ಪರಿಪೂರ್ಣ–ಶಕ್ತಿ ಪಾಲಿತವು ಲೀಲೆಯೊಳಗೆ
ಸರ್ವಶಕ್ತಿಧರ ನಿತ್ಯ–ಮಂಗಲದ ಶಿವನಧಿಷ್ಠಾದೊಳಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 10 ಪುಟ 240)**

**ಫೋಟೊ: ಇಮೇಜಿಂಗ್ ಸಾವಿತ್ರಿ**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಬಲು ಮುಗ್ಧನಿವನು ಅಜ್ಞಾತ ಸರ್ವ ಸರ್ವಸ್ವ ಅವನಿಗಾಗ
ಆದರೂ ಪರಮ ತುಡಿತದಲಿ ಇವನು ಸರ್ವಸ್ವ ತಿಳಿಯಲೀಗ,
ಉದಿತಗೊಳ್ಳುತಿರೆ ಸತತ ಯತ್ನವದು ಅಂಕರದಿ ಅರಳುವಲ್ಲಿ
ಮಂದ್ರ ಸ್ಪಂದನದ ಕುತುಹಲದ ಹೆಜ್ಜೆ ಚಿಂತನೆಯ ವ್ಯಾಪ್ತಿಯಲ್ಲಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 10 ಪುಟ 243)**
**ಫೋಟೊ: ಇಮೇಜಿಂಗ್ ಸಾವಿತ್ರಿ**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.